ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ

ಸಂಪುಟ 27 ಸಂಚಿಕೆ 08 ಫೆಬ್ರವರಿ 20, 2005 ಬೆಲೆ ರೂ. 3.00




'ಸಾಕಿ' ಸಾಯಬೇಕಿರಲಿಲ್ಲ





ಕರ್ನಾಟಕದಲ್ಲಿ ಉರಿ... ಉರಿ...





ಲ್ಯಾಟಿನ್ ಅಮೆರಿಕಾದಲ್ಲಿ ಎಡಪಂಥೀಯ ಅಲೆ

ಅಂಬಾನಿ ರಿಲೆಯನ್ಸ್ ಬಿಜೆಪಿ ಮಹಾಜನ್ 233 ಕೋಟಿ ಹಗರಣ ಬಯಲು

- ಟೆಲಿಕಾಂ - ವಿದೇಶಿ ಬಂಡವಾಳ ಹೂಡಿಕೆಗೆ ಪ್ರತಿಭಟನೆ
- ಕರ್ನಾಟಕ : ಸಂಕಷ್ಟಗಳಿಗೆ ಕಾರಣಗಳೇನು ?
- ವಿದ್ಯುತ್ ಖಾಸಗೀಕರಣ : ಭಾರಿ ಪ್ರತಿಭಟನೆ

ಕಳೆದ ಮೂರು ವರುಷಗಳಲ್ಲಿ ಜನತೆ ಅನುಭವಿಸಿದ ಸಂಕಷ್ಟಗಳು ಹೇಳತೀರದು. ಇದಕ್ಕೆ ಕಾರಣಗಳೇನು? ಮರೆ ಮಾಚಿದ ಮೂಲ ಅಂಶಗಳತ್ತ ಸಿಪಿಐ(ಎಂ) ರಾಜ್ಯ ಸಮ್ಮೇಳನದ ವರದಿಯ ವೈಜ್ಞಾನಿಕ ವಿಶ್ಲೇಷಣೆ ಇಲ್ಲಿದೆ.

ಕರ್ನಾಟಕದ ಆರ್ಥಿಕ ಸ್ಥಿತಿ ಈ ಸಂಕಷ್ಟಗಳಿಗೆ ಕಾರಣವೇನು?

ಅತ್ಯಂತ ತೀವ್ರ ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ಕರ್ನಾಟಕದ ದುಡಿಯುವ ಜನತೆ ಅದರಲ್ಲಿಯೂ ಬಹುದೊಡ್ಡ ಭಾಗವಾದ ರೈತರು ಹಾಗೂ ಕೃಷಿಕೂಲಿಕಾರರು ಅನುಭವಿಸಿದ ಸಂಕಟಗಳು ಹೇಳತೀರದು. 5 ವರ್ಷಗಳಿಂದ ನಿರಂತರವಾದ ಆತ್ಮಹತ್ಯೆಗಳ ಸರಮಾಲೆ - 2003 ರಲ್ಲಿ ಅತ್ಯಂತ ವ್ಯಾಪಕ ಹಾಗೂ ಗರಿಷ್ಠ ಮಟ್ಟವನ್ನು ಮುಟ್ಟಿದುದು, ಕೂಲಿಕಾರರ ಹಸಿವಿನ ಸಾವುಗಳು - ಇಡೀ ರೈತಾಪಿ ಜನತೆ ಅನುಭವಿಸಿದ ಕೋಟಲೆಗಳ ಚಿಹ್ನೆಯಾಗಿತ್ತು. ಇವುಗಳ ಜೊತೆಗೇ ಕೈಗಾರಿಕೆಗಳ ಬಿಕ್ಕಟ್ಟು, ಕಾರ್ಮಿಕರ ವೇತನ, ಕೆಲಸದ ಪರಿಸ್ಥಿತಿ ಹಾಗೂ ಜೀವನದ ಮೇಲೆ ಹೇರಲ್ಪಟ್ಟ ಒತ್ತಡಗಳು ಗಣನೀಯವಾದುವು. ಮಧ್ಯಮವರ್ಗ, ವಿದ್ಯಾರ್ಥಿಗಳು, ಯುವಜನತೆ, ಮಹಿಳೆಯರೂ ಸೇರಿದಂತೆ ದುಡಿಯುವ ಜನರ ಎಲ್ಲ ವಿಭಾಗಗಳೂ ಕೂಡ ತೀವ್ರ ಸಂಕಷ್ಟಗಳಿಗೆ ಗುರಿಯಾದರು.

ಈ ಸಂಕಷ್ಟಗಳಿಗೆ ಮುಖ್ಯ ಕಾರಣಗಳಿವು.

- 1991 ರಿಂದ ಜಾರಿಗೆ ತಂದಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳ ಒಟ್ಟು ಪರಿಣಾಮ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಅತಿವೇಗದಿಂದ ಹರಿಬಿಟ್ಟ ಮುಕ್ತ ಆಮದು ನೀತಿಗಳು, ಅವುಗಳಿಂದ ತೀವ್ರಗೊಂಡ ಕೃಷಿ ಬಿಕ್ಕಟ್ಟು.
- 3 ವರ್ಷಗಳ ಕಾಲವೂ ಕಾಡಿದ ತೀವ್ರಬರಗಾಲ-ಅದರಿಂದುಂಟಾದ ಕೃಷಿ ಉತ್ಪಾದನೆ, ವಿದ್ಯುತ್ ಉತ್ಪಾದನೆಯಲ್ಲಿ ಕೊರತೆ, ಕುಡಿಯುವ ನೀರು, ಅಂತರ್ಜಲ ಮಟ್ಟದ ಸಮಸ್ಯೆಗಳು, ತೀವ್ರಗೊಂಡ ಜಲವಿವಾದಗಳು.
- ನೇರವಾಗಿ ವಿದೇಶಿ ಆಮದುಗಳ ಪರಿಣಾಮವಾಗಿ ಹಾಗೂ ಜಾಗತೀಕರಣ, ಉದಾರೀಕರಣ ನೀತಿಗಳ ಪರಿಣಾಮವಾಗಿ ಹಾಗೂ ಕೃಷಿ ಬಿಕ್ಕಟ್ಟು ಮತ್ತು ಬರಗಾಲದ ಕಾರಣದಿಂದಾಗಿ ಕುಗ್ಗಿದ ಮಾರುಕಟ್ಟೆಯ ಪರಿಣಾಮವಾಗಿ ಕೈಗಾರಿಕಾಬಿಕ್ಕಟ್ಟು, ಕಾರ್ಮಿಕರ ಮೇಲೆ ತೀವ್ರ ಒತ್ತಡ, ಕೃಷಿಯೇತರ ಕೆಲಸದ ಮೇಲೆ ಅವಲಂಬಿಸಿದ ಜನಸಂಖ್ಯೆಯ ಹೆಚ್ಚಳ.
- ಕೇಂದ್ರ ಸರ್ಕಾರ ಹಾಗೂ ಕರ್ನಾಟಕದ ಸರ್ಕಾರಗಳಿಂದ ಜನತೆಯ ಸಂಕಟಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ. ಬಂಡವಾಳದ ಆಹ್ವಾನಕ್ಕೆ ಐಟಿ, ಬಿಟಿಗಳಿಗೆ, ಬೆಂಗಳೂರಿನ ಮೂಲಭೂತ ಸೌಕರ್ಯಗಳಿಗೆ ಮಾತ್ರ ಲಕ್ಷ್ಯ.
- ರಾಜ್ಯ ಸರ್ಕಾರದ ಆರ್ಥಿಕ ಬಿಕ್ಕಟ್ಟುಗಳು, ವಿಶ್ವಬ್ಯಾಂಕಿನಿಂದ ಪಡೆದ ಆರ್ಥಿಕ ಸಂರಚನಾ ಹೊಂದಾಣಿಕೆಯ ಸಾಲ ಮತ್ತದರ ಶರತ್ತುಗಳಿಗೆ ಅನುಸಾರವಾಗಿ ರಾಜ್ಯದ ಆರ್ಥಿಕ ನೀತಿ.
- ಹೆಚ್ಚಿದ ಸಾಮಾಜಿಕ ಹಾಗೂ ಪ್ರಾದೇಶಿಕ ಅಸಮಾನತೆ. ಸಂಕುಚಿತಗೊಂಡ ಶಿಕ್ಷಣ, ಉದ್ಯೋಗವಕಾಶಗಳು, ಹೆಚ್ಚಿದ ಶುಲ್ಕಗಳು, ಪ್ರಾದೇಶಿಕ ವಾದಗಳ ಬೆಳವಣಿಗೆ

ಜಾಗತೀಕರಣದ ಪರಿಣಾಮವಾಗಿ ಕೃಷಿಯಲ್ಲಿ ಹೆಚ್ಚು ಬಂಡವಾಳಶಾಹಿ ಬೆಳವಣಿಗೆಯಾಗುತ್ತಿದೆ. ಭೂಕೇಂದ್ರೀಕರಣವೂ ಹೆಚ್ಚುತ್ತಿದೆ. ಹಾಗೆಯೇ ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ರೈತರೂ ಭೂಮಿ ಮಾರಿ ಅಥವಾ ಒತ್ತೆಯಿಟ್ಟು ಕೂಲಿಕಾರರಾಗುತ್ತಿದ್ದಾರೆ.

ಕಾರ್ಷಿಕ ಬಿಕ್ಕಟ್ಟು : ರೈತರ ಆತ್ಮಹತ್ಯೆಗಳು ಹಾಗೂ ಹಸಿವಿನ ಸಾವುಗಳು

17ನೇ ರಾಜ್ಯ ಸಮ್ಮೇಳನಕ್ಕೆ ಮೊದಲೇ ಆರಂಭವಾದ ಆತ್ಮಹತ್ಯೆಗಳ ಸರಣಿ ಬೀದರ್, ಗುಲ್ಬರ್ಗಾಗಳಿಂದ ದಕ್ಷಿಣ ಕರ್ನಾಟಕ, ಮಧ್ಯ ಕರ್ನಾಟಕಗಳ ಪ್ರದೇಶಗಳಿಗೆ ಹಬ್ಬಿತು. ಮಂಡ್ಯ, ಹಾಸನ, ಹಾವೇರಿ ಜಿಲ್ಲೆಗಳಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆಗಳಿಗೆ ಬಲಿಯಾದರು (ಪಟ್ಟಿ ನೋಡಿ). ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಹಸಿವಿನ ಸಾವುಗಳೂ ಸಂಭವಿಸಿದವು. ವಾಣಿಜ್ಯೀಕರಣಕ್ಕೊಳಗಾದ ಕೃಷಿ, ಕೃಷಿಯ ಫಸಲುಗಳಿಗೆ ಬೆಲೆ ಕುಸಿತ, ಉತ್ಪಾದನಾ ವೆಚ್ಚದ ಹೆಚ್ಚಳ, ಬರಗಾಲದಿಂದಾಗಿ ಕುಸಿದ ಅಂತರ್ಜಲ, ಒಣಗಿದ ತೋಟಗಳು ಮತ್ತು ನೀರಾವರಿಗಾಗಿ ಆಳವಾದ ಬೋರ್‌ವೆಲ್‌ಗಳ ಕೊರತೆ, ಕುಗ್ಗಿದ ಕೃಷಿ ಸಾಲ ಲಭ್ಯತೆಗಳು, ಖಾಸಗಿ ಲೇವಾದೇವಿಗಾರರಿಂದ ದುಬಾರಿ ಬಡ್ಡಿಯ ಸಾಲಗಳು, ಅವರಿಂದ ವಸೂಲಾತಿಯ ಒತ್ತಡ, ಇವು ರೈತರ ಆತ್ಮಹತ್ಯೆಯ ಮುಖ್ಯ ಕಾರಣಗಳು.

ಕೃಷಿ ಬಿಕ್ಕಟ್ಟು ಹಾಗೂ ಬರಗಾಲದ ಪರಿಣಾಮಗಳು ರಾಜ್ಯದ ಎಲ್ಲ ಪ್ರದೇಶಗಳಲ್ಲಿಯೂ ಒಂದೇ ಸಮನಾಗಿಲ್ಲ. ಕರ್ನಾಟಕದ ಮೂರು ಕಾರ್ಷಿಕ ಸಂಬಂಧಗಳ ಆಧಾರದಲ್ಲಿ ಪಕ್ಷ 1988 ರಲ್ಲಿ ಯೇ ಗುರುತಿಸಿದ ಮೂರು ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಹಾಗೂ ಪ್ರಮಾಣದಲ್ಲಿ ಕಾರ್ಷಿಕ ಬಿಕ್ಕಟ್ಟು ಪರಿಣಾಮ ಬೀರಿದೆ. ಮಧ್ಯಮ ವರ್ಗದ ರೈತರು ಹೆಚ್ಚಾಗಿರುವ(ನೀರಾವರಿ ಪ್ರದೇಶಗಳ ಜನರೂ ಸೇರಿದಂತೆ) ತೀವ್ರ ಬರಗಾಲಗಳನ್ನು ಎದುರಿಸದ ಹಾಗೂ ಬರಗಾಲಗಳಲ್ಲಿ ಈ ಹಿಂದೆ ಗುಳೇ, ಕೂಲಿಕಾರರಾಗಿ ವಲಸೆ ಹೋಗುವ ಅಭ್ಯಾಸವಿಲ್ಲದ ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕದ ಜಿಲ್ಲೆಗಳಿಂದ ಹೆಚ್ಚು ರೈತರು ಆತ್ಮಹತ್ಯೆಗೊಳಗಾಗಿದ್ದಾರೆ. ಕೃಷಿ ಬಿಕ್ಕಟ್ಟು ಹಾಗೂ ಬರಗಾಲಗಳ ಪರಿಣಾಮವಾಗಿ, ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳಿಗೆ ಹಣ ಕಡಿತ, ಕೂಲಿಗಾಗಿ ಕಾಳು ಯೋಜನೆಯಲ್ಲಿನ ವ್ಯಾಪಕ ಭ್ರಷ್ಟಾಚಾರ, ಸರ್ಕಾರಿ ಕಾಮಗಾರಿಗಳಲ್ಲಿ ಯಂತ್ರಗಳ ಬಳಕೆಗಳ ಕಾರಣವಾಗಿ ಕೃಷಿ ಕೂಲಿಕಾರರ ವಲಸೆ ವಿಪರೀತ ಹೆಚ್ಚಾಯಿತು. ಸಣ್ಣ ರೈತರು, ಕೆಲವೊಮ್ಮೆ ಮಧ್ಯಮ ರೈತರೂ ಕೂಡಾ ವಲಸೆ ಹೋಗುವ ಪರಿಸ್ಥಿತಿ ಉಂಟಾಯಿತು. ಹಾಗೆ ವಲಸೆ ಹೋದ ನಗರಗಳಲ್ಲಿಯೂ ಉದ್ಯೋಗ ಸಿಗದೆ ಮಹಿಳೆಯರು ಗಣನೀಯ ಪ್ರಮಾಣದಲ್ಲಿ ವೈಶ್ಯಾವೃತ್ತಿ ಬದುಕುವ ಪರಿಸ್ಥಿತಿ ಉಂಟಾಯಿತು.

ಆದರೂ ತೆಂಗು, ಅಡಿಕೆ, ಕಾಫಿ ಬೆಲೆಗಳ ಬೆಲೆ ಕುಸಿತ ಗಣನೀಯವಾಗಿ ಪರಿಣಾಮ ಬೀರಿದರೂ ಕೂಡಾ ಕರಾವಳಿ ಹಾಗೂ ಘಟ್ಟದ ಜಿಲ್ಲೆಗಳಲ್ಲಿ ಆತ್ಮಹತ್ಯೆಯ ಪ್ರಕರಣಗಳು ಕಡಿಮೆ.

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ
(ವಿವಿಧ ಕಾರಣಗಳಿಗಾಗಿ)

1998-1999	2,039
1999-2000	2,379
2000-2001	2,630
2001-2002	2,505
2002-2003	2,340
	11,893

(ಡಿಸೆಂಬರ್ 13 ರಂದು ರಾಜ್ಯ ಸಭೆಯಲ್ಲಿ ಕೃಷಿ ಸಚಿವರು ನೀಡಿದ ಉತ್ತರದಿಂದ)


ದುಡಿಮೆಯ ಮೇಲೆ ಪರಿಣಾಮ :

ಕಾರ್ಷಿಕ ಬಿಕ್ಕಟ್ಟಿನ ಈ ಪರಿಣಾಮ ದುಡಿಯುವ ಜನತೆ ಅವಲಂಬಿಸಿದ ಉದ್ಯೋಗದ ಮೇಲೆ ಗಂಭೀರ ಪರಿಣಾಮಗಳನ್ನುಂಟು ಮಾಡಿದೆ. ಜಾಗತೀಕರಣದ ಪರಿಣಾಮವಾಗಿ ಕೃಷಿಯಲ್ಲಿ ಹೆಚ್ಚು ಬಂಡವಾಳಶಾಹಿ ಬೆಳವಣಿಗೆಯಾಗುತ್ತಿದೆ. ಭೂಕೇಂದ್ರೀಕರಣವೂ ಹೆಚ್ಚುತ್ತಿದೆ. ಹಾಗೆಯೇ ಕೃಷಿ ಬಿಕ್ಕಟ್ಟಿನ ಪರಿಣಾಮವಾಗಿ ರೈತರೂ ಭೂಮಿ ಮಾರಿ ಅಥವಾ ಒತ್ತೆಯಿಟ್ಟು ಕೂಲಿಕಾರರಾಗುತ್ತಿದ್ದಾರೆ.

ಕೃಷಿಯಲ್ಲಿ ಕೆಲಸದ ಕಡಿತದಿಂದಾಗಿ ಕೃಷಿ ಕೂಲಿಕಾರರು ಕಟ್ಟಡ ನಿರ್ಮಾಣ ಮೊದಲಾದ ಅಸಂಘಟಿತ ಉದ್ಯೋಗಗಳಲ್ಲಿ ತೊಡಗಿದ್ದಾರೆ. ಕೈಗಾರಿಕೆಗಳ ಮುಚ್ಚುವಿಕೆ, ಕೈಗಾರಿಕೆಗಳ ಉದ್ಯೋಗದಲ್ಲಿ ದಿನಗೂಲಿ, ಗುತ್ತಿಗೆ ಮುಂತಾದವು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆ ಗಣನೀಯವಾಗಿ ಬೆಳೆದಿದೆ. ಅಸಂಘಟಿತ ಕಾರ್ಮಿಕರ ಸಂಘಟನೆಗೆ ಹೆಚ್ಚು ಒತ್ತು ನೀಡಬೇಕಾಗಿದೆ.

ಕೈಗಾರಿಕಾ ರಂಗ

ಕರ್ನಾಟಕದ ಹಲವಾರು ಕೈಗಾರಿಕೆಗಳು ಬಿಕ್ಕಟ್ಟಿನಲ್ಲಿವೆ. ಹೆಂಚು, ಬೀಡಿ, ಕೈಮಗ್ಗ, ಪವರ್‌ಲೂಂ ಇವುಗಳಲ್ಲಿ ಪ್ರಮುಖವಾದವು. ಈ ಉದ್ದಿಮೆಗಳಲ್ಲಿರುವ ಅಸಂಖ್ಯಾತ ಕಾರ್ಮಿಕರು ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಇದರಲ್ಲಿ ಕೈಮಗ್ಗ ನೇಕಾರರಿಗೆ ಸರ್ಕಾರದ ಪ್ಯಾಕೇಜ್ ಘೋಷಣೆ ಮಾಡಿದ್ದರೂ ನೈಜ ಪರಿಹಾರಕ್ಕಾಗಿ ಪ್ರಾಮಾಣಿಕ ಪ್ರಯತ್ನವಾಗಿಲ್ಲ. ಈ ಕೈಗಾರಿಕೆಗಳ ಕಾರ್ಮಿಕರಿಗೆ ವೇತನ, ತುಟ್ಟಿಭತ್ಯೆ ಪ್ರಶ್ನೆಗಳು ನೆನೆಗುದಿಗೆ ಬಿದ್ದಿವೆ. ಸಣ್ಣ ಕೈಗಾರಿಕೆಗಳ ಮೀಸಲಾತಿ ಕಡಿತವಾಗಿರುವುದರಿಂದ ಅಗರಬತ್ತಿಯಂತಹ ಅನೇಕ ಉದ್ಯಮಗಳಿಗೆ, ಚಿಲ್ಲರೆ ಮತ್ತು ಸಗಟು ವ್ಯಾಪಾರಗಳಲ್ಲಿ ದೊಡ್ಡ ಬಂಡವಾಳಿಗರು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶವಾಗಿದೆ. ಕೃಷಿ ಬಿಕ್ಕಟ್ಟಿನಿಂದಾಗಿ 2002 ಹಾಗೂ 2003 ರಲ್ಲಿ ಕೈಗಾರಿಕಾ ಉತ್ಪನ್ನಗಳ ಮಾರಾಟ ಕುಗ್ಗಿ ಕೈಗಾರಿಕೆಗಳು ಸಾಕಷ್ಟು ತೊಂದರೆಯನ್ನನುಭವಿಸಬೇಕಾಯಿತು.



ವಿದೇಶಿ ಆಮದುಗಳಿಂದಾಗಿ ಇಂಜಿನಿಯರಿಂಗ್, ಬಳಕೆ ಸರಕುಗಳ ಕೈಗಾರಿಕೆಗಳಲ್ಲಿ ವೇತನದ ವೆಚ್ಚವನ್ನು ತಗ್ಗಿಸಲು ತೀವ್ರ ಒತ್ತಡ ಬಿದ್ದಿದೆ. ಇವುಗಳಿಂದಾಗಿ ಗುತ್ತಿಗೆ, ಹೊರಗುತ್ತಿಗೆ, ದಿನಗೂಲಿಗಳ ಮೂಲಕ ಉತ್ಪಾದಿಸುವ ವಿಧಾನವನ್ನು ಹೇರಲಾಗುತ್ತಿದೆ. ದೊಡ್ಡ ಕೈಗಾರಿಕೆಗಳಲ್ಲಿಯೂ ಖಾಯಂ ಕೆಲಸಗಾರರ ಸಂಖ್ಯೆ ಕುಸಿಯುತ್ತಿದೆ. ಉತ್ಪಾದನೆಯ ಪ್ರಮುಖ ಆಧಾರ ಗುತ್ತಿಗೆ, ದಿನಗೂಲಿ ಕಾರ್ಮಿಕರಾಗುತ್ತಿದ್ದಾರೆ. ಸರ್ಕಾರಿ ರಂಗದಲ್ಲಿ ಗೌರವಧನದ ಹೆಸರಿನಲ್ಲಿ ಅಥವಾ ಅಲ್ಪಕಾಲಿಕ ಸೇವೆಗಳಲ್ಲಿ ನೇಮಕಾತಿ ಹೆಚ್ಚುತ್ತಿದೆ. ಇಂತಹ ಧಾಳಿಗಳ ಪರಿಣಾಮವಾಗಿ ಕಾರ್ಮಿಕರಲ್ಲಿ ಹೋರಾಟ ಮಾಡುವ ಹಿಂಜರಿಕೆಯನ್ನು ಕಾಣಬಹುದು. ಸಾರ್ವಜನಿಕ ವಲಯದ ಕೈಗಾರಿಕೆಗಳಲ್ಲಿ ಹಿಂದಿನ ಸಮ್ಮೇಳನದಲ್ಲಿ ಚರ್ಚಿಸಿದಂತೆ ಕೋಲಾರ ಚಿನ್ನದ ಗಣಿ ಮುಚ್ಚುವ ಹಂತದಲ್ಲಿದೆ. ಎಚ್.ಎಂ.ಟಿ., ಐಟಿಐ ಮುಂತಾದವು ಬಿಕ್ಕಟ್ಟಿನಲ್ಲಿವೆ. ಬಿಇಎಲ್, ಎಚ್.ಎ.ಎಲ್. ಹೊಸ ಮಾರ್ಗಗಳನ್ನು ಹುಡುಕಿಕೊಂಡು ಲಾಭದಾಯಕ ಹಾದಿಯಲ್ಲಿವೆ.

ವಿಶ್ವದ ಆರ್ಥಿಕ ಪರಿಸ್ಥಿತಿಯಲ್ಲಿನ ಸ್ವಲ್ಪ ಬದಲಾವಣೆಗಳಿಂದ ವಸ್ತ್ರ ಮತ್ತು ಸಿದ್ಧ ಉಡುಪಿನ ಮಾರಾಟದಲ್ಲಿ ಕೋಟಾ ಪದ್ಧತಿ 2005 ರ ಜನವರಿಗೆ ರದ್ದಾಗುತ್ತಿರುವುದರಿಂದ ಗಾರ್ಮೆಂಟ್ಸ್, ವಾಹನಗಳ ತಯಾರಿಕೆ, ಮೋಟಾರ್ ಬಿಡಿ ಭಾಗಗಳು, ಕಬ್ಬಿಣ ಮೊದಲಾದ ಲೋಹಗಳ ಗಣಿಗಾರಿಕೆ, ಉಕ್ಕು, ಸಿಮೆಂಟ್, ಇತ್ಯಾದಿ ಕೈಗಾರಿಕೆಗಳು ಸುಸ್ಥಿತಿಯಲ್ಲಿವೆ. ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನಗಳೂ ಆರಂಭವಾಗಿವೆ.

ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನಾಧಾರಿತ ಸೇವಾರಂಗ

ಇಂದು ಕರ್ನಾಟಕದಲ್ಲಿ ಮುನ್ನಡೆಯಲ್ಲಿರುವ ಕ್ಷೇತ್ರವೆಂದರೆ ಮಾಹಿತಿ ತಂತ್ರಜ್ಞಾನ ಕ್ಷೇತ್ರ. ಸಾಫ್ಟ್‌ವೇರ್ ರಫ್ತಿನಲ್ಲಿ ಬೆಂಗಳೂರು ಭಾರತದ ಬೇರೆ ಯಾವುದೇ ನಗರಕ್ಕಿಂತಲೂ 3-4 ಪಟ್ಟು ಮುಂದಿದೆ. ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ವಿಜ್ಞಾನಗಳಲ್ಲಿ ಇಂಜಿನಿಯರಿಂಗ್ ಪದವಿ ಪಡೆದವರಿಗೆ ನೌಕರಿ ನೀಡುವ ಈ ಉದ್ಯಮ ಕರ್ನಾಟಕದ ಬೇರೆ ಬೇರೆಡೆಗಳಿಂದ ಭಾರತದ ಬೇರೆ ಬೇರೆ ಕಡೆಗಳಿಂದ ತಂತ್ರಜ್ಞರನ್ನು ಪಡೆದುಕೊಳ್ಳುತ್ತಿದೆ. ಜಗತ್ತಿನ ಪ್ರಮುಖ ಉದ್ಯಮಗಳು ಇಲ್ಲಿ ತಮ್ಮ ಶಾಖೆಗಳನ್ನು ತೆರೆದಿರುವುದರಿಂದ ವಿದೇಶಿ ತಂತ್ರಜ್ಞರು ಗಮನಾರ್ಹ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಮಾಹಿತಿ ತಂತ್ರಜ್ಞಾನಾಧಾರಿತ ಉದ್ದಿಮೆಗಳಾಗಿ ಹಲವು ರೀತಿಯ ಉದ್ಯೋಗಗಳು ಬೆಳೆಯುತ್ತಿವೆ. ಜಗತ್ತಿನ ಮುಂದುವರೆದ ದೇಶಗಳ ದೊಡ್ಡ ಕಂಪನಿಗಳ ಲೆಕ್ಕಪತ್ರಗಳು, ಬಳಕೆದಾರರ ದೂರುಗಳನ್ನು ಸ್ವೀಕರಿಸುವ ಕಾಲ್‌ಸೆಂಟರ್‌ಗಳು, ಅವುಗಳ ಮುದ್ರಣದ ಕೆಲಸಗಳು, ವೈದ್ಯಕೀಯ ದಾಖಲೆಗಳು ಇತ್ಯಾದಿ ಕೆಲಸಗಳು ಇಂದು ಹೆಚ್ಚುಹೆಚ್ಚಾಗಿ ಬೆಳೆಯುತ್ತಿವೆ. ಸಂಶೋಧನೆ, ಅರೆ ಸಂಶೋಧನೆಗಳ ಕೆಲಸಗಳು ಕೂಡ ಇಂದು ಭಾರತಕ್ಕೆ ಬರುತ್ತಿರುವಾಗ ಬೆಂಗಳೂರು ಈ ಉದ್ದಿಮೆಗಳ ಕೇಂದ್ರವಾಗಿ ಬೆಳೆಯುತ್ತಿದೆ. ಕರ್ನಾಟಕದಲ್ಲಿ ಈ ಉದ್ದಿಮೆ ಬೆಂಗಳೂರಿನಲ್ಲಿಯೇ ಕೇಂದ್ರೀಕರಿಸಿದರೂ ಮಂಗಳೂರು, ಮೈಸೂರು, ಹುಬ್ಬಳ್ಳಿಗಳ ಕಡೆಗೆ ನಿಧಾನವಾಗಿ ವಿಸ್ತರಿಸುತ್ತಿದೆ. ಕಳೆದ ಸಮ್ಮೇಳನದ ಸಮಯದಲ್ಲಿದ್ದ 7.500 ಕೋಟಿ ರೂ. ಗಳ ವಹಿವಾಟು 2003-04 ರಲ್ಲಿ 18,100 ಕೋಟಿ ರೂ. ಗಳಿಗೇರಿದೆ. ಸುಮಾರು 1,50,000 ಕ್ಕೂ ಹೆಚ್ಚು ಉದ್ಯೋಗಿಗಳು ಇಂದು ಕೆಲಸ ಮಾಡುತ್ತಿದ್ದಾರೆ.

ಈ ಉದ್ಯೋಗಗಳ ಬೆಳವಣಿಗೆಯ ಫಲವಾಗಿ ಹೊಟೆಲ್ ಉದ್ಯಮ, ಮನರಂಜನಾ ಉದ್ಯಮ, ವಾಹನಗಳ ಮಾರಾಟ, ಮನೆಗಳ ಮತ್ತು ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ಹೆಚ್ಚುತ್ತಿದೆ. ಬೆಂಗಳೂರಿನ ಜನದಟ್ಟಣೆ ಹಾಗೂ ವಾಹನ ದಟ್ಟಣೆ ಅರಾಜಕವಾಗಿ ಏರುತ್ತಿದೆ. ಅತಿಭೋಗದ ವೈಭವದ ಜೀವನಶೈಲಿ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆ ಹೆಚ್ಚುತ್ತಿದೆ. (ಒಂದು ಕೋಟಿಯಿಂದ 2.5 ಕೋಟಿ ರೂ.ಗಳಷ್ಟು ದುಬಾರಿ ಬೆಲೆಯ ಫ್ಲಾಟ್‌ಗಳೂ ಇವೆ)

ಆದರೆ ಇವೆಲ್ಲಾ ಮಾಹಿತಿ ತಂತ್ರಜ್ಞಾನದ ಉದ್ಯೋಗಗಳಲ್ಲಿ ಮಾತ್ರ. ಅದೇ ಮಾಹಿತಿ ತಂತ್ರಜ್ಞಾನಾಧಾರಿತ ಕಛೇರಿ ಕೆಲಸಗಳಲ್ಲಿ ಕಡಿಮೆ ವೇತನದಲ್ಲಿ ಅತಿ ಹೆಚ್ಚು ಕಾಲ ತೊತ್ತಿನಂತೆ ದುಡಿಯುವುದೂ ಕೂಡ ಇದೆ. ಇವರಿಗೆ ಕಾರ್ಮಿಕ ಕಾನೂನುಗಳ ರಕ್ಷಣೆಯೂ ಇಲ್ಲದೇ ಕಷ್ಟಕ್ಕೊಳಗಾಗಿದ್ದಾರೆ. ಇಂಗ್ಲೀಷ್ ಶಿಕ್ಷಣದ ಮೇಲೆ ಒತ್ತು ಇರುವ ಈ ಉದ್ಯೋಗಗಳಿಂದ ಕನ್ನಡ ಮಾಧ್ಯಮದ ಕಲಿಕೆಗೆ, ಕನ್ನಡ ಸಾಹಿತ್ಯ-ಸಂಸ್ಕೃತಿಯ ಒಳ್ಳೆಯ ಅಭಿರುಚಿಗೆ ಕುಂದಾಗುತ್ತದೆ.

ಕರ್ನಾಟಕಕ್ಕೆ ಬಂಡವಾಳದ ಹರಿವಿನಲ್ಲಿ ಈ ನಾಲ್ಕು ವರ್ಷಗಳಲ್ಲಿ ಗಣನೀಯವಾದ ಇಳಿಕೆಯಾಗಿದೆ.

(ಸಶೇಷ)


ಕರ್ನಾಟಕದಲ್ಲಿ ಉರಿ... ಉರಿ....

ಚಿಕ್ಕಮಗಳೂರಿನ ಬಲಿಗೆ ಕಾಡಿನಲ್ಲಿ ನಕ್ಸಲೀಯ ನಾಯಕ ಸಾಕೇತ್ ರಾಜನ್ ಮತ್ತು ಶಿವಲಿಂಗು ರವರು ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದ್ದಕ್ಕೆ ಪ್ರತಿಯಾಗಿ ಪಾವಗಡದ ವೆಂಕಟಮ್ಮನಹಳ್ಳಿಯ ಶಾಲೆಯೊಂದರಲ್ಲಿ ತಂಗಿದ್ದ ಪೊಲೀಸ್ ಪಡೆಯ ಮೇಲೆ ನಕ್ಸಲೀಯರು ನಡೆಸಿದ ಶಸ್ತ್ರಸಜ್ಜಿತ ಧಾಳಿಯಲ್ಲಿ ಆರು ಜನ ಪೊಲೀಸರು ಹತ್ಯೆಗೀಡಾದದ್ದು ಪ್ರತೀಕಾರದ ಕ್ರಮಗಳ ಅಪಾಯಕಾರಿ ಬೆಳವಣಿಗೆಯನ್ನು ಈ ವಾರ ಕಂಡಿದೆ. ಹಾದಿ ತಪ್ಪಿದ ರಾಜಕೀಯ ಚಳುವಳಿಯಿಂದಾಗಿ ಎತ್ತಲಾದ ಪ್ರಶ್ನೆಗಳು ಎತ್ತಲೋ ಕಣ್ಮರೆಯಾಗಿ 'ಅವರಿವರನ್ನೂ' ಕೊಲ್ಲುವ, ಸೇಡಿನ ಕಿಡಿ ಹೊತ್ತಿ ಪ್ರತೀಕಾರದ ಅನಾಹುತದ ಅಂಚು ತಲುಪುವುದು ಜನರ ಪಾಲಿಗೆ ದುರಂತವಾಗಿದೆ.

ಪೊಲೀಸರ ಹತ್ಯೆಯಾದದ್ದರಿಂದ ಆಕ್ರೋಶಗೊಂಡ ಹಾಗೂ ಸರ್ಕಾರ ಸತ್ತವರ ಬಗ್ಗೆ ಸರಿಯಾಗಿ ಗಮನಹರಿಸಲಿಲ್ಲವೆಂಬ ಬೇಸರವೂ ಸೇರಿಕೊಂಡು ಬೆಂಗಳೂರಿನಲ್ಲಿ ಮೀಸಲುಪಡೆಯ ಪೊಲೀಸರ, ಮಕ್ಕಳು ಸಂಬಂಧಿಕರು ಅದರ ಮುಖ್ಯ ಕಛೇರಿ ಇರುವಕೋರಮಂಗಲ ಪ್ರದೇಶದಲ್ಲಿ ದಾಂಧಲೆಗೆ ಇಳಿದು, ವಾಹನಗಳು ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಗೆ ಬೆಂಕಿಹಚ್ಚುವ, ಸಿವಿಲ್ ಪೊಲೀಸರ ಮೇಲೆ ಧಾಳಿ ನಡೆಸುವ ಕೃತ್ಯಗಳಲ್ಲಿ ತೊಡಗಿದ್ದು ಇನ್ನೊಂದು ಅನಾಹುತಕಾರಿ ಬೆಳವಣಿಗೆ. ಗಲಭೆಯ ವ್ಯಾಪಕತೆ ಗಮನಿಸಿದರೆ ಇದರಲ್ಲಿ ಕೇವಲ ಪೊಲೀಸರ ಬಂಧುಗಳು ಮಾತ್ರವೇ ಇದ್ದರೋ ಅಥವಾ ಬೇರೆ ಶಕ್ತಿಗಳೂ ತೊಡಗಿಕೊಂಡವೋ ಎಂಬ ಅನುಮಾನ ಬರುತ್ತದೆ. ಅದೇನಿದ್ದರೂ ತನಿಖೆಯ ನಂತರ ಸಂಗತಿಗಳು ಹೊರಬಂದಾವು.

ಜನ ಏನಾಗಬೇಕು?

ಒಟ್ಟಾರೆ ಈ ಬೆಳವಣಿಗೆಗಳು ಕರ್ನಾಟಕದಲ್ಲಿ ಅನಾರೋಗ್ಯಕರ ಅಪಾಯಕಾರಿ ಬೆಳವಣಿಗೆಗೆ ಹಾದಿ ಮಾಡುವ ಲಕ್ಷಣ ಉಳ್ಳದ್ದಾಗಿವೆ. ಇದರ



ನಾಗಮಂಗಲದಲ್ಲಿ...

ಬೆನ್ನಲ್ಲೇ ನಕ್ಸಲೀಯರ ಬಗ್ಗೆ ಮೊದಲಿದ್ದ ತುಸು ಮೃದು ಮನೋಭಾವ ತ್ಯಜಿಸಿ ಕಠಿಣವಾಗಿ ವರ್ತಿಸಲಾಗುವುದು, ಪೊಲೀಸರಿಗೆ ಪರಮಾಧಿಕಾರ ನೀಡಲಾಗುವುದು ಎಂದು ಪ್ರಕಟಿಸಿರುವ ಮುಖ್ಯಮಂತ್ರಿ ಧರಂಸಿಂಗ್‌ರವರು ಎರಡು ವಲಯಗಳಲ್ಲಿ ಕಾರ್ಯಾಚರಣೆ ಮಾಡಲು ಎರಡು ವಿಶೇಷ ಪಡೆಗಳನ್ನು ರಚಿಸಿರುವುದಾಗಿ ಪ್ರಕಟಿಸಿದ್ದಾರೆ. ಶಸ್ತ್ರ ತ್ಯಜಿಸಿ ಮಾತುಕತೆಗೆ ಬರದಿದ್ದಲ್ಲಿ ಕಠಿಣ ಕಾರ್ಯಾಚರಣೆ ಎಂದಿದ್ದಾರೆ. ಒಂದೆಡೆ ನಕ್ಸಲೀಯರು, ಇನ್ನೊಂದೆಡೆ ಬಜರಂಗದಳ, ಮತ್ತೊಂದೆಡೆ ಪೊಲೀಸ್ ಪಡೆಗಳು ಮಲೆನಾಡಿನ ಜನ ಎಂತಹ ವಿಪತ್ತು ತಮಗೆ ಕಾದಿದೆ ಎಂದು ತಲ್ಲಣಗೊಂಡಿರುವ ವರದಿಗಳು ಬಂದಿವೆ. ನಕ್ಸಲೀಯರ ಸಾಮಾಜಿಕ ಕಳಕಳಿ-ಬಡವರ ಬಗೆಗಿನ ಪ್ರೀತಿ, ನಿಸ್ವಾರ್ಥತೆ ಬಗ್ಗೆ ಮನಮಿಡಿವ ಬುದ್ಧಿಜೀವಿಗಳು ಅವರ ಸಶಸ್ತ್ರ ಹೋರಾಟದ ದುಸ್ಸಾಹಸ, ಅನಾಹುತಗಳ ಬಗ್ಗೆಯೂ ಗಂಭೀರವಾಗಿ ಚಿಂತಿಸುವ ಕಾಲವಿದು, ಹಾಗೆಯೇ ಅದನ್ನು ತ್ಯಜಿಸಿ ಜನತೆಯ ಪ್ರಜಾಸತ್ತಾತ್ಮಕ ಚಳುವಳಿ ರೂಪಿಸಲು, ರೂಢಿಸಲು ಮುಂದೆ ಬರಬೇಕೆಂದು ಒತ್ತಾಯಿಸಬೇಕಿದೆ.

●●●

'ನಕ್ಸಲೀಯರು ಶಸ್ತ್ರ ಹಿಡಿದಿದ್ದಾರೆ, ಅವರನ್ನೆದುರಿಸಲು ಶಸ್ತ್ರಗಳೇ ಉತ್ತರ ಮಾತುಕತೆಯಲ್ಲ' ಎಂದು ಬಜರಂಗ-ಬಿಜೆಪಿಯ ನಾಯಕರು ಚೀರಾಡುತ್ತಿರುವುದು ಒಂದು ವಿಚಿತ್ರವೇ ಸರಿ. ನಾವ್ಯಾರೂ ಶಸ್ತ್ರ ಹಿಡಿದಿರುವ ನಕ್ಸಲೀಯರನ್ನು



ಕೋರಮಂಗಲ - ಈ ಉರಿ ಹಿಂದೆ ಇನ್ಯಾರ್‍ಯಾರು?

ಸಮರ್ಥಿಸಬೇಕಿಲ್ಲ. ಆದರೆ ಕಾನೂನು-ಸಂವಿಧಾನ ನಕ್ಸಲಿಯರಿಗೂ, ಬಜರಂಗದಳದವರಿಗೂ ಒಂದೇ ಆಗಿರುತ್ತದೆ ಎಂದು ತಿಳಿಯಲು ತುಂಬಾ ಪಾಂಡಿತ್ಯದ ಅಗತ್ಯವೇನೂ ಇಲ್ಲ. ತ್ರಿಶೂಲ ಹಂಚಿ, ಚೂರಿ-ಖಡ್ಗ ಹಿಡಿದು ಧಾಳಿ ಮಾಡುವ, ವಿದ್ವೇಷದ ಕಿಡಿ ಹೊತ್ತಿಸುವ, ಕಾನೂನು-ಸಂವಿಧಾನ ಉಲ್ಲಂಘಿಸುವ ವಿಧ್ವಂಸಕ ಈ ಚೆಡ್ಡಿ ಪಡೆ ತನ್ನ ರಕ್ತಸಿಕ್ತ ಇತಿಹಾಸದ ಮುಖದತ್ತ ಒಮ್ಮೆ ನೋಡಿಕೊಳ್ಳಬೇಕು. ಅದಕ್ಕೆ ಹೇಸಿಗೆ ಎನಿಸದಿದ್ದರೆ ಜನ ಅದರ ಮುಖವನ್ನು ಅದರ ಮುಖವನ್ನು ತೋರಿಸಬಲ್ಲರು.

●●●

ಬೇರಿಳಿಸಿಕೊಳ್ಳಬಂದವರು

ಫೆಬ್ರವರಿ 9 ರಂದು ಮಂಡ್ಯದ ನಾಗಮಂಗಲ ಹೊತ್ತಿ ಉರಿದಿದೆ. 10 ಬಸ್‌ಗಳು ಜಖಂಗೊಂಡವು. 22 ಅಂಗಡಿಗಳು ಉರಿದು ಭಸ್ಮವಾದವು. 30 ಕ್ಕೂ ಹೆಚ್ಚು ಮಂದಿ ಗಾಯಗೊಂಡು ಆಸ್ಪತ್ರೆಗೆ ಸೇರಿದರು. ಇನ್ನೊಂದು ಕೋಮಿನ (ಅದು ಅಲ್ಪಸಂಖ್ಯಾತರದ್ದೇ ಆಗಿರುತ್ತದೆ) ಪ್ರಾರ್ಥನ ಮಂದಿರ ಕೆಡವಲಾಯಿತು. ಗಲಭೆ ಹತ್ತಿಕ್ಕಲು ಪೊಲೀಸರು ಲಾಠಿ ಪ್ರಹಾರ, ಗಾಳಿಯಲ್ಲಿ ಗುಂಡು ಹಾರಿಸಿದ್ದಾಯಿತು. ಪೊಲೀಸ್ ಠಾಣೆ, ಸರ್ಕಾರಿ ಕಛೇರಿಗಳು ಹಾನಿಗೀಡಾದವು. ಕಾರಣ?!

ನಾಗಮಂಗಲದ ಮಾರಮ್ಮನ ವಿಗ್ರಹವನ್ನು 'ಯಾರೋ' 'ಕಿಡಿಗೇಡಿ'ಗಳು ಭಗ್ನಗೊಳಿಸಿ ಬೀದಿಗೆ ಎಸೆದರಂತೆ. ಇದೇನು, ಯಾಕಾಯಿತು ಎಂದು ತಿಳಿಯಲು (ತಿಳಿದೂ?) ವ್ಯವಧಾನವಿಲ್ಲದ ಖಾವಿ ಪಡೆ ದಾಂಧಲೆಗಿಳಿಯಿತು. ದೂರು ದಾಖಲಿಸಿಕೊಂಡು ಪೊಲೀಸರು ಕ್ರಮವಹಿಸುವ ಮೊದಲೇ ದೂರು ನೀಡಲು ಬಂದವರು ಸಿದ್ಧರಾಗಿದ್ದಂತೆ ಬೀದಿಗಿಳಿದು ಗಲಾಟೆ ಎಬ್ಬಿಸಿದರು. ಅವರ ನಿಜ ಉದ್ದೇಶ ಏನೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹಿಂಸೆ, ಗಲಭೆಗಳು ಮೆರೆದವು. ಇದು ದಿಢೀರನೆ ಹುಟ್ಟಿಕೊಂಡ ಗಲಭೆಯೇ? ಪೂರ್ವಯೋಜಿತವೇ?

ಮಂಡ್ಯ ಜಿಲ್ಲೆಯ ನಾಗಮಂಗಲ ಈಚಿಗಿನ ಹಲವಾರು ವರುಷಗಳಿಂದ ಸಂಘ ಪರಿವಾರದ ನಾಯಕರಿಗೆ 'ಆಪೇಕ್ಷಣೀಯ' ಸ್ಥಳವಾಗಿದೆ. ಇಲ್ಲಿ ಬಜರಂಗದಳದ ಪ್ರಮೋದ ಮುತಾಲಿಕ, ಸುನಿಲಕುಮಾರ, ಜಾಗರಣ ವೇದಿಕೆಯ ಕಾರಂತ, ವಿಶ್ವ ಹಿಂದೂ ಪರಿಷತ್‌ನ ಪ್ರವೀಣ ತೊಗಾಡಿಯಾ ಬಂದುಹೋಗಿ ಭಾಷಣ ಮಾಡಿದ್ದಾರೆ, ತಾಲೀಮುಗಳೂ ನಡೆದಿವೆ. ಆದಿಚುಂಚನಗಿರಿ ಸ್ವಾಮಿಯನ್ನು ಹಿಂದುತ್ವದ ತಮ್ಮ ರೈಲಿಗೆ ಹತ್ತಿಸಿಕೊಂಡ ಬಳಿಕ ಅವರ ನೇತೃತ್ವದಲ್ಲಿ ಹಿಂದೂ ಸಮಾಜೋತ್ಸವ ನಡೆದಿದೆ. ನಾಗಮಂಗಲ ಚುಂಚಶ್ರೀಗಳ ಬೆಂಬಲಿಗರು ಅಧಿಕ ಇರುವ ಊರು. ಇನ್ನು ಒಂದು ವಿಶೇಷವೆಂದರೆ ಮುಸ್ಲಿಂ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶವೂ ಕೂಡಾ ಆಗಿದೆ. ಹಿಂದೆ 22 ವರುಷಗಳ ಹಿಂದೊಮ್ಮೆ ಹಿಂದು-ಮುಸ್ಲಿಂ ಗಲಭೆ ಸಂಭವಿಸಿದ್ದು ಬಿಟ್ಟರೆ ಮತ್ತೇ ಅಂತಹ ಘಟನೆಗಳು ನಡೆಯಲಿಲ್ಲ. ಆದರೆ ಜನ ಶಾಂತಿ-ಸೌಹಾರ್ದತೆಯಿಂದ ಬಾಳುವುದು ಚೆಡ್ಡಿ ಪಡೆಗೆ ಬೇಕಾಗಿಲ್ಲ. ಅದಕ್ಕೆಂದೇ ತಿದಿಯೂದಿದರು-ಈಗ ಗಲಭೆ ಎದ್ದು ಒಂದೇ ಊರಿನ ಜನ ಪರಸ್ಪರ ಕೈಮಿಲಾಯಿಸುವಂತೆ ವೈರಿಗಳಾದರು. ಸಾಮರಸ್ಯ ಸಾಕು, ಸಮರಬೇಕು ಎಂಬುದು ಖಾವಿ ಪಡೆಗಳ ಧರ್ಮಕಾರ್ಯದ ಹೊಸ ವ್ಯಾಖ್ಯಾನವಿದು. ಒಕ್ಕಲಿಗರೇ ಅಧಿಕವಿರುವ ಪ್ರದೇಶದಲ್ಲಿ ಬಲವಿಲ್ಲದ ಬಿಜೆಪಿ 'ಚುಂಚಶ್ರೀ' ಆಶೀರ್ವಾದದಿಂದ ಬೇರಿಳಿಸಲು ನಡೆಸಿದ ಕಸರತ್ತು ಇದಾಗಿತ್ತು ಎನ್ನಲು ಅನುಮಾನದ ಅಗತ್ಯವಿಲ್ಲ.

●●●

ಕಂಕುಳಲ್ಲಿ ಕೋಮುವಾದ ಬಾಯಲ್ಲಿ ಅಭಿವೃದ್ಧಿಯ 'ಹಾರಾಟ'

ನಾಗಮಂಗಲದಲ್ಲಿ ವಾನರ ಸೈನ್ಯದ ಹಾವಳಿ ಇಂತಾದರೆ, ಬಾಬಾಬುಡನ್ ಗಿರಿಯಲ್ಲಿ ದತ್ತ ಜಯಂತಿ ಸಂದರ್ಭದಲ್ಲಿ ಮಣ್ಣು ಮುಕ್ಕಿ ಬುಸುಗುಡುತ್ತಿರುವ ಬಿಜೆಪಿ ಈಗ ತನ್ನ ಧಾಳಿಗೆ ವಿನೂತನ ತಂತ್ರ ಹೆಣೆದುಕೊಂಡಿದೆ. ಕೋಮುವಾದ ಉದ್ರೇಕಿಸುವ ಅಜೆಂಡಾವನ್ನು ಸ್ವಲ್ಪ ಹೊತ್ತು ಕಂಕುಳಲ್ಲಿರಿಸಿ 'ಅಭಿವೃದ್ಧಿ'ಯ ಹರಿಕಾರನ ವೇಷಧರಿಸಿ ಹೋರಾಟಕ್ಕೆ ಇಳಿದಿದೆ. ಅಂದರೆ ಮೊದಲು ಕರ್ನಾಟಕದ ಮೈತ್ರಿಕೂಟದ ಸರ್ಕಾರದ ವಿರುದ್ಧ ಜನರ ಆಕ್ರೋಶವನ್ನು ಹೆಚ್ಚಿಸಲು ತನ್ನ ಗಮನ ಕೇಂದ್ರಿಕರಿಸಿದೆ. ಬಾಗಲಕೋಟೆಯಲ್ಲಿ ಆಲಮಟ್ಟಿ ಡ್ಯಾಂನ ನಿರ್ಮಾಣದಿಂದಾಗಿ ಭೂಮಿ ಮನೆ ಕಳಕೊಂಡು ನಿರಾಶ್ರಿತರಾದವರು ತಮ್ಮ ಸಮಸ್ಯೆ ಇತ್ಯರ್ಥ ಪಡಿಸಲು ಹೋರಾಟಕ್ಕೆ ಇಳಿದರು. ಇದರಲ್ಲಿ ಮೆಲ್ಲನೆ ಕಾಲು ಚಾಚಿ ತೂರಿಕೊಂಡ ಬಿಜೆಪಿ ಈ ಚಳುವಳಿ ತನ್ನದು ಎಂದು ಅದನ್ನು ಅತಾರ್ಕಿಕ ಮಟ್ಟಕ್ಕೆ ಒಯ್ದಿತು. ಸಮಸ್ಯೆಗಳನ್ನು ಉತ್ಪ್ರೇಕ್ಷಿಸಲಾಯಿತು. ಉಪವಾಸ-ವನವಾಸದ ಗಲಾಟೆಯೆಬ್ಬಿಸಿದ ಅಂಕವೂ ಮುಗಿಯಿತು. ಸರ್ಕಾರ ಬೆಂಗಳೂರಿನಲ್ಲಿ ಸರ್ವಪಕ್ಷಗಳ ಸಭೆ ಕರೆಯಿತಲ್ಲದೆ, ಬಿಜೆಪಿಯ ಆಟಾಟೋಪ ಅಲ್ಲಿ ಬಯಲಾಯಿತು.

ನಂತರ ಇಳಿದದ್ದು ವಿಜಾಪುರ ಸಮಗ್ರ ನೀರಾವರಿ ಯೋಜನೆ ಜಾರಿಗೆ ತರಬೇಕೆಂಬ ಚಳುವಳಿ, ಇದಕ್ಕೆ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕೇಂದ್ರ ಮಂತ್ರಿಯಾಗಿದ್ದ, ಸಂಸದ ಯತ್ನಾಳರ ಮುಂದಾಳುತನ, ಇದೂ ಸಹ ಭಾರಿ ಪ್ರಮಾಣದಲ್ಲಿ



ವಿಜಾಪುರದಲ್ಲಿ... ಅಭಿವೃದ್ಧಿಗಾಗಿ ಬಿಜೆಪಿ ಹಚ್ಚಿದ ಬೆಂಕಿ

ಹಿಂಸೆ, ಗಲಭೆಗಳು, ಬೆಂಕಿಯಿಕ್ಕುವಿಕೆಯಂತಹ ಕೃತ್ಯಗಳನ್ನು ಹುಟ್ಟುಹಾಕಲಾಯಿತು. ಇಲ್ಲಿಯೂ ಉಪವಾಸ-ನಿತ್ರಾಣ, ಸಚಿವರ ಭರವಸೆ, ಸರ್ಕಾರದ ಸಭೆ ನಡೆದವು. ವಿಚಿತ್ರವೆಂದರೆ ಇದೇ ಬಿಜೆಪಿ ಕೇಂದ್ರದಲ್ಲಿದ್ದಾಗ ನೀರಾವರಿಗೆ, ಅಭಿವೃದ್ಧಿ ಯೋಜನೆಗೆ ಏನೊಂದೂ ಮಾಡದೇ, ಸರ್ಕಾರ ಪತನವಾಗಿ ಯುಪಿಎ ಸರ್ಕಾರವಿರುವಾಗ ರಂಪಾಟ ಮಾಡುವುದರ ಉದ್ದೇಶ ಸ್ಪಷ್ಟ. ಅದೇ ಕೊಚ್ಚೆಯಲ್ಲಿ ಮೀನು ಹಿಡಿಯುವ ಉಪಾಯ. ನಿಜವಾಗಿಯೂ ವಿಜಾಪುರ, ಬಾಗಲಕೋಟೆ ಜನರ ಬಗ್ಗೆ ಕಾಳಜಿಯಿದ್ದರೆ ನೀರಾವರಿ ಸೌಲಭ್ಯಕ್ಕೆ ಅತೀ ಅಗತ್ಯವಾದ ವಿದ್ಯುತ್ ಉತ್ಪಾದನೆಗೆ ಹಣ ಹೂಡಬೇಕಿತ್ತು. ನೀರಾವರಿಗೂ ಹಣ ಕೊಡಬೇಕಿತ್ತು. ಇದಾವ ಮಾಡದೇ ಈಗ ಹೊಸ ನಾಟಕ! ಗೆದ್ದ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ವರಸೆ!

ಲಾಠಿ ಪ್ರಹಾರ ಮಾಡ್ರೀ ಸರ...

ಹಾಗೆಯೇ ಸದ್ಯ ಗುಲ್ಬರ್ಗಾದಲ್ಲಿ ತೊಗರಿಬೇಳೆಗೆ ಬೆಲೆ ನಿಗದಿ ಮಾಡುವ ವಿಷಯದಲ್ಲಿ ವಿಜಾಪುರದಂತಹದ್ದೇ ತಂತ್ರಕ್ಕೆ ಇಳಿದಿದೆ. ಪಕ್ಷಾತೀತ-ಸರ್ವಪಕ್ಷಗಳ ಹೋರಾಟದ ಹೆಸರು ನೀಡಿದ್ದರೂ ಅಲ್ಲಿ ಬಿಜೆಪಿಯದ್ದೇ ಕಾರುಬಾರು. ಬೆಲೆ ನಿಗದಿ ಪ್ರಶ್ನೆ ಬಿಟ್ಟು ಬೀದಿ ಕದನ ಮಾಡಿ ಪೊಲೀಸರಿಂದ ಲಾಠಿ ಪ್ರಹಾರ ಮಾಡಿಸಿಕೊಂಡಿದ್ದಾರೆ. ಇದನ್ನು ಬಳಸಿ ಗುಲ್ಬರ್ಗಾ ಬಂದ್‌ಗೂ ಯೋಜನೆ ವಿಸ್ತರಿಸಿದ್ದಾರೆ.

ಈ 'ಹೋರಾಟ'ಗಳ ಹಿಂದೆ ಇರುವುದು ಜನಕಾಳಜಿ ಅಲ್ಲವೇ ಅಲ್ಲ. ಇದು ಮತಪೆಟ್ಟಿಗೆಯ ರಾಜಕೀಯ.

ಮುಗ್ಧ ಜೀವಿಗಳ ಬಲಿಬೇಡ-ಸಿಪಿಐ(ಎಂ)

ನಕ್ಸಲೀಯರು ಶಸ್ತ್ರ ತ್ಯಜಿಸಿ ಪ್ರಜಾಸತ್ತಾತ್ಮಕ ಹಾದಿಗೆ ಬರಲಿ

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಅರಣ್ಯ ಪ್ರದೇಶದಲ್ಲಿ ನಕ್ಸಲೀಯರು ಮತ್ತು ಪೊಲೀಸ್ ನಡುವಿನ ಗುಂಡಿನ ಚಕಮಕಿಯಲ್ಲಿ ಇಬ್ಬರು ನಕ್ಸಲೀಯರು ಹತ್ಯೆಯಾಗಿದ್ದಾರೆ. ಇದು ಕರ್ನಾಟಕದ ಜನತೆ ಯೋಚನೆ ಮಾಡಬೇಕಾದ ಸಂದರ್ಭವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಭಾವಿಸಿದೆ.

ಗುಂಡಿನ ಕಾಳಗದಲ್ಲಿ ಬುದ್ಧಿಜೀವಿಯೊಬ್ಬ ಬಲಿಯಾಗಿದ್ದಾರೆ. ನಕ್ಸಲೀಯರು ಶಸ್ತ್ರಾಸ್ತ್ರಗಳನ್ನೆತ್ತಿ ಹೋರಾಟ ಮಾಡುತ್ತಾ ಮುಗ್ಧ ಯುವಜೀವಗಳನ್ನು ಬಲಿಕೊಡುವುದರ ಬದಲಾಗಿ, ಅಪ್ರಾಯೋಗಿಕವಾದ ತಮ್ಮ ದುಸ್ಸಾಹಸವಾದಿ ಚಟುವಟಿಕೆಗಳನ್ನು ಕೈ ಬಿಟ್ಟು ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಲಪಡಿಸಲು ಮುಂದಾಗಬೇಕೆಂದು ಸಿಪಿಐ(ಎಂ) ಕರೆ ನೀಡಿದೆ.

ಅದೇ ಸಂದರ್ಭದಲ್ಲಿ ಆಡಳಿತ ರೂಢ ಸರಕಾರವು ಬಡಜನರ ಸಾಮಾಜಿಕ ಪ್ರಶ್ನೆಗಳಾದ ಭೂರಹಿತರಿಗೆ ಭೂಮಿ ನೀಡಿಕೆ, ಅರಣ್ಯಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ಬಂದ ಆದಿವಾಸಿ ಮತ್ತಿತರ ಜನರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸುವುದು, ಅಭಿವೃದ್ಧಿ ಕಾರ್ಯಗಳಲ್ಲಿ ನೊಂದವರಿಗೆ ಪರಿಹಾರ, ಆದಿವಾಸಿ ಮತ್ತು ಬುಡಕಟ್ಟು ಜನರ ಬದುಕು ಮತ್ತು ಸಂಸ್ಕೃತಿಯ ಹಕ್ಕುಗಳ ರಕ್ಷಣೆ ಮೊದಲಾದವುಗಳಿಗೆ ಆದ್ಯತೆ ನೀಡಬೇಕು ಹಾಗೂ ವಸತಿ, ಕೂಲಿ, ಕೆಲಸ, ಮೊದಲಾದ ಸಮಸ್ಯೆಗಳ ಇತ್ಯರ್ಥಕ್ಕೆ ಗಮನ ನೀಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಈ ಕುರಿತು ಸಮಾಜದಲ್ಲಿರುವ ಎಲ್ಲಾ ವಿಭಾಗದ ಜನರು ದುಸ್ಸಾಹಸವಾದಿ ಚಟುವಟಿಕೆಗಳನ್ನು ಕೈಬಿಡಲು ನಕ್ಸಲ್‌ವಾದಿಗಳ ಮೇಲೆ ಒತ್ತಡ ತರಬೇಕೆಂದೂ ಮತ್ತು ಸರಕಾರವು ಜನರ ಸಮಸ್ಯೆಗಳನ್ನು ಬಗೆಹರಿಸಲು ಭೂಸುಧಾರಣೆ, ಒಕ್ಕಲೆಬ್ಬಿಸು ವುದಕ್ಕೆ ತಡೆಯಲು ಇತ್ಯಾದಿ ಕಾರ್ಯಕ್ರಮ ಗಳನ್ನು ಜ್ಯಾರಿಗೆ ತರಲು ಆಗ್ರಹಿಸಬೇಕೆಂದೂ ಸಿಪಿಐ(ಎಂ) ಮನವಿ ಮಾಡಿದೆ.

ಕೃಷಿಕೂಲಿಕಾರ ಬಸವರಾಜನ ಕೊಲೆ ಆರೋಪಿಗಳನ್ನು ಬಂಧಿಸಲು ಆಗ್ರಹಿಸಿ ಪ್ರದರ್ಶನ

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಗೋನಾಳ ಗ್ರಾಮದ ದಲಿತ ಕೃಷಿ ಕೂಲಿಕಾರ ಬಸವರಾಜನನ್ನು ಕೊಲೆ ಮಾಡಿರುವ ಆರೋಪಿಗಳನ್ನು ತಕ್ಷಣ ಬಂಧಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಇಂದು ಉಡುಪಿ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಎದುರು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಸಮಿತಿಗಳು ಜಂಟಿ ಪ್ರತಿಭಟನಾ ಪ್ರದರ್ಶನ ನಡೆಸಿದವು. ಬಸವರಾಜನ ಕೊಲೆಯಾಗಿ ಸುಮಾರು ಒಂದೂವರೆ ತಿಂಗಳುಗಳಾಗಿವೆ. ಮೃತನ ಹೆಂಡತಿ ತಿಪ್ಪಮ್ಮ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿ ಗ್ರಾಮದ ಭೂಮಾಲಕ ಅಮರೇಶಪ್ಪ ಮತ್ತು ಇತರರ ಸೇರಿ ಕೊಲೆ ಮಾಡಿದ್ದಾರೆ ಎಂದು ದೂರು ಸಲ್ಲಿಸಿದರೂ ಆರೋಪಿಗಳನ್ನು ಇದುವರೆಗೆ ಬಂಧಿಸಲಾಗಿಲ್ಲ. ಆರೋಪಿಗಳು ರಾಜರೋಷವಾಗಿ ಓಡಾಡುತ್ತಾ


ಬೆಂಗಳೂರಿನಲ್ಲಿ ಪ್ರತಿಭಟನೆ

ಮೃತನ ಹೆಂಡತಿಯನ್ನು ಮತ್ತುಕೂಲಿಕಾರರ ಸಂಘದ ಮುಖಂಡರನ್ನು ಬೆದರಿಸುತ್ತಿದ್ದಾರೆ. ಗ್ರಾಮೀಣ ಪಿ.ಎಸ್‌ಐ. ಗುರುಬಸವರಾಜ ಆರೋಪಿಗಳೊಂದಿಗೆ ಕೈಜೋಡಿಸಿಕೊಂಡಿದ್ದಾನೆ. ಕಾರಣ ಪೊಲೀಸ್ ಮೇಲಧಿಕಾರಿಗಳು ತಕ್ಷಣ ಮಧ್ಯ ಪ್ರವೇಶ ಮಾಡಿ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸುವ ಮನವಿ ಪತ್ರವನ್ನು ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಾಜರಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಮಾತನಾಡಿ 'ಭೂಮಾಲಕರ ಜೊತೆಯಲ್ಲಿ ಪೊಲೀಸರು ಕೈಜೋಡಿಸಿದ್ದರಿಂದ ಗಂಗಾವತಿ ತಾಲ್ಲೂಕಿನಲ್ಲಿ ಕೃಷಿಕೂಲಿಕಾರರಿಗೆ ರಕ್ಷಣೆ ಇಲ್ಲದಂತಾಗಿದೆ' ಎಂದರಲ್ಲದೆ ಕೊಲೆಗಾರರನ್ನು ರಕ್ಷಿಸುತ್ತಿರುವ ಪಿ.ಎಸ್.ಐ. ಗುರುಬಸವರಾಜಪ್ಪನನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಒಳಪಡಿಸಬೇಕು' ಎಂದು ಆಗ್ರಹಿಸಿದರು. ಕೆ.ಶಂಕರ್, ಡೇವಿಡ್ ಕರ್ಕಡ, ವಿಶ್ವನಾಥ ರೈ, ದೋಗು ಸುವರ್ಣ, ಸಾಧು ಅಮೀನ್, ವಿಠ್ಠಲ ಪೂಜಾರಿ, ರಮೇಶ್ ಮೆಂಡನ್, ಕೃಷ್ಣ ಅಮೀನ್, ಗೊಡ್ವಿನ್ ಡೆನಿಸ್ ಫರ್ನಾಂಡೀಸ್, ಲೀಲಾ, ಗಿರಿಜಾ ನಿಟ್ಟೂರ್ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬಿಜಾಪುರ ಪೊಲೀಸ್ ಠಾಣೆ ಎದುರು ಪ್ರದರ್ಶನ

ಕೃಷಿ ಕೂಲಿಕಾರ ಬಸವರಾಜಪ್ಪನ ಕೊಲೆ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘ, ಜನವಾದಿ ಮಹಿಳಾ ಸಂಘಟನೆಯ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ನಂತರ ಗಾಂಧಿ ಚೌಕದ ಪೊಲೀಸ್ ಠಾಣೆ ಎದುರು ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷರಾದ ಭೀಮಸಿ ಕಲಾದಗಿ, ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ,ಲಕ್ಷ್ಮೀ ಮೈಲಾರಿ, ಕೃಷಿಕೂಲಿಕಾರರ ಸಂಘದ ಮೇಘ ವಾಲಿಕಾರ, ಪೌರ ಕಾರ್ಮಿಕರ ಸಂಘಧ ವಿ.ಎಂ.ಸೊನ್ನದ, ಪ್ರಾಂತ ರೈತ ಸಂಘದ ಅಣ್ಣಾರಾಯ ಈಳಿಗೇರ ಮುಂತಾದವರು ಮಾತನಾಡಿದರು. ನಂತರ ಡಿವೈಎಸ್ಪಿ ಯವರಿಗೆ ಮನವಿ ಸಲ್ಲಿಸಿ ಆರೋಪಿಗಳನ್ನು ಶೀಘ್ರ ಬಂಧಿಸುವಂತೆ ಒತ್ತಾಯಿಸಲಾಯಿತು.

ಮೆರವಣಿಗೆ ನಾಯಕತ್ವವನ್ನು ರೈತ ಸಂಘದ ಪರುತಯ್ಯ, ಹಿರೇಮಠ, ನಬಿಸಾಬ ದವಳಗಿ, ಡಿವೈಎಫ್‌ಐ ನ ಬಸಲಿಂಗ ಕಪಾಲಿ ಜೆಎಂಎಸ್‌ನ ಜಯಾ ಪವಾರ, ಜುಬೇದಾ ಹಣಗಿ, ಶಾರದ, ವಸ್ತ್ರದಾ, ಕುಸುಮಾ ಮುಂತಾದವರು ವಹಿಸಿದ್ದರು.

ಕೊಪ್ಪಳ: ಫೆಬ್ರವರಿ 3 ರಂದು ನೂರಾರು ರೈತ-ಕೂಲಿಕಾರರು ಕೊಪ್ಪಳ ನಗರದಲ್ಲಿ ಮೆರವಣಿಗೆ ನಡೆಸಿ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯ ಮುಂದೆ ಧರಣಿ ಸತ್ಯಾಗ್ರಹ ಸಂಘಟಿಸಲಾಯಿತು. ನಂತರ ಎಸ್.ಪಿ. ಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಕಾರ್ಯಕ್ರಮದ ನೇತೃತ್ವ ಆರ್.ಕೆ.ದೇಸಾಯಿ, ರೈತ ಸಂಘದ ಜಿಲ್ಲಾ ಸಂಚಾರಕರು, ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ, ಬಾಳಪ್ಪ, ಲಿಂಗಪ್ಪ ಹಣವಾಳ, ಜಿ.ನಾಗರಾಜು, ರಾಜು ಬಾಗಲಿ ವಹಿಸಿದ್ದರು.

ಬೆಂಗಳೂರು : ಫೆಬ್ರವರಿ 7 ರಂದು ಮೈಸೂರು



ಉಡುಪಿಯಲ್ಲಿ

ವೃತ್ತದ ಬಳಿ ಐವತ್ತಕ್ಕೂ ಹೆಚ್ಚು ರೈತ-ಕೂಲಿಕಾರರ ಪ್ರತಿಭಟನೆ, ಧರಣಿ ನಡೆಸಿದರು. ನಂತರ ಎ.ಜಿ. ವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿ.ಸಿ.ಬಯ್ಯಾರೆಡ್ಡಿ, ಚಂದ್ರಪ್ಪ ಹೊಸ್ಕೇರಾ, ಎನ್.ವೆಂಕಟಾಚಲಯ್ಯ, ಆರ್.ಮನೋಹರ್, ಮಹದೇಶ, ಸಿದ್ದಪ್ಪ, ಸುಬ್ಬಲಕ್ಷ್ಮಿ (ಜೆಎಂಎಸ್), ಮಹಾಂತೇಶ್ ಪಾಲ್ಗೊಂಡಿದ್ದರು.

ಗುಲ್ಬರ್ಗಾ: ಒಂದು ನೂರು ಐವತ್ತಕ್ಕಿಂತ ಹೆಚ್ಚಿನ ರೈತ-ಕೂಲಿಕಾರರ ಗುಲ್ಬರ್ಗಾ ಐಜಿಪಿ ಕಾರ್ಯಾಲಯ ಮುಂದೆ ಧರಣಿ ಸತ್ಯಾಗ್ರಹವನ್ನು ಹಮ್ಮಿಕ್ಕೊಂಡಿದ್ದರು. ನಂತರ ಐ.ಜಿ.ಪಿ.ಗೆ ಮನವಿ ಪತ್ರ ಸಲ್ಲಿಸಿದರು. ಕಾರ್ಯಕ್ರಮದ ನೇತೃತ್ವ ಕೆಪಿಆರ್‌ಎಸ್ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ, ವಿರುಪಾಕ್ಷಪ್ಪ ತಡಕಲ್, ಮೇಘರಾಜ್ ಇನ್ನಿತರರು ವಹಿಸಿದ್ದರು.

ಶಹಾಪುರ : ನೂರು ಜನ ರೈತ-ಕೂಲಿಕಾರರು ತಹಶೀಲ್ದಾರ ಕಾರ್ಯಾಲಯದ ಮುಂದೆ ಪ್ರತಿಭಟನೆ ನಡೆಸಿ ನಂತರ ಪೊಲೀಸ್ ಇನ್ಸ್‌ಪೆಕ್ಟರ್ ಕಾರ್ಯಾಲಯಕ್ಕೆ ತೆರಳಿ ಮನವಿ ಪತ್ರ ಸಲ್ಲಿಸಿದರು. ನೇತೃತ್ವ ಚನ್ನಪ್ಪ ಆನೆಗುಂದಿ, ಸೌಲಾಸಾಬ್, ಸಿದ್ದಯ್ಯ, ಅಪ್ಪಣ್ಣ ವಹಿಸಿದ್ದರು.


ಮಂಡ್ಯ : ಫೆ 8 ರಂದು 75 ಕ್ಕಿಂತ ಹೆಚ್ಚಿನ ಕೂಲಿಕಾರರ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯ ಮುಂದೆ ಧರಣಿ ಸತ್ಯಾಗ್ರಹವನ್ನು ಸಂಘಟಿಸಿ ನಂತರ ಎಸ್.ಪಿ. ರವರಿಗೆ ಮನವಿ ಪತ್ರ ಸಲ್ಲಿಸಿದರು. ಈ ಕಾರ್ಯಕ್ರಮದ ನೇತೃತ್ವದಲ್ಲಿ ಪುಟ್ಟಮಾದಯ್ಯ, ಕುಮಾರಿ, ಗಾಯಿತ್ರಿ, ಮಹದೇವಮ್ಮ, ಪುಟ್ಟಮಾದೇಗೌಡ, ಎಬ್‌ಣೇಜರ್ ವಹಿಸಿದ್ದರು.

ರಾಯಚೂರು : 30 ಜನರ ಪ್ರತಿಭಟನೆ ಮೂಲಕ ತೆರಳಿ ಧರಣಿ ನಡೆಸಿದ್ದಾರೆ. ಸ್ಥಳಕ್ಕೆ ಧಾವಿಸಿ ಬಂದ ಡಿವೈಎಸ್‌ಪಿ ರವರು ಮನವಿ ಪತ್ರ ಸ್ವೀಕರಿಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಈ ಕಾರ್ಯಕ್ರಮದ ನೇತೃತ್ವದಲ್ಲಿ ಮಲ್ಲಯ್ಯ ಜಾಲಹಳ್ಳಿ, ಕರಿಯಪ್ಪ ಅಚ್ಚೊಳ್ಳಿ, ಶಾಂತರಾಮ ನಾಯಕ, ವೀರಭದ್ರ, ಶರಣಬಸವ, ವೈ.ಈರಣ್ಣ, ಕೆ.ಜಿ.ವಿರೇಶ ಇನ್ನಿತರರು ಇದ್ದರು.

ಕುಷ್ಟಗಿ: ನೂರಾರು ರೈತ-ಕೂಲಿಕಾರರು ಬಸ್ ನಿಲ್ದಾಣದಿಂದ ಮೆರವಣಿಗೆ ಮೂಲಕ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮನವಿ ಪತ್ರ ಸಲ್ಲಿಸಿದೆ. ಈ ಕಾರ್ಯಕ್ರಮದ ನೇತೃತ್ವವನ್ನು ಕೆ.ಆರ್. ದೇಸಾಯಿ, ಶಂಕ್ರಪ್ಪ, ಪಂಪನಗೌಡ, ಹಣ್ಮಂತ ದಾಸರ ವಹಿಸಿದ್ದರು.

ಕುರುಗೋಡು : ಫೆ 9 ರಂದು ನೂರಾರು ರೈತ ಕೂಲಿಕಾರರು ನಗರದ ತುಂಬ ಮೆರವಣಿಗೆ ನಡೆಸಿ ಪೊಲೀಸ್ ಇನ್ಸ್‌ಪೆಕ್ಟರಿಗೆ ಮನವಿ ಪತ್ರ ಸಲ್ಲಿಸಿದೆ. ಈ ಕಾರ್ಯಕ್ರಮದಲ್ಲಿ ಹೆಚ್.ಎಂ. ವಿಶ್ವನಾಥಸ್ವಾಮಿ, ಶಿವಶಂಕರ್, ಗಾದಿಲಿಂಗಪ್ಪ ಇನ್ನಿತರರು ವಹಿಸಿದ್ದರು.

ಹಗರಿಬೊಮ್ಮನಹಳ್ಳಿ : ಫೆ 9 ರಂದು ನೂರಾರು ಜನ ರೈತರು ಮೆರವಣಿಗೆ ನಡೆಸಿ. ನಂತರ ಪೊಲೀಸ್ ಕಾರ್ಯಾಲಯಕ್ಕೆ ತೆರಳಿ ಮನವಿ ಪತ್ರ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಆರ್.ಎಸ್.ಬಸವರಾಜ್, ಜಗನ್ನಾಥ್, ಗಣೇಶ್, ರಂಗಪ್ಪ, ದಾಸರ್ ಪಾಲ್ಗೊಂಡಿತು.


ಬೀದರ್‌ನಲ್ಲಿ

ಸವದತ್ತಿ : ಫೆ 7 ರಂದು 25 ಜನ ರೈತ-ಕೂಲಿಕಾರ ನಗರದಲ್ಲಿ ಮೆರವಣಿಗೆ ನಡೆಸಿ, ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಮತ್ತು ಮುಖ್ಯಮಂತ್ರಿ ಧರಂ ಸಿಂಗ್‌ರವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಈ ಕಾರ್ಯಕ್ರಮದ ನೇತೃತ್ವ ವನ್ನು ಆರ್.ಎಸ್.ನಾಯಕರು ವಹಿಸಿದ್ದರು.

ತೀವ್ರಗೊಂಡ ವಿದ್ಯುತ್ ಖಾಸಗೀಕರಣ ಪ್ರಕ್ರಿಯೆ - ರೈತರ ಭಾರೀ ಪ್ರತಿಭಟನೆ

ವಿಶ್ವಬ್ಯಾಂಕ್ ಒತ್ತಡದ ಹಿನ್ನೆಲೆಯಲ್ಲಿ ವಿದ್ಯುತ್ ವಿತರಣೆಯನ್ನು ಹಾಗೂ ದರ ನಿಗದಿ ಪಡಿಸುವ ಅಧಿಕಾರವನ್ನು ಖಾಸಗೀಯರ ಕೈಗೆ ನೀಡಲಿರುವುದಾಗಿ ವಿದ್ಯುತ್ ಸಚಿವರು ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ.

ಈ ನೀತಿಯನ್ನು ವಿರೋಧಿಸಿ ರೈತರಿಂದ ಪ್ರತಿಭಟನೆ ಆರಂಭವಾಗಿದೆ. ಜನವರಿ 31 ರಂದು ಸುಮಾರು 3500 ರೈತರು ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ವಿಶ್ವಬ್ಯಾಂಕ್ ಅಣತಿಯಂತೆ ಕ್ರಮ ಕೈಗೊಳ್ಳಲಿರುವ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಧಾಳಿಗಳು

ಪ್ರಥಮ ಹೆಜ್ಜೆಯಾಗಿ ನೀರಾವರಿ ಪಂಪ್‌ಸೆಟ್‌ಗಳಿಗೆ ನೀಡುತ್ತಿದ್ದ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲಾಗಿದೆ. ಪ್ರತಿ ಹೆಚ್‌ಪಿಗೆ ರೂ. 720 ದರ (LT 4A ಶ್ರೇಣಿಗೆ) ನಿಗದಿ ಪಡಿಸಿ ಪ್ರತಿ ಹೆಚ್‌ಪಿಗೆ ರೂ. 180 ಸಬ್ಸಿಡಿ ನೀಡಲಾಗುತ್ತಿತ್ತು. ಈಗ ಈ ಸಬ್ಸಿಡಿ ರದ್ದು ಪಡಿಸಲಾಗಿದೆ. ಸದ್ಯದಲ್ಲೇ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲಿರುವುದನ್ನು ಕೆಪಿಟಿಸಿಎಲ್ ನ ಎಂ.ಡಿ.ಯವರಾದ ಮಧುರವರು ಸ್ಪಷ್ಟಪಡಿಸಿದ್ದಾರೆ. ಜಿಲ್ಲಾ ಪಂಚಾಯತ್ ಚುನಾವಣೆ ನಂತರ ಜಾರಿಗೆ ತರುವ ಇಂಗಿತ ವ್ಯಕ್ತಪಡಿಸಿದರು.

ಪೊಳ್ಳುತನ ಬಯಲು

ಜನವರಿ 18 ರಂದು ಅವರನ್ನು ಭೇಟಿಯಾದ ಬೆಳಗಾವಿ ಜಿಲ್ಲಾ ಪಂಪ್‌ಸೆಟ್ ಬಳಕೆದಾರರ ಸಂಘದ ಮುಖಂಡರೊಡನೆ ಚರ್ಚಿಸುತ್ತಿದ್ದಾರೆ. ಅವರು ಈ ಸ್ಪಷ್ಟನೆ ನೀಡಿದ್ದಾರೆ. ಜೊತೆಗೆ ಮೀಟರ್ ಅಳವಡಿಸಿದರೆ ಮಾತ್ರ ಕೆಪಿಟಿಸಿಎಲ್ ನ್ನು ಉಳಿಸಬಹುದು ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ.


ರಾಮದುರ್ಗದಲ್ಲಿ ಭಾರಿ ಪ್ರತಿಭಟನೆ

ಅವರ ಸಮರ್ಥನೆಯನ್ನು ನಿಯೋಗದಲ್ಲಿದ್ದ ಜಿಲ್ಲಾ ಸಂಚಾಲಕ ವಿ.ಪಿ.ಕುಲಕರ್ಣಿ ಖಂಡತುಂಡವಾಗಿ ತಳ್ಳಿಹಾಕಿ ಅವರ ಸಮರ್ಥನೆಯ ಪೊಳ್ಳುತನವನ್ನು ಅವರೆದುರೇ ಬಯಲಿಗೆಳೆದಿದ್ದಾರೆ.

ರಾಮದುರ್ಗದಲ್ಲಿ ಜನವರಿ 31 ರಂದು ನಡೆದ ಬೃಹತ್ ಪ್ರತಿಭಟನಾ ಸಭೆಯುನ್ನುದ್ದೇಶಿಸಿ ವ್ಹಿ.ಪಿ.ಕುಲಕರ್ಣಿ ಅವರು ಮಾತನಾಡಿ, ಈ ಹಿಂದೆ ಕೆಪಿಟಿಸಿಎಲ್‌ನ್ನು ವಿಭಜಿಸಿ ನಾಲ್ಕು ಪ್ರತ್ಯೇಕ ಕಂಪನಿಗಳನ್ನು ಮಾಡಿದ್ದನ್ನು, ಅವುಗಳ ಆಸ್ತಿಯನ್ನು ಮೌಲ್ಯಮಾಪನ ಮಾಡಿ ಅಂಬಾನಿ ಮುಂತಾದವರಿಗೆ ಒಪ್ಪಿಸಲು ಪ್ರಯತ್ನಿಸಿದ್ದನ್ನು ರೈತರು ತೀವ್ರ ಪ್ರತಿಭಟನೆ ನಡೆಸಿ ತಡೆಹಿಡಿದಿದ್ದನ್ನು ನೆನಪಿಸಿದರು.

2002 ರಲ್ಲಿ ಒರಿಸ್ಸಾದ ರ್ಲೀಯಿಯರ್ ಕಂಪನಿಯವರು ಬೆಂಗಳೂರು ಜಿಲ್ಲೆಯ ಬೂದಿಗೆರೆ, ತುಮಕೂರು ಜಿಲ್ಲೆಯ ನೊಣವಿನಕೆರೆ ಮತ್ತು ಕೋಲಾರ ಜಿಲ್ಲೆಯ ಕೈವಾರದಲ್ಲಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿದ್ದ ಕ್ರಮವನ್ನು ರೈತರು ವಿಫಲಗೊಳಿಸಿದ್ದನ್ನು ಜ್ಞಾಪಿಸಿದರು. ಖಾಸಗೀಕರಣ ಪ್ರಕ್ರಿಯೆ ಮುಂದುವರೆದರೆ ಎಸ್.ಎಂ.ಕೃಷ್ಣ ಸರ್ಕಾರಕ್ಕೆ ಒದಗಿದ ಗತಿಯೇ ನಿಮಗೂ ಖಂಡಿತ ಎಂದರು.

ಪಂಪ್‌ಸೆಟ್ ಬಳಕೆದಾರರ ಸಂಘದ ರಾಮದುರ್ಗ ತಾಲ್ಲೂಕು ಅಧ್ಯಕ್ಷರಾದ ಶಂಕರಯ್ಯ ಹಿರೇಮಠ ಅವರು ಮಾತನಾಡಿ ಸಂಘಟಿತ ಹೋರಾಟದಿಂದ ಮಾತ್ರ ಕೃಷಿ ಉಳಿವು ಸಾಧ್ಯ ಎಂದು, ಅತ್ಯಂತ ಯಶಸ್ವೀ ಪ್ರತಿಭಟನೆಗೆ ಕಾರಣರಾದ ರೈತಬಾಂಧವರನ್ನು ಅಭಿನಂದಿಸಿದರು.

ಖಾಸಗೀಕರಣ ವಿರೋಧಿಸಿ ನಡೆದ ಈ ಭಾರಿ ಪ್ರತಿಭಟನಾ ಕಾರ್ಯಕ್ರಮದಲ್ಲಿ ತಾಲೂಕಿನ ಎಲ್ಲಾ ಹಿರಿಯ ರೈತಬಾಂಧವರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಹೆಚ್ಚಳ ವಿರೋಧಿಸಿ ಪ್ರತಿಭಟನೆ

ದೇಶದ ಅತ್ಯಂತ ಪ್ರಮುಖ ಆಯಕಟ್ಟಿನ ಕ್ಷೇತ್ರವಾಗಿರುವ ಟೆಲಿಕಾಂ ರಂಗದಲ್ಲಿ ವಿದೇಶಿ ಹೂಡಿಕೆ ಹೆಚ್ಚಳಕ್ಕೆ ನಿರ್ಧರಿಸಿದ ಕೇಂದ್ರ ಯುಪಿಎ ಸರ್ಕಾರದ ವಿರುದ್ಧ ಎಡಪಕ್ಷಗಳ ನೇತೃತ್ವದಲ್ಲಿ ನಡೆದ ಚಳುವಳಿಗಳ ವರದಿ

ಕೇಂದ್ರದ ಯುಪಿಎ ಸರ್ಕಾರವು ದೂರಸಂಪರ್ಕ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಶೇಕಡಾ 49 ರಿಂದ 74 ಕ್ಕೆ ಏರಿಸಿರುವ ಕೇದ್ರ ಸರ್ಕಾರದ ಕ್ರಮವನ್ನು ವಿರೋಧಿಸಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಬೆಂಗಳೂರು ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಜಂಟಿಯಾಗಿ ಬಿಎಸ್‌ಎನ್‌ಎಲ್ ವಿಭಾಗೀಯ


ಬೆಂಗಳೂರಿನಲ್ಲಿ ಎಡಪಕ್ಷಗಳ ಪ್ರತಿಭಟನೆ

ಕಛೇರಿ ಎದುರು ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಿದವು. ಸಿಪಿಐನ ಕಾಂ. ಅನಂತಸುಬ್ಬರಾವ್ ಮತ್ತು ಸಿಪಿಐ(ಎಂ)ನ ಕಾಂ. ಜಿ.ಎನ್.ನಾಗರಾಜ್ ಮಾತನಾಡಿ ಕೇಂದ್ರ ಸರ್ಕಾರದ ವಿದೇಶಿ ವ್ಯಾಮೋಹವನ್ನು ತೀವ್ರವಾಗಿ ಖಂಡಿಸಿದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಮತ್ತು ಸಿಪಿಐನ ಜಿಲ್ಲಾ ಕಾರ್ಯದರ್ಶಿ ಎಂ.ಡಿ.ಹರಿಗೋವಿಂದ್ ರವರು ವಹಿಸಿದ್ದರು.

ರಾಯಚೂರು ಸಿಪಿಎಂ ಪಕ್ಷದ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಫೆಬ್ರವರಿ 7 ರಂದು ಕೇಂದ್ರ ಸ್ವಾಮ್ಯದ ರಾಯಚೂರಿನ ಪ್ರಧಾನ ಅಂಚೆ ಕಚೇರಿಯ ಮುಂದೆ ಕೇಂದ್ರ ಹಣಕಾಸು ಸಚಿವ ಪಿ.ಚಿದಂಬರಂ ಇವರ ಪ್ರತಿಕೃತಿ ದಹಿಸುವುದುರ ಮುಖಾಂತರ ಪ್ರತಿಭಟನೆಗೆ ಧರಣಿ ನಡೆಸಲಾಯಿತು.

ಕೇಂದ್ರ ಸರ್ಕಾರವು ಸಾಮಾನ್ಯ ಕನಿಷ್ಟ ಕಾರ್ಯಕ್ರಮುಗಳಿಗೆ ವಿರುದ್ಧವಾಗಿ ವಿದೇಶಿ ಬ್ಯಾಂಕುಗಳಿಗೆ ಅವಕಾಶ, ಲಾಭಾದಾಯಕ ಸಾರ್ವಜನಿಕ ಉದ್ದಿಮೆಗಳಿಂದ ಬಂಡವಾಳ ಹಿಂತೆಗೆತ, ಹೊಸ ವಿದ್ಯುಚ್ಛಕ್ತಿ ಮಸೂದೆ ಜಾರಿಗೆ ತರುವ ಕೇಂದ್ರ ಸರ್ಕಾರದ ಕ್ರಮವನ್ನು ಪ್ರತಿಭಟನಾಕಾರರು ಪ್ರತಿಭಟನೆಯ ಮುಖಾಂತರ ವಿರೋಧಿಸಿದರು. ಈ ಎಲ್ಲಾ ನೀತಿಗಳನ್ನು ವಾಪಸ್ಸು ಪಡೆಯುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಎಂ ಪಕ್ಷದ ರಾಜ್ಯ ಮುಖಂಡರಾದ ಶಾಂತರಾಮ ನಾಯಕ್, ಕೇಂದ್ರದ ಯುಪಿಎ ಸರ್ಕಾರವು ಜನವಿರೋಧಿ ಆರ್ಥಿಕ ನೀತಿಗಳನ್ನು ಜಾರಿ ಮಾಡಿ ವಿದೇಶಿ ಕಂಪನಿಗಳಿಗೆ ಅವಕಾಶ ನೀಡುತ್ತಿರುವುದನ್ನು ಖಂಡಿಸಿದರು. ಇಂತಹ ಜನವಿರೋಧಿ ನೀತಿಗಳ ವಿರುದ್ಧ ಇಡೀ ಜನ ಸಮುದಾಯವು ಪ್ರತಿಭಟಿಸಿ ಹಿಮ್ಮೆಟ್ಟಿಸಲು ಕರೆ ನೀಡಿದರು. ಸಿಪಿಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಮಲ್ಲಯ್ಯ ಜಾಲಹಳ್ಳಿ, ಜಿಲ್ಲಾ ಮುಖಂಡರಾದ ಕರಿಯಪ್ಪ ಲಚ್ಚೊಳ್ಳಿಯವರು ಮಾತನಾಡಿ ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳವನ್ನು ಹೆಚ್ಚಳ ಮಾಡಲು ಹೊರಟಿರುವ ಕೇಂದ್ರ ಸರ್ಕಾರವು ಸಾಮಾನ್ಯ ಕನಿಷ್ಟ ಕಾರ್ಯಕ್ರಮಕ್ಕೆ ವಿರುದ್ಧವಾಗಿ ನಡೆಯುತ್ತಿದ್ದು ಎಡಪಕ್ಷಗಳ ಅಭಿಪ್ರಾಯಕ್ಕೆ ಹಾಗೂ ಜನತೆಗೆ ವಿರುದ್ಧವಾಗಿ ನಡೆಯುತ್ತಿದ್ದು ದೇಶದ ಜನತೆಗೆ ದ್ರೋಹವೆಸಗುತ್ತಿರುವ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿದರು.



ಈ ಪ್ರತಿಭಟನೆಯ ನೇತೃತ್ವವನ್ನು ಸಿಪಿಎಂ ಪಕ್ಷದ ಸ್ಥಳೀಯ ಕಾರ್ಯದರ್ಶಿ ಡಿ.ಎಸ್.ಶರಣಬಸವ, ಕೆ.ಜಿ.ವೀರೇಶ್, ಈರಣ್ಣ, ಖಾಜಾಹುಸೇನ್, ರಸೂಲ್ ಅಹ್ಮದ್, ತಿಪ್ಪಣ್ಣ ಶಾಖಾವಾದಿ, ಲಕ್ಷ್ಮಣ, ಪಂಪಣ್ಣ, ಶಿವಕುಮಾರ್, ಮಲ್ಲೇಶಪ್ಪ, ನಾಗೇಂದ್ರ, ಶ್ಯಾಮಸುಂದರ್, ವೀರನಗೌಡ, ನಾರಾಯಣ, ಅರುಣ್ ಕುಮಾರ್, ಪುಟ್ಟರಾಜ್, ನರಸಿಂಹಲು, ಸೈಯದ್ ಪೀರ್, ವಾಬಖಾನ್, ರವಿಕುಮಾರ್ ವಹಿಸಿದ್ದರು.


ಉಡುಪಿಯಲ್ಲಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ನಿತ್ಯಾನಂದಸ್ವಾಮಿ, ಶಂಕರ್ ಮತ್ತಿತರರು

ಉಡುಪಿ: ಸಾರ್ವಜನಿಕ ರಂಗದ ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರಹೂಡಿಕೆಯನ್ನು ಶೇ 49 ರಿಂದ ಶೇ 74 ಕ್ಕೆ ಏರಿಸುವಕೇಂದ್ರದ ಯುಪಿಎ ಸರ್ಕಾರದ ತೀರ್ಮಾನದ ವಿರುದ್ಧ ಫೆ 8 ರಂದು ಉಡುಪಿಯಲ್ಲಿ ಭಾರತ ಸಂಚಾರ ನಿಗಮದ ಕಛೇರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಯಿತು. ಎಡಪಕ್ಷಗಳ ಮತ್ತು ಎಡ ಕಾರ್ಮಿಕ ಸಂಘಟನೆಗಳ ಅಖಿಲ ಭಾರತ ಕರೆಯ ಮೇರೆಗೆ ಈ ಪ್ರದರ್ಶನ ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತಾ 'ಟೆಲಿಕಾಂ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸುವುದು ದೇಶದ ರಕ್ಷಣೆಯ ದೃಷ್ಟಿಯಿಂದ ಅಪಾಯಕಾರಿಯಾಗಿದೆ ಮಾತ್ರವಲ್ಲ ಯುಪಿಎ ಸರ್ಕಾರ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಜನತೆಗೆ ನೀಡಿದ ಭರವಸೆಗೆ ವಿರುದ್ಧವಾಗಿದೆ' ಎಂದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಶ್ವನಾಥ ರೈ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಡೇವಿಡ್ ಕರ್ಕಡ, ಮಹಾಬಲ ವಡೇರಹೋಬಳಿ, ವಿ.ಚಂದ್ರಶೇಖರ್ ಅವರಲ್ಲದೆ ವಿಮಾ ನೌಕರರು, ಬಿ.ಎಸ್.ಎನ್.ಎಲ್. ನೌಕರರು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಕೊನೆಯಲ್ಲಿ ಬಿಎಸ್‌ಎನ್‌ಎಲ್ ನೌಕರರ ಸಂಘದ ಮುಖಂಡರಾದ ಅಪ್ಪಾಜಿರಾವ್ ವಂದಿಸಿದರು.

ಜನರ ನಡುವೆ ನಡೆವ ವಿಮಾ ನೌಕರರ ಎಂಟು ಜಾಥಾಗಳು

ಬೆಂಗಳೂರಿನಲ್ಲಿ ವಿಮಾ ನೌಕರರ ಸಂಘದ ಅಖಿಲ ಭಾರತ ಮಹಾ ಸಮ್ಮೇಳನ

ಎಲ್ಐಸಿ, ಜಿಐಸಿ ಸಾರ್ವಜನಿಕ ವಲಯದ ನಾಲ್ಕು ಸಾಮಾನ್ಯ ವಿಮಾ ಕಂಪನಿಗಳಲ್ಲಿ ದುಡಿಯುತ್ತಿರುವ ನೌಕರರ ಅತಿ ದೊಡ್ಡ ಸಂಘಟನೆಯಾದ ಅಖಿಲ ಭಾರತ ವಿಮಾ ನೌಕರರ ಸಂಘದ 20ನೇ ಮಹಾ ಸಮ್ಮೇಳನ ಬೆಂಗಳೂರಿನಲ್ಲಿ ನಡೆಯಲಿದೆ. ಫೆಬ್ರವರಿ 19 ರಿಂದ 24ರವರೆಗೆ ಡಾ.ಅಂಬೇಡ್ಕರ್ ಭವನದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಸಂಸತ್ ಸದಸ್ಯರಾದ ರೂಪ್‌ಚಂದ್ ಪಾಲ್ ಉದ್ಘಾಟಿಸಲಿದ್ದಾರೆ. ಯೋಜನಾ ಆಯೋಗದ ಸದಸ್ಯರಾಗಿದ್ದ ಹಾಗೂ ದಕ್ಷಿಣ ಆಫ್ರಿಕಾಕ್ಕೆ ಭಾರತದ ರಾಯಭಾರಿಯಾಗಿದ್ದ ಡಾ.ಎಲ್.ಸಿ.ಜೈನ್ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿರುತ್ತಾರೆ.

ಈ ಸಮ್ಮೇಳನದ ಸಿದ್ಧತೆ ಭರದಿಂದ ನಡೆಯುತ್ತಿದ್ದು ಇದರ ಒಂದು ಭಾಗವಾಗಿ ರಾಜ್ಯಾದ್ಯಂತ ಎಂಟು ಜಾಥಾಗಳನ್ನು ಸಂಘಟಿಸಲಾಗುತ್ತಿದೆ. ಫೆಬ್ರವರಿ 13 ರಿಂದ ರಾಜ್ಯದ ಮೂಲೆ ಮೂಲೆಗಳನ್ನು ತಲುಪಿ ಫೆಬ್ರವರಿ 18 ರಂದು ಬೆಂಗಳೂರು ಸೇರಲಿವೆ.

ಮೊದಲ ಜಾಥಾ : ಫೆಬ್ರವರಿ 13 ರಂದು ಬೀದರ್‌ದಿಂದ ಆರಂಭವಾಗಿ 14 ರಂದು ಬಸವಕಲ್ಯಾಣ, ಹುಮ್ನಾಬಾದ್, ಹಳ್ಳಿಖೇಡ, ಕಮಲಾಪುರ, ಗುಲ್ಬರ್ಗಾ, ಜೇವರ್ಗಿ, ಶಹಾಪುರ ತಲುಪುತ್ತದೆ. ಫೆ. 15 ರಂದು ಖಾನಾಪುರ, ಯಾದಗೀರ್, ದೇವದುರ್ಗ, ಜಾಲಹಳ್ಳಿ, ಹಟ್ಟಿ, ಸಿರವಾರದ ಮೂಲಕ ರಾಯಚೂರು ತಲುಪಲಿದೆ. ಫೆ. 16 ರಂದು ಮಾನ್ವಿ, ಪೋತ್ನೋಳ್, ಸಿಂಧನೂರು, ತಾವರೆಗೆರೆ, ಕುಷ್ಟಗಿ, ಕೊಪ್ಪಳ, ವಡ್ಡರಹಟ್ಟಿ ಮೂಲಕ ಗಂಗಾವತಿ ತಲುಪುತ್ತದೆ. ಫೆಬ್ರವರಿ 17 ರಂದು ಕಂಪ್ಲಿ, ಹೊಸಪೇಟೆ, ತೋರಣಗಲ್, ಬಳ್ಳಾರಿ, ಸಂಡೂರು, ಕೂಡ್ಲಿಗಿ, ಕೊಟ್ಟೂರು ಹೆಚ್.ಡಿ.ಹಳ್ಳಿ, ಹರಪನಹಳ್ಳಿಯ ಮೂಲಕ ಮಧುಗಿರಿ ತಲುಪುತ್ತದೆ. 18 ರಂದು ಮಧುಗಿರಿ, ಕೊಟರೆಗೆರೆ, ಗೌರಿಬಿದನೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಯಲಹಂಕ ಮೂಲಕ ಬೆಂಗಳೂರು ತಲುಪಲಿದೆ.

ಜಾಥಾ-2 : ಬೆಳಗಾವಿಯಿಂದ ಫೆಬ್ರವರಿ 14 ರಂದು ಹೊರಟು ಗೋಕಾಕ, ಅಥಣಿ ಮೂಲಕ ಜಮಖಂಡಿ ತಲುಪುತ್ತದೆ. 15 ರಂದು ಬಾದಾಮಿ, ರಾಮದುರ್ಗ, ಸವದತ್ತಿ ಮೂಲಕ ಧಾರವಾಡ ತಲುಪುತ್ತದೆ. ಫೆಬ್ರವರಿ 16 ರಂದು ನವಲಗುಂದ, ಗದಗ ಮೂಲಕ ಹುಬ್ಬಳ್ಳಿ ತಲುಪುತ್ತದೆ. 17 ರಂದು ಶಿರಸಿ, ಹಾವೇರಿ ಮೂಲಕ ರಾಣೆಬೆನ್ನೂರು ತಲುಪುತ್ತದೆ. 18 ರಂದು ಸಿರಾ, ತುಮಕೂರು, ನೆಲಮಂಗಲದ ಮೂಲಕ ಬೆಂಗಳೂರು ತಲುಪಲಿದೆ.

ಜಾಥಾ -3 : ಮೈಸೂರಿನ ಗಾಂಧಿಚೌಕದಲ್ಲಿ ಫೆಬ್ರವರಿ 15 ರಂದು ಉದ್ಘಾಟನೆಗೊಂಡು ಪಾಂಡವಪುರ, ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು, ಕೊಳ್ಳೆಗಾಲದ ಮೂಲಕ ಮಳವಳ್ಳಿ ತಲುಪುತ್ತದೆ. ಫೆಬ್ರವರಿ 16 ರಂದು ಮಳವಳ್ಳಿಯಿಂದ ಹೊರಟು ಬನ್ನೂರು, ಶ್ರೀರಂಗಪಟ್ಟಣ, ಪಾಂಡವಪುರ, ಕೆ.ಆರ್.ಪೇಟೆ, ಮಂಡ್ಯ, ಮದ್ದೂರು, ಶಿವಪುರದ ಮೂಲಕ ಚನ್ನಪಟ್ಟಣ ತಲುಪುತ್ತದೆ. ಮರುದಿನ ರಾಮನಗರ, ಕನಕಪುರದ ಮೂಲಕ ಬೆಂಗಳೂರು ತಲುಪುತ್ತದೆ.

ಜಾಥಾ - 4 : ಫೆಬ್ರವರಿ 16 ರಂದು ವಿರಾಜಪೇಟೆಯಿಂದ ಹೊರಟು ಮಡಿಕೇರಿ, ಮಾದಾಪುರ, ಸೋಮವಾರಪೇಟೆ, ಕುಶಾಲನಗರ, ಬೈಲಕುಪ್ಪೆ, ಪರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ ತಲುಪುತ್ತದೆ. 17 ರಂದು ಭೇರ್ಯ, ಹೊಳೆನರಸೀಪುರ, ಸಕಲೇಶಪುರ, ಬಳುಪೇಟೆ, ಹಾಸನದ ಮೂಲಕ ಅರಸೀಕೆರೆ ತಲುಪಿತ್ತದೆ. 18 ರಂದು ತಿಪಟೂರು, ತುರುವೇಕೆರೆ, ಕುಣಿಗಲ್ ಮೂಲಕ ಬೆಂಗಳೂರು ತಲುಪುತ್ತದೆ.

ಜಾಥಾ -5 : ಫೆಬ್ರವರಿ 16 ರಂದು ಹರಿಹರದಿಂದ ಆರಂಭಿಸಿ ದಾವಣಗೆರೆ, ಚಿತ್ರದುರ್ಗದ ಮೂಲಕ ಹಿರಿಯೂರು ತಲುಪುತ್ತದೆ. ಮರುದಿನ ಪಾವಗಡದ ಮೂಲಕ ಬಾಗೇಪಲ್ಲಿ ತಲುಪುತ್ತದೆ. ಫೆಬ್ರವರಿ 18 ರಂದು ಚಿಂತಾಮಣಿ, ಕೋಲಾರದ ಮೂಲಕ ಕೆ.ಜಿ.ಎಫ್ ತಲುಪುತ್ತದೆ.

ಜಾಥಾ - 6: ಫೆಬ್ರವರಿ 16 ರಂದು ಶಿಕಾರಿಪುರದಿಂದ ಹೊರಟು ಹೊನ್ನಾಳಿ, ಬಸವಪಟ್ಟಣ, ಚನ್ನಗಿರಿ ಮೂಲಕ ಶಿವಮೊಗ್ಗ ತಲುಪುತ್ತದೆ. ಫೆಬ್ರವರಿ 17 ರಂದು ಭದ್ರಾವತಿ, ತರಿಕೆರೆ, ಬೀರೂರು, ಕಡೂರು ಮೂಲಕ ಬೆಂಗಳೂರು ತಲುಪುತ್ತದೆ. ಫೆಬ್ರವರಿ 18 ರಂದು ಬೆಂಗಳೂರು ನಗರದಲ್ಲಿ ಈ ಜಾಥಾ ಸಂಚರಿಸುತ್ತದೆ.

ಜಾಥಾ - 7: ಫೆಬ್ರವರಿ 16 ರಂದು ಕೊಪ್ಪದಿಂದ ಹೊರಟು ತೀರ್ಥಹಳ್ಳಿ, ಶೃಂಗೇರಿ, ಜಯಪುರ, ಬಾಳೆಹೊನ್ನೂರು, ಆಲ್ದೂರು ಮೂಲಕ ಚಿಕ್ಕಮಗಳೂರು ತಲುಪುತ್ತದೆ. ಮರುದಿನ ಚಿಕ್ಕ ಮಗಳೂರಿನಿಂದ ಹೊರಟು ಮೂಡಿಗೆರೆ ಮೂಲಕ ಬೆಂಗಳೂರು ತಲುಪಲಿದೆ. ಫೆಬ್ರವರಿ 18 ರಂದು ಈ ಜಾಥಾವೂ ಬೆಂಗಳೂರು ನಗರದಲ್ಲಿ ಸಂಚರಿಸಲಿದೆ.

ಜಾಥಾ-8 : ಫೆಬ್ರವರಿ 16 ರಂದು ಕುಂದಾಪುರದಿಂದ ಹೊರಟು ಬ್ರಹ್ಮಾವರ, ಉಡುಪಿ, ಕಾಪು, ಮುಲ್ಕಿ, ಸುರತ್ಕಲ್ ಮೂಲಕ ಮಂಗಳೂರು ತಲುಪುತ್ತದೆ. ಮರುದಿನ ಮಂಗಳೂರಿನಿಂದ ಭಂಟ್ವಾಳ, ಪುತ್ತೂರು ಮೂಲಕ ಉಪ್ಪಿನಂಗಡಿ ತಲುಪುತ್ತದೆ. ಅಲ್ಲಿಂದ ಅದು ನೇರವಾಗಿ ಬೆಂಗಳೂರು ತಲುಪುತ್ತದೆ. ಸಾರ್ವಜನಿಕ ವಿಮಾ ವಲಯದ ರಕ್ಷಣೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ನೀತಿಗಳು ಹಾಗೂ ಜನರ ಜ್ವಲಂತ ಸಮಸ್ಯೆಗಳ ಕುರಿತು ರಾಜಕೀಯ ಪ್ರಚಾರಾಂದೋಲನ ಮಾಡುವುದು ಈ ಜಾಥಾದ ಮುಖ್ಯ ಉದ್ದೇಶವಾಗಿದೆ. ಇದನ್ನು ಎಲ್ಲರೂ ಬೆಂಬಲಿಸಬೇಕು, ಯಶಸ್ವಿಗೊಳಿಸಬೇಕು.

ಸಾಕೇತ್ ಸಾಯಬೇಕಾಗಿರಲಿಲ್ಲ !

ನಿತ್ಯಾನಂದಸ್ವಾಮಿ

ಕರ್ನಾಟಕದಲ್ಲಿ ನಕ್ಸಲ್‌ವಾದದ ಬೀಜವನ್ನು ಬಿತ್ತಲು ನಿಯೋಜಿತನಾಗಿದ್ದ ಸಾಕೇತ್ ರಾಜನ್ ಸಾವಿನ ಬಗ್ಗೆ ಚರ್ಚೆ ನಡೆಯುತ್ತಿದೆ. ಇನ್ನೂ ಕೆಲಕಾಲ ಈ ಚರ್ಚೆ ಮುಂದುವರೆಯಲಿದೆ. ಆತ ಸತ್ತಿದ್ದು ಎನ್‌ಕೌಂಟರ್‌ನಲ್ಲಿ ಎನ್ನುತ್ತಾರೆ ಪೊಲೀಸರು. ಅದೊಂದು ನಕಲಿ ಎನ್‌ಕೌಂಟರ್ ಎನ್ನುತ್ತಾರೆ ನಕ್ಸಲೀಯರ ಬೆಂಬಲಿಗರು. ಸಾಕೇತನ ಮೃತ ದೇಹವನ್ನು ಅಂತ್ಯಸಂಸ್ಕಾರ ಮಾಡಲು 'ಶಾಂತಿಗಾಗಿ ನಾಗರಿಕ ವೇದಿಕೆ'ಗೆ ನೀಡದೆ ಪೊಲೀಸರೇ ಸುಟ್ಟು ಹಾಕಿದ್ದು ಏಕೆ ಎಂದು ಪ್ರಶ್ನಿಸಲಾಗುತ್ತಿದೆ. ಪೊಲೀಸರು ತಮ್ಮ ಅಪರಾಧವನ್ನು ಮುಚ್ಚಿಹಾಕಲು ಸಾಕೇತ್ ಮತ್ತು ಶಿವಲಿಂಗಯ್ಯನ ದೇಹಗಳನ್ನು ಅವಸರವಸರದಲ್ಲಿ ಅಂತ್ಯಸಂಸ್ಕಾರ ಮಾಡಿದ್ದಾರೆ ಎಂದು ಆರೋಪಿಸಲಾಗುತ್ತಿದೆ. ಅಭಿವೃದ್ಧಿ ಆಯುಕ್ತ ಚಿರಂಜೀವಿ ಸಿಂಗ್ ನೇತೃತ್ವದಲ್ಲಿ ರಚಿಸಲಾದ ತನಿಖಾ ತಂಡವು ಸತ್ಯಾಂಶವನ್ನು ಬಯಲಿಗೆ ತರಬಹುದೇ? ಕಾದು ನೋಡಬೇಕು.

ಪ್ರತಿಕಾರದ ಪ್ರತಿಧ್ವನಿ

ಸಾಕೇತ್ ಸಾವಿನ ಸುತ್ತ ಭುಗಿಲೆದ್ದಿರುವ ಚರ್ಚೆ ತಣ್ಣಗಾಗುವ ಮೊದಲೇ ದೂರದ ಪಾವಗಡದಲ್ಲಿ ಪ್ರತಿಕಾರದ ಪ್ರತಿಧ್ವನಿಯಾಗಿದೆ. ಆಂಧ್ರ ಪ್ರದೇಶದ ಗಡಿಯಾಚೆಯಿಂದ ಬಂದ ನೂರಾರು ಜನ ನಕ್ಸಲೀಯರು ಮೀಸಲು ಪೊಲೀಸ್ ತುಕಡಿಯ ಮೇಲೆ ಗ್ರನೇಡ್ ಹಾಗೂ ಗುಂಡಿನ ಸುರಿಮಳೆಗರೆದು 6 ಜನ ಪೊಲೀಸರನ್ನು ಹತ್ಯೆ ಮಾಡಿದ್ದಾರೆ. ಸಾಕೇತ್ ಹಾಗೂ ಶಿವಲಿಂಗಯ್ಯ ಅವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲು ನಡೆಸಲಾದ ಸಭೆಯಲ್ಲಿ ಪಾಲ್ಗೊಂಡ ಗದ್ದರ್ ಮತ್ತು ಇತರರು ಘೋಷಿಸಿದಂತೆ ಸಾಕೇತ್ ಮತ್ತು ಶಿವಲಿಂಗಯ್ಯನನ್ನು ಕೊಂದುಹಾಕಿದ ಪೊಲೀಸರ ಕ್ರಮಕ್ಕೆ ಪ್ರತಿಕಾರವಾಗಿ ಪೊಲೀಸರನ್ನು ಹತ್ಯೆ ಮಾಡಲಾಗಿದೆ. ಈ ಸೇಡಿನ ಕ್ರಮದಿಂದಾಗಿ



ನಕ್ಸಲ್‌ವಾದದ ಕುರಿತಾದ ಚರ್ಚೆಯ ವ್ಯಾಪ್ತಿ ಇನ್ನಷ್ಟು ವಿಸ್ತಾರವಾಗಲಿದೆ. ಈ ಚರ್ಚೆಯಲ್ಲಿ ಏಳುವ ಹತ್ತಾರು ಪ್ರಶ್ನೆಗಳಲ್ಲಿ 'ಸಾಕೇತ್ ಸಾಯಬೇಕಾಗಿತ್ತೇ?' ಎಂಬ ಪ್ರಶ್ನೆಯೂ ಒಂದು ಪ್ರಮುಖ ಪ್ರಶ್ನೆಯಾಗಲಿದೆ.

ಕರ್ನಾಟಕದಲ್ಲಿ ಇದುವರೆಗೆ ಯಾವುದೇ ಹಿಂಸಾತ್ಮಕ ಕೃತ್ಯಗಳು ನಡೆದಿಲ್ಲ ಎಂದು ಹೇಳಿಕೊಂಡು ಕೆಲವು ಬುದ್ಧಿ ಜೀವಿಗಳು ನಕ್ಸಲೀಯರ ಬಗ್ಗೆ ಸಹಾನುಭೂತಿ ಹೊಂದಿದ್ದರು. ಇನ್ನು ಕೆಲವರು ಬಹಿರಂಗವಾಗಿ ಅವರನ್ನು ಬೆಂಬಲಿಸುತ್ತಿದ್ದರು. ಇಲ್ಲಿಂದ ಅವರ ಸತ್ವಪರೀಕ್ಷೆ

ಪಶ್ಚಿಮ ಘಟ್ಟದ ಜನರ ಸಮಸ್ಯೆಗಳ ಇತ್ಯರ್ಥಕ್ಕೆ ಮಾವೋಯಿಸ್ಟ್ ಸಾಕೇತ್ ಸಾಯಲೇಬೇಕಿತ್ತೆ? ಬೇರೆ ಮಾರ್ಗಗಳೇ ಇಲ್ಲವೇ?

ಆರಂಭವಾಗಲಿದೆ.

ಭಾರತದಲ್ಲಿರುವುದು ನಿಜವಾದ ಪ್ರಜಾಪ್ರಭುತ್ವ ಅಲ್ಲವೆಂದೂ ಅದು ಶೋಷಕ ವರ್ಗಗಳ ಪ್ರಭುತ್ವ ಎಂದೂ ಒಪ್ಪುವ ವಿಷಯವೇ. ಶೋಷಕ ವರ್ಗಗಳ ಪ್ರಭುತ್ವವು ದಮನಕಾರಿಯಾಗಿರುತ್ತದೆ ಎಂಬ ವಿಷಯದಲ್ಲೂ ಸಂದೇಹವಿಲ್ಲ. ಆದರೆ ಅಂತಹ ದಮನಕಾರಿ ಪ್ರಭುತ್ವದ ವಿರುದ್ಧ ಶಸ್ತ್ರಗಳನ್ನು ಎತ್ತಿಕೊಳ್ಳಬೇಕಾದವರು ಯಾರು? ಮತ್ತು ಯಾವಾಗ? ನೈಜ ಪ್ರಜಾಪ್ರಭುತ್ವಕ್ಕಾಗಿ ಜನತೆ ವಿಶಾಲವಾದ ಚಳುವಳಿಯಲ್ಲಿ ಮುನ್ನಡೆಯುತ್ತಿರುವಾಗ ಹಾಗೂ ಪ್ರಜಾಪ್ರಭುತ್ವೀಯ ಸಂಸ್ಥೆಗಳನ್ನು ಜನತೆ ಪರಿಣಾಮಕಾರಿ ಬಳಸಲು ತೊಡಗಿದಾಗ ಅಧಿಕಾರ ತಮ್ಮಿಂದ ಜಾರುತ್ತಿದೆ ಎಂದು ಮನಗಂಡ ಆಳುವ ವರ್ಗಗಳು ಅಧಿಕಾರ ತಮ್ಮ ಕೈಯಲ್ಲೇ ಉಳಿಸಿಕೊಳ್ಳಲು ಸಂಸದೀಯ ಪ್ರಜಾಪ್ರಭುತ್ವವನ್ನು ಒಳಗಿನಿಂದ-ಹೊರಗಿನಿಂದ ತಮ್ಮ ಕಾಲಿನಿಂದ ತುಳಿದುಹಾಕುತ್ತಾರೆ ಹಾಗೂ ಚಳುವಳಿಯನ್ನು ಕ್ರೂರವಾಗಿ ದಮನ ಮಾಡಲು ಪ್ರಯತ್ನಿಸುತ್ತಾರೆ. ಅಂತಹ ಸಂದರ್ಭದಲ್ಲಿ ಜನ ತಾವೇ ಶಸ್ತ್ರಾಸ್ತ್ರಗಳನ್ನು ಕೈಗೆ ತೆಗೆದುಕೊಳ್ಳದೇ ತಮ್ಮ ಹಿತಗಳ ರಕ್ಷಣೆ ಆಗಲಾರದು ಎಂದು ಕಂಡುಕೊಳ್ಳುತ್ತಾರೆ. ಆಗ ಶಸ್ತ್ರಗಳು ನಿಜವಾಗಿಯೂ ಬದಲಾವಣೆಯ ಅಸ್ತ್ರಗಳಾಗುತ್ತವೆ.

ನಕ್ಸಲೀಯರು ವೈಯುಕ್ತಿಕ ಹಿಂಸಾಚಾರದಲ್ಲಿ ನಂಬಿಕೆ ಇಟ್ಟವರಾಗಿದ್ದಾರೆ. ಜನತೆಯನ್ನು ಶೋಷಿಸುತ್ತಿರುವ ವರ್ಗ ಶತ್ರುಗಳನ್ನು ಒಬ್ಬೊಬ್ಬರಾಗಿ ಮುಗಿಸಿಬಿಡಬಹುದು ಎಂದು ಅವರು ನಂಬಿದ್ದಾರೆ. ಒಬ್ಬೊಬ್ಬ ಭೂಮಾಲಕನನ್ನು ಕೊಲ್ಲುವ ಮೂಲಕ ಗ್ರಾಮೀಣ ವಿಮೋಚನೆ ಸಾಧ್ಯ ಎಂದು ಅವರು ಪ್ರತಿಪಾದಿಸುತ್ತಾರೆ. ಇಂತಹ ವೈಯುಕ್ತಿಕ ಸಾಹಸಕೃತ್ಯಗಳಿಗೆ ಸಮರಶೀಲ ಯುವಕರು ಆಕರ್ಷಿತರಾಗುತ್ತಾರೆ. ಅವರ ಕ್ರಾಂತಿಕಾರಿ ಪದಪ್ರಯೋಗಗಳಲ್ಲಿ ಅವರ ದಿವಾಳಿಕೋರ ಹಾದಿ ಮರೆಮಾಚಲ್ಪಡುತ್ತದೆ. ಇತಿಹಾಸದಿಂದ ಪಾಠ ಕಲಿಯಲು ಅವರು ನಿರಾಕರಿಸುತ್ತಾರೆ ಪೊಲೀಸ್, ಸೈನ್ಯ, ಕೋರ್ಟ್, ಜೈಲುಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿರುವ ಶೋಷಕ ವರ್ಗಗಳನ್ನು ಕೆಲವೇ ಕೆಲವು ಬಿಸಿರಕ್ತದ ಯುವಕರು ಎದುರಿಸಿ ಸೋಲಿಸಲು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ ಸಾಕೇತ್‌ನಂತಹ ಸಾವಿರಾರು ಯುವಕರನ್ನು ಬಲಿಕೊಡುತ್ತಾ ಬಂದಿದ್ದಾರೆ. ಇಂತಹ ಸಾವುಗಳಿಂದ ಸಾಧಿಸಿದ್ದಾದರೂ ಏನನ್ನು?

ಶೋಷಕ ವರ್ಗಗಳನ್ನು ಕೆಲವೇ ಕೆಲವು ಬಿಸಿರಕ್ತದ ಯುವಕರು ಎದುರಿಸಿ ಸೋಲಿಸಲು ಸಾಧ್ಯವಿಲ್ಲ ಎಂಬ ವಾಸ್ತವವನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಹೀಗಾಗಿ ಸಾಕೇತ್‌ನಂತಹ ಸಾವಿರಾರು ಯುವಕರನ್ನು ಬಲಿಕೊಡುತ್ತಾ ಬಂದಿದ್ದಾರೆ.

ಕಮ್ಯೂನಿಸ್ಟ್ ಪಕ್ಷಗಳ ಮೇಲೆ ಗುರಿ

ಪಶ್ಚಿಮ ಬಂಗಾಳದ ನಕ್ಸಲ್‌ಬಾರಿ ಎಂಬ ಹಳ್ಳಿಯಲ್ಲಿ ಹುಟ್ಟಿಕೊಂಡ ನಕ್ಸಲ್‌ವಾದದ ಯಾವುದೇ ಕುರುಹು ಇಂದು ಅಲ್ಲಿ ಇಲ್ಲ. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅದಕ್ಕೆ ಇಂದು ಜನ ಬೆಂಬಲವಿಲ್ಲ. ಅಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ಬಲಿಷ್ಠವಾಗಿ ಬೆಳೆದಿರುವುದರಿಂದ ಅಲ್ಲಿ ಜನತೆ ದಾರಿ ತಪ್ಪುವ ಸಾಧ್ಯತೆಗಳಿಲ್ಲ. ಪಶ್ಚಿಮ ಬಂಗಾಳದ ಗ್ರಾಮೀಣ ಜನತೆ ತಮ್ಮ ಭೂಮಿಯ ಹಕ್ಕಿಗಾಗಿ ನಡೆಸಿದ ಸುದೀರ್ಘ ಚಳುವಳಿಯ ಸಂದರ್ಭದಲ್ಲಿ



ಭೂಮಾಲಕರ ಗುಂಡಾಗಳನ್ನು ಎದುರಿಸುವಾಗ ಶಸ್ತ್ರಗಳನ್ನು ಕೈಗೆತ್ತಿಕೊಂಡಿದ್ದಾರೆ ಮತ್ತು ಅವುಗಳಿಂದ ತಮ್ಮನ್ನು ತಮ್ಮ ಭೂಮಿಯನ್ನು ಉಳಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ವ್ಯಾಪಿಸಿದ ಈ ವರ್ಗಸಮರದ ಭಾಗವಾಗಿ ರಾಜ್ಯದಲ್ಲಿ ಎಡರಂಗ ಸರ್ಕಾರವು ಅಧಿಕಾರಕ್ಕೆ ಬಂದಾಗ ಭೂಸುಧಾರಣಾ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಭೂಮಿಯ ಪ್ರಶ್ನೆಯನ್ನು ಒಂದು ಹಂತದಲ್ಲಿ ಇತ್ಯರ್ಥಪಡಿಸಿತು. ಹೀಗಾಗಿ ನಕ್ಸಲ್‌ವಾದಕ್ಕೆ ಅಲ್ಲಿ ಅವಕಾಶವೇ ಇಲ್ಲದಂತಾಯಿತು.

ಚುನಾವಣೆಗಳಲ್ಲಿ ಭಾಗವಹಿಸುವುದನ್ನು ಒಪ್ಪದಿರುವ ನಕ್ಸಲೀಯರು ಪಶ್ಚಿಮ ಬಂಗಾಳದ ಅನುಭವದಿಂದ ಪಾಠ ಕಲಿಯಲು ಸಿದ್ಧರಿಲ್ಲ. ಭೂಮಿಯ ಹಕ್ಕಿಗಾಗಿ ಭೂಮಾಲಿಕರೊಂದಿಗೆ ಪ್ರತ್ಯಕ್ಷ ಸಂಘರ್ಷದಲ್ಲಿ ತೊಡಗಿದ್ದ ಗ್ರಾಮೀಣ ಬಡವರಿಗೆ ಚುನಾವಣೆಯಲ್ಲಿ ಗೆದ್ದು ಬಂದ ಎಡ ರಂಗದ ಸರ್ಕಾರ ರಕ್ಷಣೆ ನೀಡಿತು. ಭೂಹೋರಾಟದಲ್ಲಿ ತೊಡಗಿದ್ದ ಬಡವರನ್ನು ಪೊಲೀಸ್ ಮೂಲಕ ದಮನ ಮಾಡಲು ಅವಕಾಶ ನೀಡಲಿಲ್ಲ. ನಕ್ಸಲೀಯರು ಪ್ರತಿಪಾದಿಸುವ ವೈಯಕ್ತಿಕ ಹಿಂಸಾಚಾರದ ದಾರಿಯಲ್ಲಿ ನಡೆದಿದ್ದರೆ ಪಶ್ಚಿಮ ಬಂಗಾಳದ ಸಾಧನೆ ಸಾಧ್ಯವಾಗುತ್ತಿರಲಿಲ್ಲ.

ನಕ್ಸಲೀಯರು ತಮ್ಮ ವಿಫಲತೆಯನ್ನು ಒಪ್ಪಿಕೊಳ್ಳುವ ಬದಲಾಗಿ ಸಿಪಿಐ ಹಾಗೂ ಸಿಪಿಐ(ಎಂ) ಪಕ್ಷಗಳನ್ನು ಕುಗ್ಗಿಸುವ ಮೂಲಕ ಬೆಳೆಯಬಹುದೆಂದು ಕೊಂಡಿದ್ದಾರೆ. ಎಡ ಪಕ್ಷಗಳ ಕಾರ್ಯಕರ್ತರೊಡನೆ ಬೆರೆಯುತ್ತಾ, ಕ್ರಾಂತಿಕಾರಿ ಮಾತುಗಳಿಂದ ಅವರನ್ನು ಆಕರ್ಷಿಸುತ್ತಾ ಅವರಲ್ಲಿ ಗೊಂದಲಗಳನ್ನು ಸೃಷ್ಟಿಸುತ್ತಾರೆ. ಬಂಡವಾಳಶಾಹಿ ಪಕ್ಷದ ಕಾರ್ಯಕರ್ತರಿಗಿಂತಲೂ ಎಡ ಪಕ್ಷದ ಕಾರ್ಯಕರ್ತರ ಮೇಲೆ ಅವರುಗಳು ಹೆಚ್ಚು ದ್ವೇಷ ಸಾಧಿಸುತ್ತಾರೆ. ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಎಡ ಪಕ್ಷಗಳ ನೂರಾರು ಕಾರ್ಯಕರ್ತರನ್ನು ನಕ್ಸಲೀಯರು ಸಾಯಿಸಿರುವುದನ್ನು ಗಮನಿಸಿದರೆ ಅವರ ಉದ್ದೇಶ ಸ್ಪಷ್ಟವಾಗುತ್ತದೆ.

> ಅನ್ನ ಅಕ್ಷರಗಳ ಖರ್ಚಿನಲ್ಲಿ
> ಬೆಳೆದ ಬಾಂಬು ಬಂದೂಕಗಳೇ
> ನಿಮ್ಮ ಅಬ್ಬರಕ್ಕೆ
> ಹಕ್ಕಿಗೂಡು ಬಿಟ್ಟು ಹೊರಬರುತ್ತಿಲ್ಲ
> ಕೂಸು ಬಸಿರಲ್ಲೇ ಕಂಪಿಸುತ್ತಿದೆ.
> **- ಎಂ.ಡಿ.ಒಕ್ಕುಂದ**

ಪಶ್ಚಿಮ ಘಟ್ಟದಲ್ಲೇನು ವಿಶೇಷ?

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನೆಲೆಯೂರಿದ ನಕ್ಸಲೀಯರು ಪಶ್ಚಿಮ ಘಟ್ಟಗಳ ಅರಣ್ಯವನ್ನು ಏಕೆ ಪ್ರವೇಶಿಸಿದರು? ಅಲ್ಲಿರುವ ಆದಿವಾಸಿಗಳ ಪ್ರಶ್ನೆ ಅವರನ್ನು ಆಕರ್ಷಿಸಿತ್ತೆ? ಇಲ್ಲಿಯ ಆದಿವಾಸಿಗಳಿಗಿಂತಲೂ ಹೆಚ್ಚು ದಮನಿತರಾದ ಜನ ವಿಭಾಗಗಳು ರಾಜ್ಯದ ಬೇರೆ ಭಾಗದಲ್ಲಿರುವುದು ಇವರ ಗಮನಕ್ಕೆ ಬರಲಿಲ್ಲವೆ? ಗುಲ್ಬರ್ಗಾ, ರಾಯಚೂರು ಮೊದಲಾದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಶೋಷಣೆಗೆ ಒಳಪಟ್ಟ ಜನಗಳನ್ನು ಬಿಟ್ಟು ಅವರು ಪಶ್ಚಿಮ ಘಟ್ಟಗಳತ್ತ ಕಾಲು ಹಾಕಿದ್ದು ಯಾವ ಉದ್ದೇಶದಿಂದ?

ಆಂಧ್ರಪ್ರದೇಶದಲ್ಲಿ ತರಬೇತಿ ಪಡೆದು ಬಂದಿದ್ದ ಈ ನಕ್ಸಲೀಯರನ್ನು ಪೊಲೀಸರು ಸಹಜವಾಗಿಯೇ ಬೆನ್ನು ಹತ್ತಿದ್ದರು. ಇವರಲ್ಲಿ ಅನೇಕರು ವಿವಿಧ ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾದವರು. ಪೊಲೀಸರ ಕಣ್ಣು ತಪ್ಪಿಸಿಕೊಳ್ಳಲು ಅವರಿಗೆ ಸುರಕ್ಷಿತ ತಾಣವೊಂದು ಬೇಕಾಗಿತ್ತು. ಆದಿವಾಸಿಗಳ ಪ್ರಶ್ನೆ ಒಂದು ನೆಪವಾಯಿತು.

ಪಶ್ಚಿಮ ಘಟ್ಟಗಳ ಆದಿವಾಸಿಗಳ ಮೂಲಭೂತ ಪ್ರಶ್ನೆಗಳಿಗಾಗಿ ಇದುವರೆಗೆ ಅವರು ಯಾವುದೆ ಚಳವಳಿಯನ್ನು ಸಂಘಟಿಸಲಿಲ್ಲ. ಆದಿವಾಸಿಗಳನ್ನು ಸಂಘಟಿಸಿ ಬೀದಿಗಿಳಿಸಲಿಲ್ಲ. ಆದಿವಾಸಿಗಳ ಕನಿಷ್ಠ ವಿಶ್ವಾಸವನ್ನು ಸಹ ಗಳಿಸಲು ಅವರಿಗೆ ಇದುವರೆಗೆ ಸಾಧ್ಯವಾಗಿರಲಿಲ್ಲ. ಈಗ ಈ ಘಟನೆಗಳಿಂದಾಗಿ ಅವರು ಇನ್ನಷ್ಟು ಭಯಭೀತರಾಗಿರುತ್ತಾರೆ. ನಕ್ಸಲೀಯರ ಸಹವಾಸವನ್ನು ಬಯಸದವರಾಗುತ್ತಾರೆ. ನಕ್ಸಲೀಯರನ್ನು ಬೆನ್ನಟ್ಟಲು ಸರ್ಕಾರ ಎಸ್.ಟಿ.ಎಫ್. ಪಡೆಯನ್ನೇನಾದರೂ ಕಳುಹಿಸಿದಲ್ಲಿ ಅರಣ್ಯವಾಸಿಗಳ ಪಾಡು ಇನ್ನೂ ಚಿಂತಾಜನಕವಾಗಲಿದೆ.

ಪ್ರಜಾಸತ್ತಾತ್ಮಕ ಚಳುವಳಿಗೆ ಹಿಂತಿರುಗುವುದೊಂದೇ ಮಾರ್ಗ

ಶೋಷಣೆಯಿಂದ ಮುಕ್ತವಾದ ಸಮಾಜದ ರಚನೆಗಾಗಿ ನಕ್ಸಲೀಯರು ಅನುಸರಿಸುತ್ತಿರುವ ದಾರಿ ಸರಿಯಾದುದಲ್ಲ. ಕೆಲವು ಜನ ಶೋಷಕರನ್ನು ಸಾಯಿಸುವುದರಿಂದಾಗಲಿ, ಶೋಷಕರ ಕೈಯಲ್ಲಿ ಇವರಲ್ಲಿ ಕೆಲವರು ಸಾಯುವುದರಿಂದಾಗಲಿ ಕ್ರಾಂತಿ ಸಂಭವಿಸುವುದಿಲ್ಲ. ಇದು ಎಡ ಸಂದರ್ಭಸಾಧಕ ಹಾಕಿ ಎಂದು ಸಿಪಿಐ(ಎಂ) ಭಾವಿಸುತ್ತದೆ. ಇಂತಹ ತಪ್ಪು ದಾರಿಯನ್ನು ತ್ಯಜಿಸಿ ಪ್ರಜಾಪ್ರಭುತ್ವ ಚಳುವಳಿಯ ಮುಖ್ಯ ಪ್ರವಾಹದಲ್ಲಿ ನಕ್ಸಲೀಯರು ಸೇರಿಕೊಳ್ಳುವುದು ಸಾಧ್ಯವಾದರೆ ದೇಶದ ಪ್ರಜಾಪ್ರಭುತ್ವ ಚಳುವಳಿ ಬಲಗೊಳ್ಳುವುದು. ಸಾಕೇತ್‌ನಂತಹ ಪ್ರತಿಭಾನ್ವಿತ ಹೋರಾಟಗಾರರು ವ್ಯರ್ಥವಾಗಿ ಸಾಯುವ ಬದಲು ದೇಶದ ಶೋಷಿತ ಜನತೆಯ ಚಳುವಳಿಗೆ ಉಪಯುಕ್ತವಾಗುವ ಕೊಡುಗೆಯನ್ನು ಕೊಡಬಹುದು.

ಭಾರತದಲ್ಲಿ ದಮನಿತ ಜನತೆಯ ವಿಮೋಚನಾ ಚಳುವಳಿಯು ಬೆಳೆಯುವುದನ್ನು ಬಯಸದ ಸಾಮ್ರಾಜ್ಯಶಾಹಿ ಶಕ್ತಿಗಳು ಇಂತಹ ಸಂಘಟನೆಗಳಿಗೆ ಶಸ್ತ್ರಾಸ್ತ್ರಗಳನ್ನು, ಹಣಕಾಸನ್ನು ಪೂರೈಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಸಾಕೇತ್‌ನಂತಹ ಹೋರಾಟಗಾರರನ್ನು ಮಾಧ್ಯಮಗಳಲ್ಲಿ ಬಿಂಬಿಸುವ ಕೆಲಸವನ್ನೂ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ಯುವಕರು ದೇಶದ ಎಡ ಚಳುವಳಿಯ ಮುಖ್ಯ ಪ್ರವಾಹಕ್ಕೆ ಸೇರಿಕೊಳ್ಳುವುದನ್ನು ತಪ್ಪಿಸಲು ಇದೆಲ್ಲವು ನಡೆಯುತ್ತಿದೆ. ದೇಶದಲ್ಲಿ ಎಡಶಕ್ತಿಗಳು ಪ್ರಬಲವಾಗುತ್ತಿರುವ ಈ ಸಂದರ್ಭದಲ್ಲಿ ಇಂತಹ ಪ್ರಯತ್ನಗಳು ಹೆಚ್ಚಾಗುವುದರಲ್ಲಿ ಆಶ್ಚರ್ಯವೇನಿಲ್ಲ.

ನಕ್ಸಲ್‌ವಾದದಿಂದ ದೇಶದ ಎಡ ಚಳುವಳಿಗೆ ಈವರೆಗೆ ಅಪಾರ ಹಾನಿಯಾಗಿದೆ. ನಕ್ಸಲ್ ಚಟುವಟಿಕೆಗಳಿಂದಾಗಿ ಎಡ ಸಂಘಟನೆಗಳು ಹೆಚ್ಚೆಚ್ಚು ಅಪಾಯಕ್ಕೆ ಒಳಗಾಗುತ್ತವೆ. ಶಸ್ತ್ರಾಸ್ತ್ರಗಳನ್ನು ಬಿಟ್ಟು ಪ್ರಜಾಸತ್ತಾತ್ಮಕ ಚಳುವಳಿಗೆ ಸೇರಿಕೊಳ್ಳುವ ಮೂಲಕ ಮಾತ್ರ ನಕ್ಸಲೀಯರು ಈ ಹಾನಿಯನ್ನು ಸರಿಪಡಿಸಬಹುದು.

ಮತ್ತೊಮ್ಮೆ ಬಿಜೆಪಿಯ ಭ್ರಷ್ಟ ಮುಖ ಬಯಲು



ಮಾಜಿ ಪ್ರಧಾನಿಗಳ ಮುತ್ಸದ್ದಿ ಮುಖದ ಹಿಂದೆ

ನೀತಿಬದ್ಧ ಪಕ್ಷದ ಹಲವು ನಾಯಕರ ಹಗರಣಗಳು ಹೊರಬಂದಿವೆ. ಈಗ ಇನ್ನೊಬ್ಬ 'ಮಹಾ' ನಾಯಕ ಮಹಾಜನ್ ಮತ್ತು ರಿಲಯನ್ಸ್ ಕಂಪನಿ ನಡುವಿನ ಭಾರಿ ಹಗರಣ ಬಯಲಿಗೆ.. ದೇಶದ ಭದ್ರತೆಗೆ ಸಂಬಂಧಿಸಿದ ದಸ್ತಾವೇಜು ಅಂಬಾನಿಗೆ ಹೇಗೆ ಕೈಸೇರುತ್ತಿದ್ದವು. ಖೋಟಾ ದೇಶಭಕ್ತರ ಪಾತ್ರವೇನು? ಓದಿ

ಈ ಬಾರಿ ಪ್ರಮೋದ್ ಮಹಾಜನ್! 233 ಕೋಟಿ ರೂ.ಗಳ ಹಗರಣ

ಬಿಜೆಪಿ 'ನೀತಿಬದ್ಧ ಪಕ್ಷ', 'ಭಿನ್ನ ರೀತಿಯ ಪಕ್ಷ' ಎಂಬುದೆಲ್ಲಾ ಟೊಳ್ಳು ಮಾತುಗಳು ಎಂದು ಈಗಾಗಲೇ ಬಯಲಾಗಿದೆ. ಭಯ, ಹಸಿವು, ಭ್ರಷ್ಟಾಚಾರಗಳನ್ನು ತೊಲಗಿಸುತ್ತೇವೆಂದು ಪಕ್ಷದ ಆರು ವರ್ಷಗಳ ಆಳ್ವಿಕೆಯಲ್ಲಿ ಭಯ, ಹಸಿವಿನಿಂದಂತೂ ಜನತೆಗೆ ಮುಕ್ತಿ ಸಿಗಲಿಲ್ಲ. ಇನ್ನೂ ಭ್ರಷ್ಟಾಚಾರದ ವಿಷಯದಲ್ಲಂತೂ ಆ ಪಕ್ಷವೇ ಸ್ವತಃ ಕುತ್ತಿಗೆಯ ವರೆಗೆ ಮುಳುಗಿತ್ತು. ಪಕ್ಷದ ಅಧ್ಯಕ್ಷರಾಗಿದ್ದ ಬಂಗಾರು ಲಕ್ಷ್ಮಣ್ ನೋಟುಗಳ ಕಂತೆಗಳನ್ನೇ ಮೇಜಿಗೆ ಸೇರಿಸುತ್ತಿದ್ದುದನ್ನು ಟಿ.ವಿ.ಯಲ್ಲಿ ಜನ ಕಣ್ಣಾರೆ ಕಂಡರು; ಹಣ ಎಂದರೆ ದೇವರಿಗಿಂತ ಕಡಿಮೆಯೇನಲ್ಲ ಎಂದು ಬಿಜೆಪಿ ಮಂತ್ರಿ ಜುದೇವ್ ಉದ್ಗರಿಸಿದ್ದನ್ನು ಕಿವಿಯಾರೆ ಕೇಳಿದರು.

ಈಗ ಮತ್ತೊಂದು ಇಂತಹ ನೀಚ ವ್ಯವಹಾರ ಬೆಳಕಿಗೆ ಬಂದಿದೆ. ಫೆಬ್ರವರಿ 6 ರ 'ಏಶ್ಯನ್ ಏಜ್' ದೈನಿಕದಲ್ಲಿ ಪತ್ರಕರ್ತರಾದ ಓಲ್ಗಾ ಟೆಲ್ಲಿಸ್‌ರ ಒಂದು ವರದಿ ಅಂಬಾನಿಗಳ ರಿಲಯನ್ಸ್ ಹಾಗೂ ಬಿಜೆಪಿಯ ಉನ್ನತ ಮುಖಂಡರ ನಡುವಿನ ಭ್ರಷ್ಟ ಸಂಬಂಧಗಳ ಮೇಲೆ ಬೆಳಕು ಚೆಲ್ಲಿದೆ.


ರಿಲಯನ್ಸ್ ಗುಂಪಿನ ಅಂಬಾನಿ ಸೋದರರಾದ ಮುಕೇಶ್ ಮತ್ತು ಅನಿಲ್ ನಡುವೆ ಆಸ್ತಿ ಕಿತ್ತಾಟ ಇತ್ತೀಚೆಗೆ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿದ್ದದ್ದು ನಿಮಗೆ ನೆನಪಿರಬಹುದು. ಈ ಕಥೆ ಅಲ್ಲಿಂದ ಆರಂಭವಾಗುತ್ತದೆ. ಕಿತ್ತಾಟದ ಸಮಯದಲ್ಲಿ ಈ ಗುಂಪಿನ ರಿಲಯನ್ಸ್ ಇನ್‌ಫೋಕಾಂ ಎಂಬ ಕಂಪನಿ ತನ್ನ ಒಂದು ಕೋಟಿ ಶೇರುಗಳನ್ನು ಕೇವಲ 1 ಕೋಟಿ ರೂ.ಗೆ (ಅಂದರೆ ಒಂದು ಶೇರಿಗೆ ಒಂದೇ ರೂ) ಮೂರು ಸಣ್ಣ ಕಂಪನಿಗಳಿಗೆ ವರ್ಗಾವಣೆ ಮಾಡಿತ್ತು. ಅವುಗಳಲ್ಲಿ ಒಂದರ ಹೆಸರು ಫೇರೆವರ್. ಈ ಕಂಪನಿಯ ಪೂರ್ವಾಪರ ನೋಡಿದಾಗ ಅದು ಈ ಹಿಂದೆ ಅದೇ ವಿಳಾಸದಲ್ಲಿ ಇದ್ದ 'ಗ್ಲೋಬಲ್ ಇ-ಸೆಕ್ಯುರ್' ಎಂಬ ಕಂಪನಿಯೊಂದಿಗೆ ಸಂಬಂಧ ಹೊಂದಿದ್ದು ಕಂಡುಬಂತು. ಈ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಅಶೀಶ್ ದೇವರಾ ಇಂಡಿಯಾ ಓನ್‌ಲೈನ್ ಎಂಬ ಒಬ್ಬ ಅಂದರೆ ಒಬ್ಬ ಪ್ರಮೋಟರ್. ಇನ್ನೊಂದು ಕಂಪನಿಯ ಪ್ರಮೋಟರ್‌ಗಳಲ್ಲಿ ಒಬ್ಬ ಅಂದರೆ ಈ ಕಂಪನಿಯನ್ನು ಆರಂಭಿಸಿದವರಲ್ಲಿ ಒಬ್ಬ. ಇನ್ನಿಬ್ಬರು ಯಾರು ಗೊತ್ತೆ? ಬಿಜೆಪಿ ಮುಖಂಡ ಪ್ರಮೋದ್ ಮಹಾಜನ್‌ರವರ ಮಗಳು ಪೂನಂ ಮತ್ತು ಮಗ ರಾಹುಲ್ ಮಹಾಜನ್. ಅಳಿಯ ಆನಂದ್ ರಾವ್ ಕೂಡಾ ಇವರೊಂದಿಗೆ ಸಂಬಂಧ ಹೊಂದಿದ್ದಾರೆಂದು ತಿಳಿದುಬಂದಿದೆ.

ರಿಲಯನ್ಸ್ ಇನ್‌ಫೋಕಾಂ ತನ್ನ ಶೇರುಗಳನ್ನು ಅತಿ ಅಗ್ಗ ದರದಲ್ಲಿ ವರ್ಗಾಯಿಸಿದ ಮೂರು ಕಂಪನಿಗಳು ಬೇನಾಮಿ ಕಂಪನಿಗಳಂತೆ. ಮೇಲೆ ಹೇಳಿದ ಗ್ಲೋಬಲ್ ಇ-ಸೆಕ್ಯುರ್ ಎರಡು ವರ್ಷಗಳ ಹಿಂದೆ ತನ್ನ ಹೆಸರನ್ನು ಐಓಎಲ್ ಬ್ರೋಡ್ ಬ್ಯಾಂಡ್ ಲಿಮಿಟೆಡ್ ಎಂದು ಬದಲಾಯಿಸಿಕೊಂಡಿತು. ಪ್ರಮೋದ್ ಮಹಾಜನ್ ಮಗ ರಾಹುಲ್ ಮಹಾಜನ್ ಈ ಕಂಪನಿಯೊಂದಿಗೆ ಸಕ್ರಿಯ ಸಂಬಂಧ ಹೊಂದಿದ್ದಾರೆ, ಆದರೆ ಆತನ ಅಧಿಕೃತ ಸ್ಥಾನಮಾನ ಏನು, ಈ ಕಂಪನಿಯ ಇತಿಹಾಸವೇನು, ಪ್ರಮೋಟರ್‌ಗಳು ಯಾರು ಎಂದು ಈ ಕಂಪನಿಯ ವೆಬ್‌ಸೈಟ್ ವಿವರ ನೀಡುವುದಿಲ್ಲ. ಈ ಕಂಪನಿಗೆ ಭಾರತೀಯ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ (ಐಡಿಬಿಐ) ನೀಡಿದ 10 ಕೋಟಿ ರೂ. ಸಾಲ ಈಗ ವಾಪಸು ಬರಲಾರದ ಸಾಲ ಎಂದು ಪರಿಗಣಿತವಾಗಿದೆ!

ಈ ಶೇರುಗಳ ವರ್ಗಾವಣೆಯಾದಾಗ ಪ್ರತಿ ಶೇರಿನ ಮಾರುಕಟ್ಟೆ ಬೆಲೆ ರೂ. 700 ಇತ್ತು. ಈ ಲೆಕ್ಕದಲ್ಲಿ ಇದು 700 ಕೋಟಿ ರೂ.ಗಳ ಹಗರಣ. ಮೂರು ಬೇನಾಮಿ ಕಂಪನಿಗಳಿಗೆ ಅದನ್ನು ಸಮನಾಗಿ ಹಂಚಲಾಯಿತಂತೆ. ಅಂದರೆ ಮಹಾಜನಗಳ ಈ ಹಗರಣದ ಮೌಲ್ಯ 233 ಕೋಟಿ ರೂಗಳಿಗಿಂತಲೂ ಹೆಚ್ಚು. ಈ ವರ್ಗಾವಣೆ ಏಕೆ? ಎಲ್ಲಿಗೆ ಹೋಯಿತು?

ಯುಟಿಐ ದಾರಿ!

ಏಶ್ಯನ್ ಏಜ್ ಪತ್ರಿಕೆಯ ವರದಿ ಎರಡು ಅಂಶಗಳನ್ನು ಪರಿಶೀಲಿಸಿಲ್ಲ. ಒಂದು, ಮಹಾಜನ್‌ಗಳ ಇಂಡಿಯಾ ಓನ್‌ಲೈನ್ ಮತ್ತು ಐಓಎಲ್ ಬ್ರೋಡ್ ಬ್ಯಾಂಡ್ ಲಿಮಿಟೆಡ್ ನಡುವೆ ಏನಾದರೂ ಸಂಬಂಧ ವಿದೆಯೇ? ಎರಡು, ಈ ಐಓಎಲ್ ಬ್ರೋಡ್ ಬ್ಯಾಂಡ್ ಕಂಪನಿಗೆ ಐಡಿಬಿಐ ನಿಂದ 10 ಕೋಟಿ ರೂ. ಸಾಲ ನೀಡಿಕೆ ಕ್ರಮಬದ್ಧವಾಗಿತ್ತೆ?



ಇಂಡಿಯಾ ಓನ್ ಲೈನ್ ಎಂಬುದನ್ನು ಇಂಗ್ಲೀಷಿನಲ್ಲಿ ಸಂಕ್ಷಿಪ್ತವಾಗಿ ಬರೆದರೆ ಐಓಎಲ್ ಆಗುತ್ತದೆ. ಈ ರೀತಿಯ ಹೆಸರು ಸಾಮ್ಯ ಗ್ರಾಹಕರನ್ನು ಮತ್ತು ಸರ್ಕಾರವನ್ನು ವಂಚಿಸಲಿಕ್ಕಾಗಿಯೇ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಎರಡನೆಯದಾಗಿ, ಐಡಿಬಿಐ ಸಾಲ ಬಿಜೆಪಿ ಆಡಳಿತದ ಕಾಲದ ಇನ್ನೊಂದು ಹಗರಣವನ್ನು ನೆನಪಿಸುತ್ತದೆ. ಯುನಿಟ್ ಟ್ರಸ್ಟ್ ಆಫ್ ಇಂಡಿಯಾ ಅಥವಾ ಯುಟಿಐ ಎಂಬುದು ಸಾರ್ವಜನಿಕ ವಲಯದ ಅತಿದೊಡ್ಡ, ವಿಶ್ವಾಸಪಾತ್ರ ಹಣಕಾಸು ಸಂಸ್ಥೆಯಾಗಿತ್ತು. ಇದರ 'ಯುಸ್-64' ಅತ್ಯಂತ ಜನಪ್ರಿಯ ಮ್ಯುಚುವಲ್ ಫಂಡ್ ಯೋಜನೆಯಾಗಿತ್ತು. ಇದೇ ಬಿಜೆಪಿ ಮತ್ತು ಮಹಾಜನ್ ಗುಂಪಿನ ಒತ್ತಡದಿಂದ 'ದಿ ಪಯೋನಿರ್' ಎಂಬ ಪತ್ರಿಕೆಗೆ, ಪ್ರೀತೀಶ್ ನಂದಿ ಕಮ್ಯುನಿಕೇಶನ್ಸ್ ಮತ್ತಿತರ ಸಂಶಯಾಸ್ಪದ ಕಂಪನಿಗಳಲ್ಲಿ (ಇದರಲ್ಲಿ ಆಗಿನ ಪ್ರಧಾನ ಮಂತ್ರಿ ವಾಜಪೇಯಿಯವರ ನಿಕಟರಾಗಿದ್ದವರ ಒಂದು



ರಿಲಯನ್ಸ್ ಅಂಬಾನಿಗಳು

ಲಕ್ನೌ ಕಂಪನಿಯೂ ಇತ್ತು) ಹಣ ಹೂಡುವಂತೆ ಮಾಡಲಾಯಿತು. ಇದರಿಂದಾಗಿಯೇ ನಂತರ ಯುಟಿಐ ಭಾರಿ ನಷ್ಟ ಅನುಭವಿಸಬೇಕಾಗಿ ಬಂತು. ಪೌರೋಹಿತ್ಯದಲ್ಲಿ ಈ ಸಾರ್ವಜನಿಕ ವಲಯದ ಸಂಸ್ಥೆ ಲಕ್ಷಾಂತರ ಸಣ್ಣ ಹೂಡಿಕೆದಾರರ ಉಳಿತಾಯಗಳನ್ನು ನುಂಗಿ ಕುಸಿದುಬಿತ್ತು. ಆದರೆ ಅದು ಹೇಗೋ ಹೀಗಾಗುತ್ತದೆಂದು ಮಾಹಿತಿ ರಿಲಯನ್ಸ್ 'ಕಂಪನಿಯಂತಹ ದೊಡ್ಡ ಹೂಡಿಕೆದಾರರಿಗೆ ಮೊದಲೇ ಸಿಕ್ಕಿತು. ಅವರು ತಮ್ಮ ಹಣಗಳನ್ನು ವಾಪಸು ತಗೊಳ್ಳಲು ಅವಕಾಶ ಕಲ್ಪಿಸಲಾಗಿತ್ತು!

ಬಿಜೆಪಿ ಪೌರೋಹಿತ್ಯದಲ್ಲಿ ನೆಲಕಚ್ಚಿದ ಇನ್ನೊಂದು ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಯೆಂದರೆ ಐಎಫ್‌ಸಿಐ ಅಥವಾ ಭಾರತೀಯ ಕೈಗಾರಿಕಾ ಹಣಕಾಸು ನಿಗಮ. ಇದರ ಹೊಣೆಗಾರಿಕೆಗಳನ್ನು ಐಡಿಬಿಐ ವಹಿಸುವಂತೆ ಮಾಡಲಾಯಿತು. ಈಗ ಅದೇ ಗತಿ ಮೇಲೆ ಹೇಳಿದಂತೆ 'ಕೆಟ್ಟಸಾಲ'ಗಳನ್ನು ನೀಡುವಂತೆ ಮಾಡಿ ಐಡಿಬಿಐ ಗೂ ಬರುವಂತೆ ಮಾಡಲಾಗುತ್ತಿದೆಯೇ?

ಅಂಬಾನಿ-ಮಹಾಜನ್ ಸಂಬಂಧ

ಮೇಲೆ ಹೇಳಿದಂತೆ ಯುಟಿಐ ನಷ್ಟ ಅನುಭವಿಸಲಿರುವ ವಿಷಯ ಅಂಬಾನಿಗಳ ರಿಲಯನ್ಸ್ ಕಂಪನಿಗೆ ಮೊದಲೇ ಗೊತ್ತಾಗಿತ್ತು. ಆ ಮೂಲಕ ಅವರ ದೊಡ್ಡ ಹೂಡಿಕೆಗಳನ್ನು ಸುರಕ್ಷಿತವಾಗಿ ವಾಪಾಸು ಪಡೆಯಲಾಯಿತು. ಈ ಕೋಟ್ಯಾಧಿಪತಿಗಳು ಮತ್ತು ಪ್ರಮೋದ್ ಮಹಾಜನ್ ಸಂಬಂಧ ಇಷ್ಟೇ ಅಲ್ಲ. 'ಪ್ರಮೋದ್ ಮಹಾಜನ್ ವಾಜಪೇಯಿ ಸಂಪುಟದಲ್ಲಿ ರಿಲಯನ್ಸ್ ಮನುಷ್ಯ ಎಂದೇ ಹೆಸರಾಗಿದ್ದರು' ಎಂದು ಹಿಂದೀ ದೈನಿಕ 'ಪಂಜಾಬ್ ಕೇಸರಿ' (ಫೆಬ್ರವರಿ 7) ಹೇಳುತ್ತಾ ಮೇಲೆ ಹೇಳಿದ 233 ಕೋಟಿ ರೂ.ಗಳ ಹಗರಣದ ಫಲಾನುಭವಿ ಅಂತಿಮವಾಗಿ ಪ್ರಮೋದ್ ಮಹಾಜನ್‌ರೇ ಎಂದಿದೆ.

ವಾಜಪೇಯಿ ಸರ್ಕಾರದಲ್ಲಿ ಪ್ರಮೋದ್ ಮಹಾಜನ್ ಸಂಪರ್ಕ ಇಲಾಖೆಯ ಮಂತ್ರಿಯಾಗಿದ್ದಾಗ ಡಬ್ಲ್ಯುಎಲ್‌ಎಲ್(ಸೀಮಿತ ಮೊಬೈಲ್) ಮತ್ತು ಜಿಎಸ್‌ಎಂ(ಅಂದರೆ ಮೊಬೈಲ್) ಕಂಪನಿಗಳ ನಡುವೆ ವಿವಾದ ಉಂಟಾಗಿತ್ತು. ಸಹಜವಾಗಿ ಮಹಾಜನ್ ಅದರಲ್ಲಿ ಮಧ್ಯ ಪ್ರವೇಶಿಸಬೇಕಾಗಿತ್ತು. ಆದರೆ ಅತ ರಿಲಯನ್ಸ್ ಗುಂಪಿಗೆ ಪ್ರಯೋಜನವಾಗುವ ರೀತಿಯಲ್ಲಿ ಮಧ್ಯ ಪ್ರವೇಶಿಸಿದರೆಂದು ಆಪಾದನೆ ಆಗ ಬಂದಿತ್ತು. ಪೇಟೆಂಟ್ ಕಾನೂನುಗಳ ಸಂಬಂಧದಲ್ಲೂ ಮಹಾಜನ್ ಮಧ್ಯಪ್ರವೇಶ ಕೆಲವು ಕಾನೂನುಬಾಹಿರ ಕ್ರಮಗಳನ್ನು ಕಾನೂನುಬದ್ಧಗೊಳಿಸಿ ಅಂಬಾನಿಗಳಿಗೆ ಪ್ರಯೋಜನವಾಗಿದೆ ಎಂದು ಹೇಳಲಾಗಿದೆ.

ರಿಲಯನ್ಸ್ ಗುಂಪಿನ ಸ್ಥಾಪಕ ಧೀರೂ ಭಾಯಿ ಅಂಬಾನಿಗೆ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ನೀಡಿ ಗೌರವಿಸಬೇಕು ಎಂದು ಪ್ರಮೋದ್ ಮಹಾಜನ್ ಮನವಿ ಮಾಡಿಕೊಂಡದ್ದು ಎಲ್ಲರಿಗೂ ಗೊತ್ತು. ಅದೃಷ್ಟವಶಾತ್ ಅವರ ಆಸೆ ಇದುವರೆಗೂ ಈಡೇರಿಲ್ಲ.

ವಾಜಪೇಯಿ ಸರ್ಕಾರದಲ್ಲಿ ಅಂಬಾನಿಗಳಿಗೆ ನೆರವಾಗುತ್ತಿದ್ದವರು ಪ್ರಮೋದ್ ಮಹಾಜನ್ ಮಾತ್ರವೇ ಅಲ್ಲ ಎಂದೂ ಮೇಲೆ ಹೇಳಿದ 'ಪಂಜಾಬ್ ಕೇಸರೀ' ಪತ್ರಿಕೆ ಹೇಳಿದೆ. ವಾಸ್ತವವಾಗಿ ವಾಜಪೇಯಿ ಸರ್ಕಾರದ ಆರ್ಥಿಕ ಧೋರಣೆಗಳನ್ನು ಅಂಬಾನಿ ಕುಟುಂಬ ನಡೆಸುತ್ತಿತ್ತು ಎಂದು ಅದು ಅಭಿಪ್ರಾಯ ಪಟ್ಟಿದೆ.

ವಾಜಪೇಯಿ ಅಧಿಕಾರಾವಧಿಯಲ್ಲಿ ಖಾಸಗೀಕರಣದ ಹೆಸರಲ್ಲಿ ಜನಗಳ ಆಸ್ತಿಗಳನ್ನು ಅಗ್ಗ ದರದಲ್ಲಿ ಬಂಡವಾಳಶಾಹಿಗಳಿಗೆ ವಹಿಸಿಕೊಡಲಾಯಿತು. ಬಾಲ್ಕೊ ಮತ್ತು ಸೆಂಟಾಕ್ ಹೊಟೆಲ್ ಹಗರಣದೊಂದಿಗೆ ಐಪಿಸಿಎಲ್(ಪೆಟ್ರೋ ರಾಸಾಯನಿಕ ಕಂಪನಿ) ನ್ನು ಅಂಬಾನಿಗಳಿಗೆ ವರ್ಗಾಯಿಸಿದ್ದು ಇಂತಹುದೇ ಒಂದು ಹಗರಣ ಎನ್ನಲಾಗಿದೆ.

ಬಿಜೆಪಿ ಮುಖಂಡರು ಮತ್ತು ಅಂಬಾನಿಗಳ ನಡುವಿನ ಅನೈತಿಕ ಸಂಬಂಧಗಳು ಎಂತಹ ಕೀಳುಮಟ್ಟ ತಲುಪಿದ್ದವೆಂದರೆ ದೇಶದ ಭದ್ರತೆಗೆ ಮಹತ್ವಪೂರ್ಣವಾದ ಸರ್ಕಾರಿ ದಸ್ತಾವೇಜುಗಳು ಅಂಬಾನಿಗಳಿಗೆ ಸುಲಭವಾಗಿಸಿಗುತ್ತಿತ್ತು. ರಿಲಯನ್ಸ್ ಡೈರೆಕ್ಟರುಗಳಲ್ಲಿ ಒಬ್ಬರಾದ ರಮೇಶ್ ಶರ್ಮ ಎಂಬಾತನ ಬಳಿ ಕೇಂದ್ರ ಸಂಪುಟದ ಗುಪ್ತ ದಾಖಲೆಗಳು ಸಿಕ್ಕಿದ್ದು ದೊಡ್ಡ ಸುದ್ದಿಯಾಗಿತ್ತು. ಅದೇ ರೀತಿ **ಬಿಜೆಪಿ ಆಡಳಿತ ಕಾಲದಲ್ಲಿ ರಿಲಯನ್ಸ್‌ನ ದಿಲ್ಲಿ ಕಛೇರಿಗೆ ಸಿಬಿಐ ಧಾಳಿ ನಡೆಸಿದಾಗ ಸರ್ಕಾರದ ಐದು ಗುಪ್ತ ಟಿಪ್ಪಣಿಗಳು ಅಲ್ಲಿ ಸಿಕ್ಕವು. ಈ ಬಗ್ಗೆ ಮೂವರು ರಿಲಯನ್ಸ್ ಅಧಿಕಾರಿಗಳನ್ನು ಅಧಿಕೃತ ರಹಸ್ಯ ಕಾನೂನಿನಡಿ ತನಿಖೆ ಮಾಡಲಾಗಿತ್ತು.** ಆದರೆ ಈ ಐದು ಟಿಪ್ಪಣಿಗಳು ರಾಷ್ಟ್ರೀಯ ಭದ್ರತೆ ಅಥವಾ ಸಮಗ್ರತೆಗೆ ಸಂಬಂಧಪಟ್ಟವಲ್ಲ, ಇವುಗಳ ಕಳವಿನಲ್ಲಿ ರಿಲಯನ್ಸ್ ಕಂಪನಿಯ ಕೈವಾಡವಿಲ್ಲ ಎಂದು ಬಿಜೆಪಿ ಮಂತ್ರಿ ಇದಕ್ಕೆ ಸಂಬಂಧಪಟ್ಟ ಕಡತದಲ್ಲಿ ಬರೆದು ಖುಲಾಸೆ ಮಾಡಿದರು!

ಈಗ ಈ ಗುಂಪಿನ ಅಮೆರಿಕಾದಲ್ಲಿ ರಿಜಿಸ್ಟರ್ ಆದ ರಿಲಯನ್ಸ್ ಕಮ್ಯುನಿಕೇಶನ್ಸ್ ದೇಶದ ಸಾರ್ವಜನಿಕ ವಲಯದ ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಕಂಪನಿಗಳಿಗೆ ವಂಚನೆ ಮಾಡಿದ್ದು

ಪುಟ 9 ಕ್ಕೆ

18ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನ

ನಿರ್ಣಯಗಳು

ಅಸಂಘಟಿತ ವಲಯದ ಕಾರ್ಮಿಕರ ರಕ್ಷಣೆ

ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಸಂಖ್ಯೆ ಅತಿ ಹೆಚ್ಚು. ಉದಾರೀಕರಣ, ಜಾಗತೀಕರಣ, ಖಾಸಗೀಕರಣ ನೀತಿಗಳ ನೇರ ಪರಿಣಾಮ ಇಂದು ಸಾಮಾನ್ಯ ದುಡಿಯುವ ಜನರ ಮೇಲಾಗುತ್ತಿದೆ. ಖಾಸಗೀಕರಣ ನೀತಿಯಿಂದ ಸಾರ್ವಜನಿಕರ ಕ್ಷೇತ್ರದ ಕೈಗಾರಿಕೆಗಳು, ಘನ ಕೈಗಾರಿಕೆಗಳು ಮುಚ್ಚಿ ಕಾರ್ಮಿಕರು ಇಂದು ಅಸಂಘಟಿತ ವಲಯದ ಕಾರ್ಮಿಕರ ಸಾಲಿಗೆ ಸೇರುತ್ತಿದ್ದಾರೆ.

ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನ ಅಸಂಘಟಿತ ವಲಯದ ಕಾರ್ಮಿಕರಿಗೆ ಸಿಗುತ್ತಿಲ್ಲ. ಕನಿಷ್ಟ ವೇತನದ ಪರಿಣಾಮಕಾರಿ ಜಾರಿಗೆ ರಾಜ್ಯ ಸರ್ಕಾ_ರ ಯಾವುದೇ ಪ್ರಯತ್ನ ಪಡುತ್ತಿಲ್ಲ. ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಹೆರಿಗೆ ರಜೆ ದೊರೆಯುತ್ತಿಲ್ಲ. ಶಾಸನ ಬದ್ಧ ಸೌಲತ್ತುಗಳಿಂದ ಅಸಂಘಟಿತ ವಲಯದ ಬಹುಪಾಲು ಕಾರ್ಮಿಕರು ವಂಚಿತರಾಗಿದ್ದಾರೆ. ಬರಗಾಲದ ಕಾರಣ ನಗರ ಪ್ರದೇಶಕ್ಕೆ ಬರುವ ಕಾರ್ಮಿಕರು ಮುಖ್ಯವಾಗಿ ಕಟ್ಟಡ ರಸ್ತೆ ನಿರ್ಮಾಣ ಕಾರ್ಮಿಕರನ್ನು ಅತೀ ಕಡಿಮೆ ಸಂಬಳಕ್ಕೆ ದುಡಿಸುತ್ತಿದ್ದಾರೆ. ಯಂತ್ರಗಳ ಬಳಕೆಯಿಂದ ಕೃಷಿ ಕೂಲಿಕಾರರಿಗೆ ಉದ್ಯೋಗವಿಲ್ಲದಾಗಿದೆ. ಕೂಲಿಗಾಗಿ ಕಾಳು ಯೋಜನೆ ಫಲ ಗ್ರಾಮಾಂತರ ಪ್ರದೇಶದ ಕಾರ್ಮಿಕರಿಗೆ ದೊರೆಯುತ್ತಿಲ್ಲ.

ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಮುಚ್ಚುತ್ತಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಕಾರ್ಮಿಕರು ಇಂದು ಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕಾನೂನಿಗೆ ವಿರುದ್ಧವಾಗಿ ಖಾಯಂ ರೀತಿಯ ಹಾಗೂ ಉತ್ಪಾದನಾ ಕೆಲಸಗಳನ್ನು ಗುತ್ತಿಗೆ ಕಾರ್ಮಿಕರಿಂದ ಮಾಡಿಕೊಳ್ಳಲಾಗುತ್ತಿದೆ. ಅನೇಕ ಘನ ಕೈಗಾರಿಕೆಗಳು ಉತ್ಪಾದನೆಯನ್ನು ಹೊರ ಗುತ್ತಿಗೆ ಪದ್ಧತಿ ಮೂಲಕ ಮಾಡಿಸಿಕೊಳ್ಳುತ್ತಿದ್ದಾರೆ. ಸರ್ಕಾರಿ ಕೆಲಸಗಳನ್ನು ಗುತ್ತಿಗೆ ಕಾರ್ಮಿಕರಿಂದ ಮಾಡಿಕೊಳ್ಳಲಾಗುತ್ತಿದೆ. ಕನಿಷ್ಟ ವೇತನ ವ್ಯಾಪ್ತಿಯೊಳಗೆ ಬರುವ ಕಾರ್ಮಿಕರಿಗೆ ಜೀವನಾವಶ್ಯಕ ಕನಿಷ್ಟ ವೇತನ ನಿಗದಿಯಾಗುತ್ತಿಲ್ಲ.

ಕಾರ್ಮಿಕರ ಹಕ್ಕುಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮಸೂದೆಯಲ್ಲಿ ಯಾವುದೇ ಪ್ರಸ್ತಾವನೆ ಇಲ್ಲ. ಆದುದರಿಂದ ಈ ಮಸೂದೆ ಕರ್ನಾಟಕ ಅಸಂಘಟಿತ ಕೆಲಸಗಾರರ ಸೇವಾ ನಿಯಮಗಳು ಎಂದಾಗ ಬೇಕು. ಅಸಂಘಟಿತ ಕೆಲಸಗಾರ ಎಂಬ ಅರ್ಥ ಬದಲಾಗಬೇಕು. ಕನಿಷ್ಟ ವೇತನ ಕಾಯಿದೆಯ ಶೆಡ್ಯೂಲಿನಲ್ಲಿ ಬರುವ ಎಲ್ಲಾ ವಿಭಾಗದ ಕೆಲಸಗಾರರು, ಕಾರ್ಖಾನೆಗಳ ಕಾಯಿದೆ, ಗಣಿ ಕಾಯಿದೆ, ಪ್ಲಾಂಟೇಷನ್ ಕಾಯಿದೆ ವಿವರಣೆಗಳನ್ನು ಒಳಗೊಂಡಂತೆ ಯಾವುದೇ ಕಾಯಿದೆ ಅಡಿಯಲ್ಲಿ ಬರುವ ಎಲ್ಲಾ ಕೆಲಸಗಾರರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿ ಇವರಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ಗುರುತಿನ ಚೀಟಿ ನೀಡಬೇಕು. ಎಲ್ಲಾ ಉದ್ದಿಮೆಗಳ ಕಾರ್ಮಿಕರಿಗೆ ಏಕರೂಪದ ಕನಿಷ್ಟ ವೇತನ ಹಾಗೂ ಒಂದೇ ದರದ ತುಟ್ಟಿಭತ್ಯೆ ನಿಗದಿಯಾಗಬೇಕು. ಕಾಲಕಾಲಕ್ಕೆ ಈ ಕನಿಷ್ಟ ವೇತನ ಪುನರ್ ವಿಮರ್ಶೆಯಾಗಬೇಕು. ಗೌರವಧನ ಆಧಾರದಲ್ಲಿ ದುಡಿಯುವ ಅಂಗನವಾಡಿ, ಅಕ್ಷರ ದಾಸೋಹ (ಬಿಸಿಯೂಟ) ನೌಕರರನ್ನು ಕನಿಷ್ಟ ವೇತನ ವ್ಯಾಪ್ತಿಯಡಿಯಲ್ಲಿ ತರಬೇಕು. ಪಂಚಾಯಿತಿ ಮುನ್ಸಿಪಾಲಿಟಿ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ನೌಕರರಿಗೆ ಸಹಾ ಕನಿಷ್ಟ ವೇತನ ನಿಗದಿಯಾಗಬೇಕು. ಅಸಂಘಟಿತ ಕಾರ್ಮಿಕರಿಗೆ ಕೆಲಸದ ಭದ್ರತೆ, ಕನಿಷ್ಟ ವೇತನದ ಪರಿಣಾಮಕಾರಿ ಜಾರಿ, ಸಾಮಾಜಿಕ ಭದ್ರತಾ ಯೋಜನೆಗಳಾದ ಭವಿಷ್ಯನಿಧಿ ಹಾಗೂ ಇಎಸ್‌ಐ ಹಾಗೂ ಇತರ ಕಲ್ಯಾಣ ಯೋಜನೆಗಳ ಜಾರಿ, ಪಿಂಚಣಿ ಸೌಲಭ್ಯ ಜಾರಿ ಹಾಗೂ ಕೆಲಸದ ಖಾತರಿಗಾಗಿ ಎಲ್ಲಾ ವಿಭಾಗಗಳ ಅಸಂಘಟಿತ ಕಾರ್ಮಿಕರನ್ನು ಸಂಘಟಿಸಿ ಒಂದು ಬಲಿಷ್ಟ ಹೋರಾಟವನ್ನು ನಡೆಸಬೇಕೆಂದು ಉಡುಪಿಯಲ್ಲಿ ನಡೆದ ಸಿಪಿಐ(ಎಂ)ನ 18ನೇ ರಾಜ್ಯ ಸಮ್ಮೇಳನವು ನಿರ್ಣಯ ಕೈಗೊಂಡಿದೆ.

ಅರಣ್ಯ ಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಕೈಬಿಡಲು ಆಗ್ರಹ

ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸುವ ಕ್ರಮವನ್ನು ಆರಂಭಿಸುತ್ತಿದ್ದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ವ್ಯಕ್ತವಾದ ಪ್ರತಿರೋಧ ಮತ್ತು ಬೆಳೆದು ಬಂದ ಚಳುವಳಿಯ ಒತ್ತಡ ಹಾಗೂ ಸಮೀಪಿಸುತ್ತಿದ್ದ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅರಣ್ಯಭೂಮಿ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ನಿಲ್ಲಿಸಿ ಅತಿಕ್ರಮ ಪ್ರಕರಣಗಳು ಪರಿಶೀಲಿಸಲು ತಾಲೂಕುಮಟ್ಟದ ಸಮಿತಿಗಳನ್ನು ರಚಿಸುವುದಾಗಿ ಸರ್ಕಾರ ಘೋಷಿಸಿತು. ಇಂತಹ ಸಮಿತಿಗಳು ಕೆಲವು ಜಿಲ್ಲೆಗಳಲ್ಲಿ ಮಾತ್ರ ರಚನೆಯಾದರೂ ಅತಿಕ್ರಮಣದಾರರು ಒಕ್ಕಲೆಬ್ಬಿಸುವಲ್ಪಡುವ ಭೀತಿಯಿಂದ ಮುಕ್ತರಾಗಲಿಲ್ಲ. 1980ರ ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿ ಮಾಡದೆ ಅತಿಕ್ರಮಣದಾರರಿಗೆ ರಕ್ಷಣೆ ಒದಗಿಸಲು ಸಾಧ್ಯವಿಲ್ಲ. ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಯು.ಪಿ.ಎ ಸರ್ಕಾರವು ಅರಣ್ಯಭೂಮಿಯಲ್ಲಿ ನೆಲೆಸಿರುವ ಹಾಗೂ ಸಾಗುವಳಿ ಮಾಡುತ್ತಿರುವ ಆದಿವಾಸಿಗಳ ಮತ್ತು ಇತರ ಬಡವರ ಹಿತರಕ್ಷಣೆ ಮಾಡುವ ಭರವಸೆಯನ್ನು ಅದರ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ನೀಡಿದ್ದರೂ, ಇದುವರೆಗೆ ಆ ದಿಕ್ಕಿನಲ್ಲಿ ಯಾವುದೇ ಹೆಜ್ಜೆಯನ್ನು ಇಟ್ಟಿಲ್ಲ. ಆದ್ದರಿಂದ, 1980ರ ಅರಣ್ಯ ಸಂರಕ್ಷಣಾ ಕಾಯ್ದೆಗೆ ಅಗತ್ಯ ತಿದ್ದುಪಡಿಗಳನ್ನು ತಂದು ಅರಣ್ಯ ಭೂಮಿ ಅತಿಕ್ರಮಣದಾರರ ಹಕ್ಕುಗಳಿಗೆ ರಕ್ಷಣೆ ನೀಡಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ರಾಜ್ಯ ಸರ್ಕಾರವು ಈ ಕುರಿತು ಕೇಂದ್ರ ಸರ್ಕಾರದ ಮೇಲೆ ಅಗತ್ಯ ಒತ್ತಡವನ್ನು ಹೇರಬೇಕೆಂದು ಸಮ್ಮೇಳನ ಆಗ್ರಹಿಸಿದೆ. ಕರ್ನಾಟಕದಲ್ಲಿ ಸಾವಿರಾರು ಹೆಕ್ಟೇರ್ ಸಿ ಮತ್ತು ಡಿ ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಕಾರಣಾಂತರದಿಂದ ಜನವಸತಿ ನಷ್ಟವಾದ ಅನೇಕ ಗ್ರಾಮಗಳ ಕೃಷಿ ಭೂಮಿಯನ್ನು ಸಹ ಅರಣ್ಯ ಇಲಾಖೆಗೆ ವರ್ಗಾಯಿಸಲಾಗಿದೆ. ಇಂತಹ ಭೂಮಿಯನ್ನು ಅರಣ್ಯ ಇಲಾಖೆಯಿಂದ ಹಿಂದಕ್ಕೆ ಪಡೆದು ಅದನ್ನು ಭೂಹೀನ ಬಡವರಿಗೆ ವಿತರಣೆ ಮಾಡಬೇಕೆಂದು ಸಮ್ಮೇಳನ ಒತ್ತಾಯಿಸಿದೆ. ಭೂಮಾಲಕರು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡುತ್ತಿರುವ ಅರಣ್ಯ ಅಥವಾ ಕಂದಾಯ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನ ಬಡವರಿಗೆ, ಕೃಷಿ ಕೂಲಿಕಾರರಿಗೆ ವಿತರಣೆ ಮಾಡಬೇಕೆಂದು ಸಮ್ಮೇಳನ ಆಗ್ರಹಿಸಿದೆ.

ರಾಜ್ಯದಲ್ಲಿ ಕಂದಾಯ ಭೂಮಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ನೆಲೆಸಿರುವ ಅಥವಾ ಸಾಗುವಳಿ ಮಾಡುತ್ತಿರುವ ಪ್ರಕರಣಗಳನ್ನು ಸಕ್ರಮಗೊಳಿಸಲು ನಮೂನೆ 53 ರಲ್ಲಿ ಸಲ್ಲಿಸಲಾದ ಸಾವಿರಾರು ಪ್ರಕರಣಗಳು ಇತ್ಯರ್ಥವಾಗದೆ ಉಳಿದಿದೆ. ಅಕ್ರಮ ಸಕ್ರಮ ಪ್ರಕ್ರಿಯೆಯಲ್ಲಿ ಭೂ ಮಂಜೂರಾತಿ ಸಮಿತಿಗಳಲ್ಲಿ ಬಾರೀ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತ ನಡೆಯುತ್ತಿದೆ. ಈ ಬಗ್ಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿರುವ ಸಮ್ಮೇಳನವು ನಮೂನೆ 53 ರಲ್ಲಿ ಸಲ್ಲಿಸಲಾದ ಅರ್ಜಿಗಳನ್ನು ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಕೂಡಲೇ ಇತ್ಯರ್ಥಪಡಿಸಬೇಕೆಂದು ಒತ್ತಾಯಿಸಿದೆ.

ರಾಜ್ಯದ ಅರಣ್ಯ ಭೂಮಿ ಹಾಗೂ ಕಂದಾಯ ಭೂಮಿ ಸಾಗುವಳಿದಾರರು ತಮ್ಮ ಭೂಮಿಯ ಹಕ್ಕಿಗಾಗಿ ರಾಜ್ಯವ್ಯಾಪ್ತಿ ಸಮರಶೀಲ ಹೋರಾಟಕ್ಕೆ ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮ್ಮೇಳನವು ಕರೆ ನೀಡಿದೆಯಲ್ಲದೆ ಅವರು ನಡೆಸುವ ಹೋರಾಟಕ್ಕೆ ಪಕ್ಷವು ಸಂಪೂರ್ಣ ಬೆಂಬಲವನ್ನು ಘೋಷಿಸಿದೆ.

ಕಾರ್ಷಿಕ ಬಿಕ್ಕಟ್ಟು ಮತ್ತು ಪರ್ಯಾಯ ನೀತಿಯ ಜಾರಿಗಾಗಿ

ನಾಲ್ಕು ದಶಕಗಳು ಮೀರಿ ನಮ್ಮನ್ನು ಆಳಿದ ಭೂಮಾಲಿಕ ಬಂಡವಾಳಗಾರ ಸರ್ಕಾರಗಳು ಅನುಸರಿಸುತ್ತಾ ಬಂದ ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಅಭಿವೃದ್ಧಿಯ ನೀತಿಗಳಿಂದ ಒಂದು ರೀತಿಯ ಕೃಷಿ ಅಭಿವೃದ್ಧಿ, ಉತ್ಪಾದನೆ ಹೆಚ್ಚಳಗೊಂಡರೂ ಭೂಮಿಯ ಹಂಚಿಕೆ ಇತ್ಯಾದಿ ಮೂಲಭೂತ ಕಾರ್ಷಿಕ ಪ್ರಶ್ನೆಗಳು ಇತ್ಯರ್ಥವಾಗದೇ ಕಾರ್ಷಿಕ ರಂಗ ಬಿಕ್ಕಟ್ಟಿನತ್ತ ಸಾಗಿದೆ. ಕಳೆದ ಒಂದೂವರೆ ದಶಕದಿಂದ ಜಾರಿಗೆ ತರಲಾಗುತ್ತಿರುವ ಉದಾರೀಕರಣ, ಖಾಸಗೀಕರಣ ಮತ್ತು ಜಾಗತಿಕರಣದ ನೀತಿಗಳ ಫಲವಾಗಿ ಕೃಷಿ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡು ಹಿಂದೆಂದೂ ಕಾಣದಂತಹ ಬಿಕ್ಕಟ್ಟಾಗಿ ಪರಿಣಮಿಸಿದೆ.

ಇದೇ ನೀತಿಗಳನ್ನು ರಾಜ್ಯದಲ್ಲಿಯೂ ಅನುಸರಿಸಿಕೊಂಡು ಬಂದ ಫಲ ಮತ್ತು ಸತತವಾಗಿ ಕಳೆದ ವರ್ಷಗಳು ಆವರಿಸಿದ ಭೀಕರ ಬರಗಾಲ ದಿಂದ ಪರಿಸ್ಥಿತಿಯು ಸಮಸ್ಯೆಗಳನ್ನು ಮತ್ತಷ್ಟು ಬಿಗಡಾಯಿಸಿದೆ. ಸಾವಿರಾರು ರೈತರ ಆತ್ಮಹತ್ಯೆಗಳು ಮತ್ತು ಕೃಷಿ ಕೂಲಿಕಾರರ ಹಸಿವಿನ ಸಾವುಗಳು ಸಂಭವಿಸುತ್ತಿವೆ. ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ. ಇಡೀ ಕೃಷಿ ಕೂಲಿಕಾರರ ಕುಟುಂಬ ಗಳು ಇದಕ್ಕಾಗಿ ಬಲಿಯಾಗಿದ್ದನ್ನು ಕಾಣುತ್ತೇವೆ.

ಒಟ್ಟಾರೆ ಈ ಪರಿಸ್ಥಿತಿಯ ಫಲವಾಗಿ ಕೃಷಿ ಉತ್ಪಾದನೆ ಕಡಿತ, ವಿಶೇಷವಾಗಿ ಆಹಾರ ಧಾನ್ಯಗಳ ಉತ್ಪಾದನೆ ಕಳೆದವರ್ಷಗಳಲ್ಲಿ ಆಹಾರ ಭದ್ರತೆಯ ಗಂಭೀರ ಅಪಾಯ ತರುವ ಆತಂಕದ ಮಟ್ಟಕ್ಕೆ ತಲುಪಿದ್ದನ್ನು ಗಮನಿಸಬೇಕಾಗಿದೆ.

ವಿಶ್ವ ವ್ಯಾಪಾರ ಸಂಘಟನೆ (WTO), ವಿಶ್ವಬ್ಯಾಂಕ್ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಗಳ ಒತ್ತಡಗಳು ಮತ್ತು ದೇಶದ ಹಿರೇ ಬಂಡವಾಳಗಾರರ ಪರವಾದ ನೀತಿಗಳ ಫಲವಾಗಿ ಕೃಷಿಗೆ ಸಿಗುತ್ತಿದ್ದ ಅಲ್ಪ ಪ್ರಮಾಣದ ಸಬ್ಸಿಡಿಗಳ ಕಡಿತ, ವಿದ್ಯುತ್, ನೀರಾವರಿ, ಬೀಜೋತ್ಪಾದನೆಯ ಖಾಸಗೀಕರಣ, ಕೃಷಿಗೆ ಬ್ಯಾಂಕ್ ಸಾಲದ ನಿರಾಕರಣೆ, ಕೃಷಿ ಸಲಕರಣೆಗಳನ್ನು ಅತ್ಯಂತ ದುಬಾರಿ ಮಾಡಿತು. ಆದರೆ ಅದೇ ಸಂದರ್ಭದಲ್ಲಿ 'ಸ್ವದೇಶಿ' ಹೆಸರಲ್ಲಿ ಈ ಹಿಂದೆ ಅಧಿಕಾರಕ್ಕೆ ಬಂದಿದ್ದ ಎನ್‌ಡಿಎ ಸರ್ಕಾರದ ಮುಕ್ತ ಆಮದು ನೀತಿಯ ಫಲವಾಗಿ ಅತ್ಯಂತ ಹೆಚ್ಚು ಸಬ್ಸಿಡಿಗಳೊಂದಿಗೆ ಅತಿ ಅಗ್ಗದ ದರದ ವಿದೇಶಿ ಕೃಷಿ ಉತ್ಪನ್ನಗಳು ದೇಶದೊಳಗೆ ಹರಿದು ಅಡಿಕೆ, ತೆಂಗು, ರೇಷ್ಮೆ ಹಾಲು, ತೊಗರಿ, ಎಣ್ಣೆ ಕಾಳುಗಳು, ಹತ್ತಿ ಇತ್ಯಾದಿ ಹಲವಾರು ಕೃಷಿ ಉತ್ಪನ್ನಗಳ ಬೆಲೆಗಳು ತೀವ್ರವಾಗಿ ಕುಸಿದು, ಹಾಕಿರುವ ಬಂಡವಾಳ ವಾಪಸು ಬಾರದೆ, ಬಹುತೇಕ ಖಾಸಗಿ ಬಡ್ಡಿ ವ್ಯಾಪಾರಸ್ಥರ ಮತ್ತು ಬ್ಯಾಂಕ್ ಸಾಲಗಳನ್ನು ತೀರಿಸಲು ಸಾಧ್ಯವಾಗದೇ ದಿವಾಳಿಯಾಗಿ ಲಕ್ಷ ಲಕ್ಷ ಮಧ್ಯಮ, ಬಡರೈತ ಕುಟುಂಬಗಳು ಭೂಮಿಯನ್ನು ಕಳೆದುಕೊಂಡು ಕೃಷಿಕೂಲಿಕಾರರಾಗುತ್ತಿದ್ದಾರೆ. ಇದರಿಂದ ಕೃಷಿ ಕೂಲಿಕಾರರ ಸಂಖ್ಯೆಯು ದಿನದಿಂದ ದಿನಕ್ಕೆ ವಿಪರೀತವಾಗಿ ಬೆಳೆದು ಕೃಷಿ ಕೂಲಿಯ ಕೆಲಸದ ದಿನಗಳು ಮತ್ತು ಕೂಲಿ ಕಡಿತವಾಗುತ್ತಿದೆ. ಕೂಲಿಕಾರರ ಸಂಖ್ಯೆಯ ಹೆಚ್ಚಳ, ಕೃಷಿ ರಂಗದ ಕುಂಠಿತ ಸ್ಥಿತಿ ಮತ್ತು ಕೃಷಿ ರಂಗದಲ್ಲಿ ಯಂತ್ರಗ ವ್ಯಾಪಕ ಪ್ರವೇಶದಿಂದ ಕೃಷಿ ಕೂಲಿಕಾರರು ರಂಗವನ್ನೇ ಬಿಟ್ಟುಹೊರಗೆ ಬರುತ್ತಿದ್ದಾರ ಕೂಲಿಗಾಗಿ ದೂರದ ನಗರ ಪ್ರದೇಶಗಳಿಗೆ ವಲ ಹೋಗುವುದು ವ್ಯಾಪಕಗೊಂಡು, ಅನೇ ಸಾಮಾಜಿಕ ಆರ್ಥಿಕ ಸಮಸ್ಯೆಗಳಿ ಕಾರಣವಾಗುತ್ತಿದೆ.

ಇಂತಹ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದಿರು ಕೇಂದ್ರದ ಯುಪಿಎ ಸರ್ಕಾರ ಈ ಪರಿಸ್ಥಿತಿಯನ ಬದಲಾಯಿಸಲು ಕೃಷಿ ರಂಗದಲ್ಲಿ ಬಂಡವಾ ಹೂಡಿಕೆಯ ಹೆಚ್ಚಳ, ರೈತರಿಗೆ ಕಡಿಮೆ ಬಡ್ಡಿಯ ಹೆಚ್ಚು ಸಾಲ, ಕೃಷಿಕೂಲಿಕಾರರಿಗೆ ಪ್ರತಿ ಕುಟುಂಬ ಒಬ್ಬ ಸದಸ್ಯರಿಗೆ ವರ್ಷದಲ್ಲಿ 100 ದಿನ ಕೆಲಕ ಖಾತರಿಯ ಕಾಯ್ದೆ, ಭೂಸುಧಾರಣೆ, ಬೆಳೆ ವಿಮೆ ವಿದ್ಯುತ್ ಕಾಯ್ದೆ - 2003 ರ ಪುನರ್ ಪರಿಶೀಲ ಇತ್ಯಾದಿ ಭರವಸೆಗಳನ್ನು ನೀಡಿದೆ.

ಅದೇ ರೀತಿಯಲ್ಲಿ ರಾಜ್ಯದಲ್ಲಿ ಅಧಿಕಾರ ಬಂದಿರುವ ಕಾಂಗ್ರೆ - ಜೆಡಿ(ಎಸ್) ಸಮಿಶ್ರ ಸರ್ಕಾ ಕಡಿಮೆ ದರದಲ್ಲಿ ರೇಷನ್, ಶೇ 6 ರ ಬಡ್ಡಿ ದರದ ರೈತರಿಗೆ ಹೆಚ್ಚು ಬ್ಯಾಂಕ್ ಸಾಲ, ಇತ್ಯಾದಿ ಕೆಲ ಭರವಸೆಗಳನ್ನು ನೀಡಿದೆ.

ಕೇಂದ್ರದ ಯುಪಿಎ ಮತ್ತು ರಾಜ್ಯ ಸರ್ಕಾರಗ ನೀಡಿರುವ ಭರವಸೆಗಳು ಅಗಾಧವಾದ ಬಿಕ್ಕಟ್ಟಿ ಪರಿಹಾರವಾಗಲು ಸಾಧ್ಯವೇ ಇಲ್ಲ. ಮತ್ತು ದಿಸೆಯಲ್ಲಿ ಗಂಭೀರ, ಪ್ರಾಮಾಣಿಕ ಪ್ರಯತ್ನಗಳ ಮಾಡುತ್ತಿಲ್ಲ. ಆದರೂ ಕೇಂದ್ರ ಮತ್ತು ರಾ ಸರ್ಕಾರಗಳು ತಮ್ಮ ಸಿಎಂಪಿ ಗಳಲ್ಲಿ ನೀಡಿರು ಕಾರ್ಷಿಕ ರಂಗದ ಪರವಾದ ನೀತಿಗಳನ್ನು ಜಾರಿ ಮಾಡಬೇಕೆಂದು ಸಿಪಿಐ(ಎಂ) 18ನೇ ರಾ ಸಮ್ಮೇಳನ ಒತ್ತಾಯಿಸಿದೆ ಮತ್ತು ಈ ದಿಕ್ಕಿನ ಪ್ರಬಲ ಜನಾಂದೋಲನ ಮಾತ್ರ ಇವುಗಳ ಜಾರಿ ಖಾತ್ರಿಯೆಂದು ಅಭಿಪ್ರಾಯಪಟ್ಟಿದೆ.

ಅಲ್ಲದೆ ವ್ಯಾಪಕ, ಪರಿಣಾಮಕಾ ಭೂಸುಧಾರಣೆ ಜಾರಿ, ಕೆಲಸ, ಕೂಲಿ ಸೇರಿದಂ ಜೀವನ ಭದ್ರತೆಗಾಗಿ ಸಮಗ್ರ ಕೇಂದ್ರೀಯ ಕಾನೂನು, ನೀರಾವರಿ, ವಿದ್ಯುತ್ ಬೀಜೋತ್ಪಾದನೆ, ಸಂಶೋಧನೆಗಾಗಿ ಹೆಚ್ಚಿ ಸಾರ್ವಜನಿಕ ಬಂಡವಾಳ ಹೂಡಿಕೆ, ಶೇ. 6 ಬಡ್ಡಿಯಲ್ಲಿ ಕೃಷಿಗೆ, ಕೂಲಿಗೆ ಅಗತ್ಯವಿರುವ ಬ್ಯಾಂಕ್‌ಗಳ ಮೂಲಕ ಸಾಲ ನೀಡಿಕೆ, ವಿದೆ ಕೃಷಿ ಉತ್ಪನ್ನಗಳನ್ನು ನಿಯಂತ್ರಿಸಲು ವ ಪ್ರಮಾಣಾತ್ಮಕ ನಿರ್ಬಂಧಗಳನ್ನು ಜಾರಿಗೆ ತರಬೇ

ಕೃಷಿ ಅಭಿವೃದ್ಧಿಗೆ ಪೂರಕವಾಗಿ ಪೇಟೆಂ ಕಾನೂನು ತಿದ್ದುಪಡಿ, ಕೃಷಿ ಉತ್ಪನ್ನಗ ಲಾಭದಾಯಕ ಬೆಲೆಗಳ ನಿಗದಿ, ಬೆಲೆ ಕುಸಿ ಸಂದರ್ಭದಲ್ಲಿ ಸರ್ಕಾರದ ಏಜೆನ್ಸಿಗಳ ಮೂ ಮಾರುಕಟ್ಟೆಯ ಮಧ್ಯ ಪ್ರವೇಶದ ಖಾ ಸಾರ್ವತ್ರಿಕ ರೇಷನ್ ಪದ್ದತಿಯ ಜಾರಿ, ಬೆಳೆ ವಿಮೆ, ಜನ ಕಲ್ಯಾಣಕ್ಕಾಗಿ ಹಲ ಕಾರ್ಯಕ್ರಮ ಜಾರಿ, ಇತ್ಯಾದಿ ಅಂಶಗಳ ಒಳಗೊಂಡ ಪರ್ಯಾಯ ಕೃಷಿ ನೀತಿ ಜಾರಿಗಾಗಿ ಆಗ್ರಹಿಸಿ ಪ್ರಬಲ ಚಳುವಳಿಗಳ ಸಂಘಟಿಸಲು ಸಿಪಿಐ(ಎಂ) 18ನೇ ರಾಜ್ಯ ಸಮ್ಮೇ ಕರೆ ನೀಡಿದೆ.

ಡಬ್ಲ್ಯುಟಿಒದ ಮೂಲಕ ಬರುತ್ತಿರುವ ಸಾಮ್ರಾಜ್ಯಶಾಹಿ ಆಕ್ರಮಣಗಳನ್ನು ಪ್ರತಿರೋಧಿಸಲು ಕರೆ ಫೆಬ್ರವರಿ 26 ರ ಹೋರಾಟಕ್ಕೆ ಬೆಂಬಲ

ಬೌದ್ಧಿಕ ಆಸ್ತಿ ಹಕ್ಕುಗಳ ನೆಪದಲ್ಲಿ ಔಷಧಿಗಳು, ಕೃಷಿ ಬೀಜಗಳು, ರಸ ಗೊಬ್ಬರ, ಕೀಟನಾಶಕ ಮೊದಲಾದವುಗಳ ಉತ್ಪಾದನೆಯ ಮತ್ತು ಮಾರಾಟದ ಹಕ್ಕುಗಳನ್ನು ಸಾಮ್ರಾಜ್ಯಶಾಹಿ ದೇಶಗಳು ತಮ್ಮ ಹತೋಟಿಯಲ್ಲಿಡಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಭಾರತದಲ್ಲಿ ಈ ತನಕ ಪ್ರಚಲಿತವಿದ್ದ ಪ್ರಕ್ರಿಯೆ (ಪ್ರೋಸೆಸ್) ಪೇಟೆಂಟ್ ಪದ್ಧತಿಯ ಬದಲಾಗಿ ಉತ್ಪನ್ನ(ಪ್ರೊಡಕ್ಟ್) ಪೇಟೆಂಟ್ ಪದ್ಧತಿಯನ್ನು ಜಾರಿಗೊಳಿಸಬೇಕೆಂಬುದು ಗ್ಯಾಟ್ ಒಪ್ಪಂದದ ಶರತ್ತುಗಳಲ್ಲಿ ಒಂದಾಗಿತ್ತು. ಈ ಶರತ್ತನ್ನು ತರಾತುರಿಯಲ್ಲಿ ಜಾರಿಗೊಳಿಸಲು ಭಾರತದ ಯು.ಪಿ.ಎ. ಸರಕಾರವು ಸಂಸತ್ತಿನ ಸಾರ್ವಭೌಮ ಹಕ್ಕುಗಳನ್ನೂ ಕಡೆಗಣಿಸಿ ಸುಗ್ರೀವಾಜ್ಞೆ ತರುವ ಮೂಲಕ 1970ರ ಭಾರತದ ಪೇಟೆಂ ಕಾನೂನನ್ನು ತಿದ್ದುಪಡಿ ಮಾಡಿದೆ. ಈ ವಿರೋಧಿ ಕ್ರಮದ ವಿರುದ್ಧ ಇದೇ ಫೆಬ್ರ 26ರಂದು ದೇಶವ್ಯಾಪಿ ಪ್ರತಿಭಟನೆ ನಡೆ ಸಿಪಿಐ(ಎಂ) ಕೇಂದ್ರ ಸಮಿತಿ ನೀಡಿದ ಕರೆಯ ಸಮ್ಮೇಳನವು ಸ್ವಾಗತಿಸಿದೆ ಹಾಗೂ ರಾಜ್ಯಾದ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ವಿಭಾಗಗಳ ಜನತೆಗೆ ಕರೆ ನೀಡಿದೆ.

ಈ ಸನ್ನಿವೇಶದಲ್ಲಿ ಮುಂಬರುವ ದಿನ ಡಬ್ಲ್ಯುಟಿಓ ದ ಒತ್ತಡದಿಂದಾಗಿ ಗಾ ಒಪ್ಪಂದದ ಜಾರಿಯಾಗುವಾಗ ಸಂಭವಿಸಲಿ ದುಷ್ಪರಿಣಾಮಗಳನ್ನು ಪ್ರತಿರೋಧಿಸಲು ವ್ಯಾ ಪ್ರಚಾರ ಮತ್ತು ಪ್ರಕ್ಷೋಭೆಗಳ ಸಂಘಟಿಸಬೇಕೆಂದು ಸಮ್ಮೇಳನವು ತೀರ್ಮಾನಿ

ಸಿಪಿಐ(ಎಂ) ಕೋಲಾರ ಜಿಲ್ಲಾ ಸಮ್ಮೇಳನ

ಚಳುವಳಿ-ಸಂಘಟನೆ ವಿಸ್ತರಣೆಗೆ ನಿರ್ಧಾರ


ಸಿಪಿಐ(ಎಂ) 12ನೇ ಕೋಲಾರ ಜಿಲ್ಲಾ ಸಮ್ಮೇಳನ ಹೋರಾಟಗಳ ನಗರಿ ಬಾಗೇಪಲ್ಲಿಯಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯಿತು. ತಾ: 11,12,13 ಜನವರಿ 2005 ರಂದು ಬಾಗೇಪಲ್ಲಿ ಚರಿತ್ರೆಯಲ್ಲೇ ಕಂಡುಕೇಳರಿಯದ ರೀತಿಯಲ್ಲಿ ಭಾರಿ ಬಹಿರಂಗ ಸಭೆಯೊಂದಿಗೆ ಪ್ರಾರಂಭವಾಯಿತು.

ಜನವರಿ: 11-01-2005 ರಂದು ಇಡೀ ಪಟ್ಟಣ ಕೆಂಪುಮಯವಾಗಿತ್ತು. ಸುಂದರವಾದ ಗೋಡೆಬರಹಗಳು ಸಿಪಿಐ(ಎಂ)ನ ಧೋರಣೆಗಳನ್ನು ಎತ್ತಿ ತೋರಿಸುತ್ತಿತ್ತು. ಪಟ್ಟಣದ ಮೂಲೆ ಮೂಲೆಗಳಲ್ಲಿ ಬ್ಯಾನರ್ ಬಂಟಿಂಗ್‌ಗಳೊಂದಿಗೆ, ಎಲ್ಲಿ ನೋಡಿದರೂ ಪೋಸ್ಟರ್‌ಗಳೊಂದಿಗೆ ಕೆಂಪಿನ ಕಂಪು ಹರಡಿತ್ತು. ಬಹಿರಂಗಸಭೆಗೆ ಕ್ಷೇತ್ರದ ಮೂಲೆಮೂಲೆಗಳಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಕೆಂಪು ಸಾಗರದಂತೆ ಬಂದು ಸೇರಿತು. ಬಾಗೇಪಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳೊಂದಿಗೆ ಯಶಸ್ವಿ ರ್‍ಯಾಲಿ ನಂತರ ಬಹಿರಂಗ ಸಭೆ ಪ್ರಾರಂಭವಾಯಿತು.

ಬಹಿರಂಗಸಭೆ

ಬಹಿರಂಗ ಸಭೆಯಲ್ಲಿ ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಕಾಂ.ಜಿ.ಎನ್.ನಾಗರಾಜ್, ಆಂಧ್ರಪ್ರದೇಶದ ಸಿಐಟಿಯು ಮುಖಂಡ ಹಾಗೂ ಕರ್ನೂಲ್ ಶಾಸಕ ಕಾಂ.ಗಫೂರ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರು ಕಾಂ.ಮಾರುತಿ ಮಾನ್ಪಡೆ, ಬಾಗೇಪಲ್ಲಿ ಕ್ಷೇತ್ರದ ಶಾಸಕರು ಹಾಗೂ ಕೋಲಾರ ಜಿಲ್ಲೆಯ ಸಿಪಿಎಂ ಪಕ್ಷದ ಕಾರ್ಯದರ್ಶಿ ಕಾಂ. ಜಿ.ವಿ.ಶ್ರಿರಾಮ ರೆಡ್ಡಿಯವರು ಭಾಗವಹಿಸಿ ಮಾತನಾಡಿದರು.

ಕೋಲಾರ ಜಿಲ್ಲೆಯನ್ನು ಆಂಧ್ರದ ಅನಂತಪುರ ಜಿಲ್ಲೆಗೆ ಹೋಲಿಸಿದ ಕಾಂ.ಗಫೂರ್‌ರವರು ಹೋರಾಟಗಳ ಮುಖಾಂತರವೇ ರೈತ ಕೃಷಿ ಕೂಲಿಕಾರರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿದೆಯೆಂದು ತಿಳಿಸಿದರು. ನೂತನ ಆರ್ಥಿಕ ಧೋರಣೆಗಳ ಪರಿಣಾಮವಾಗಿ ಇಡೀ ಆಂದ್ರಪ್ರದೇಶವನ್ನು ಚಂದ್ರಬಾಬು ನಾಯ್ಡು ಸಾಲದ ಕೂಪದಲ್ಲಿ ಸಿಲುಕಿಸಿದರು. ಅದೇ ದಾರಿಯಲ್ಲಿ ನಡೆದ ಎಸ್.ಎಂ.ಕೃಷ್ಣ ರೈತ ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸಿದ ಪರಿಣಾಮ ಅಧಿಕಾರ ಕಳೆದುಕೊಂಡರು. ಕೇಂದ್ರದಲ್ಲಿ ಎನ್‌ಡಿಎ ಅನುಸರಿಸಿದ ಜನವಿರೋದಿ ನೀತಿಗಳು ಎನ್‌ಡಿಎ ಅನ್ನು ಮಣ್ಣು ಮುಕ್ಕಿಸಿದವು. ಕಳೆದ ಚುನಾವಣೆಗಳು ಎಡಪಕ್ಷಗಳಿಗೆ ದೇಶದ ಜನ ನಿರ್ದೇಶನ ನೀಡುವಷ್ಟು ಶಕ್ತಿಯನ್ನು ನೀಡಿದರು ಎಂದು ಗಫೂರ್‌ರವರು ತಿಳಿಸಿದರು.


ಕಾರ್ಯದರ್ಶಿ ಜಿ.ವಿ.ಎಸ್

ಕೇಂದ್ರ ಸರ್ಕಾರ ಎಡಪಕ್ಷಗಳ ಬೆಂಬಲದಿಂದ ಮಾತ್ರವೇ ನಡೆಯುತ್ತಿದೆ. ಜನರ ಪರವಾಗಿ ಕೆಲಸ ಮಾಡುವಷ್ಟು ದಿನ ನಮ್ಮ ಬೆಂಬಲವಿರುತ್ತದೆ. ಜನವಿರೋಧಿ ಕೆಲಸ ಮಾಡಿದರೆ, ನಾವು ಕೈಕಟ್ಟಿ ಕುಳಿತುಕೊಂಡಿರುವುದಿಲ್ಲ ಎಂದು ಎಚ್ಚರಿಕೆಯ ಮಾತನಾಡಲು ಮರೆಯಲಿಲ್ಲ.


ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮಾತನಾಡುತ್ತಾ ಕೃಷಿ ಕೂಲಿಕಾರರಿಗೆ ಕನಿಷ್ಟ ನೂರು ದಿನಗಳ ಉದ್ಯೋಗ ಭರವಸೆ ಯೋಜನೆಯನ್ನು ಜಾರಿ ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದರು.

ರೈತರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮಾತನಾಡಿದರು. ಜಿಲ್ಲೆಯ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿದರು. ಈ ಸಮಸ್ಯೆಗಳ ವಿರುದ್ಧ ಹೋರಾಟ ರೂಪಿಸಲು ಸಮ್ಮೇಳನ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದರ ಬಗ್ಗೆ ತಿಳಿಸಿದರು.

ವೆಂಟಕಸ್ವಾಮಿರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಭಾಸ್ಕರರೆಡ್ಡಿ ಸ್ವಾಗತಿಸಿ ಚಲಪತಿ ವಂದಿಸಿದರು.

ಸಮ್ಮೇಳನದ ಕಲಾಪಗಳು

ಸಂಜೆ 4.30 ಕ್ಕೆ ಧ್ವಜಾರೋಹಣ ಕಾಂ.ಇ.ಕೆ.ನಾಯನಾರ್‌ನಗರದಲ್ಲಿ ಜಿಲ್ಲೆಯ ಹಿರಿಯ ಸಂಗಾತಿಗಳಾದ ಕಾಂ.ಸವರಿದಾಸ್‌ರವರು ನೆರವೇರಿಸಿದರು. ದ್ವಜಾರೋಹಣದೊಂದಿಗೆ ಪ್ರಾರಂಭವಾದ ಸಮ್ಮೇಳನವನ್ನು ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು ಉದ್ಘಾಟಿಸಿ ಮಾತನಾಡಿದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಕೂಲಂಕುಶವಾಗಿ ವಿವರಿಸಿದರು. ಮೂರನೇ ಜಗತ್ತಿನ ದೇಶಗಳ ಮೇಲೆ ನಡೆಯುತ್ತಿರುವ ದಾಳಿ ದಬ್ಬಾಳಿಕೆಗಳನ್ನು ತಿಳಿಸಿದರು. ಅಮೇರಿಕಾ ಮತ್ತು ಮಿತ್ರ ದೇಶಗಳು ಭಯೋತ್ಪಾದನೆ ಹೆಸರಿನಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ತನ್ನ ಮಿಲಿಟರಿಯನ್ನು ವಿಸ್ತಾರಗೊಳಿಸುತ್ತಾ ಇಡೀ ಪ್ರಪಂಚವನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಯತ್ನಿಸುತ್ತಿರುವ ಬಗ್ಗೆ ವಿವರಿಸಿದರು. ಎಲ್.ಪಿ.ಜಿ ಧೋರಣೆಗಳ ಮುಖಾಂತರ ಮೂರನೆ ಜಗತ್ತಿನ ರಾಷ್ಟ್ರಗಳನ್ನು ನಿರಾತಂಕವಾಗಿ ಶೋಷಿಸುತ್ತಿರುವ ಬಗ್ಗೆ ವಿವರಿಸಿದರು. ಅದರ ಪರಿಣಾಮ ನಮ್ಮ ದೇಶದಲ್ಲಿರುವ ರೈತರ ಕಾರ್ಮಿಕರ ಪರಿಸ್ಥಿತಿ



ಹದಗೆಡುತ್ತಿರುವುದರ ಬಗ್ಗೆ ಬೆಳಕು ಚೆಲ್ಲಿ ಮಾತನಾಡಿದರು. ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳು ದುಡಿಯುವ ವರ್ಗವನ್ನು ಆರ್ಥಿಕ ದಿವಾಳಿಯತ್ತ ತೆಗೆದುಕೊಂಡುಹೋಗುವ ಬಗ್ಗೆ ವಿವರಿಸಿದರು. ಅವುಗಳ ವಿರುದ್ಧ ನಮ್ಮ ಸಂಘಟನೆ ವಿಸ್ತಾರಗೊಳಿಸುತ್ತಾ ನಿರಂತರ ಚಳುವಳಿಗಳನ್ನು ಕಟ್ಟುತ್ತಾ ಆ ನೀತಿಗಳನ್ನು ಹಿಂದೋಡಿಸಬೇಕಾಗಿದೆ ಎಂದು ಕರೆ ನೀಡಿದರು. ಸಮ್ಮೇಳನಕ್ಕೆ ಅಮೂಲ್ಯವಾದ ಸಲಹೆಗಳನ್ನು ನೀಡಿದರು.

ಸಮ್ಮೇಳನದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ 142 ಪ್ರತಿನಿಧಿಗಳು 23 ವೀಕ್ಷಕರು ಭಾಗವಹಿಸಿದ್ದರು. 46 ಪ್ರತಿನಿಧಿಗಳು 7 ಗಂಟೆ ಕಾಲ ಚರ್ಚೆ ಮಾಡಿದರು. ರಾಜಕೀಯ, ಸಂಘಟನೆ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಸಮ್ಮೇಳನದಲ್ಲಿ 24 ನಿರ್ಣಯಗಳು ಅಂಗೀಕಾರವಾದವು. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಪ್ರಮುಖ ಹೋರಾಟಗಳಾದ ಶಾಶ್ವತ ನೀರಾವರಿ, ವಿದ್ಯುತ್ ಹೋರಾಟದಂತಹವುಗಳು ನಮ್ಮ ಪಕ್ಷದ ಪ್ರಭಾವವನ್ನು ಹೆಚ್ಚಿಸಿವೆ. ಬಂಡವಾಳಶಾಹಿ ಪಕ್ಷಗಳ ದೊಂಬರಾಟ ಜನರಲ್ಲಿ ಅಸಹ್ಯವನ್ನು ಹೆಚ್ಚಿಸುತ್ತಿದೆ. ಹಿಂದಿನ ಚುನಾವಣೆಯಲ್ಲಿ ವಿರೋಧ ಪಕ್ಷದ ಶೂನ್ಯತೆ ಉಂಟುಮಾಡಿತ್ತು. ಜನತೆ ಬಂಡವಾಳಶಾಹಿ ಪಕ್ಷಗಳಿಂದ ಮುಕ್ತಿ ಕಾಣಬೇಕೆಂದು ತವಕಿಸುತ್ತಿದೆ. ಆದರಿಂದ ನಮ್ಮ ಸಂಘಟನೆಯ ವಿಸ್ತಾರಗೊಳಿಸುವ ಮೂಲಕ ಜಿಲ್ಲೆಯಲ್ಲಿ ಎಡಪಂಥೀಯ ಪರ್ಯಾಯವನ್ನು ತರಬೇಕೆಂದು ನಿರ್ಣಯ ಕೈಗೊಳ್ಳಲಾಯಿತು.

ನಾಲ್ಕು ವರ್ಷದಿಂದ ನಡೆಯುತ್ತಿರುವ ಶಾಶ್ವತ ನೀರಾವರಿ ಯೋಜನೆಗಳ ಜಾರಿಗಾಗಿ ಚಳುವಳಿ ಇನ್ನಷ್ಟು ತೀವ್ರಗೊಳಿಸಬೇಕೆಂದು ನಿರ್ಣಯ ಅಂಗೀಕರಿಸಲಾಯಿತು. ಕೃಷಿ ಕೂಲಿಕಾರರಿಗೆ ಕನಿಷ್ಠ ನೂರು ದಿನ ಉದ್ಯೋಗ ಭರವಸೆ ಯೋಜನೆ ಜಾರಿ ಮಾಡಬೇಕೆಂದು ಒತ್ತಾಯಿಸಿ, ಪಡಿತರ ಚೀಟಿ ಸಮರ್ಪಕವಾಗಿ ಹಂಚಬೇಕೆಂದು, ಪಡಿತರ ವ್ಯವಸ್ಥೆ ಬಲಪಡಿಸಬೇಕೆಂದು, ಕೋಲಾರ ಚಿನ್ನದಗಣಿ ಕಾರ್ಮಿಕರ ಪುನರ್‌ವಸತಿಗಾಗಿ, ಬಿ.ಇ.ಎಂ.ಎಲ್. ಅನ್ನು ಸಾರ್ವಜನಿಕ ಉದ್ದಿಮೆಯನ್ನಾಗಿ ಉಳಿಸಬೇಕೆಂದು, ಹನಿ ನೀರಾವರಿ ಯೋಜನೆಯನ್ನು ಜಿಲ್ಲೆಯಾದ್ಯಂತ ವಿಸ್ತರಿಸಬೇಕೆಂದು, ಡೈರಿ ಉತ್ಪಾದನೆಗಳನ್ನು ಹೆಚ್ಚಿಸುವ ಮೂಲಕ ಹಾಲಿನ ದರ ನಿಯಂತ್ರಣದಲ್ಲಿಡುವಂತೆ ಹಾಗೂ ರೇಷ್ಮೆ ಬೆಲೆಯನ್ನು ನಿಯಂತ್ರಣದಲ್ಲಿಡಲು ವಿದೇಶಿ ರೇಷ್ಮೆಯಿಂದ ದೇಶಿ ರೇಷ್ಮೆಯನ್ನು ರಕ್ಷಿಸಬೇಕೆಂದು ಒತ್ತಾಯಿಸಿ, ವಿಶ್ವವ್ಯಾಪಾರ ಒಪ್ಪಂದಗಳು ಜಾರಿಯಾಗುವ ಏಪ್ರಿಲ್ ಒಂದರಂದು ಜಿಲ್ಲೆಯಾದ್ಯಂತ ಬೃಹತ್ ಹೋರಾಟ ಹಮ್ಮಿಕೊಳ್ಳುವ ಇನ್ನೂ ಹಲವಾರು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ಸಮಿತಿ

ಪ್ರತಿನಿಧಿಗಳ ಚರ್ಚೆಗೆ ಕಾರ್ಯದರ್ಶಿಯವರಿಂದ ಅರ್ಥಪೂರ್ಣವಾದ ಉತ್ತರ ಸಿಕ್ಕಿತು. ಸಮ್ಮೇಳನ ಐಕ್ಯತೆಯ ಸಂದೇಶವನ್ನು ಸಾರಿತು. ಮುಂದಿನ ಮೂರು ವರ್ಷಗಳ ಅವಧಿಗೆ ಎರಡು ಸ್ಥಾನಗಳನ್ನು ಖಾಲಿ ಇಟ್ಟು 23 ಜನರ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಯಾಗಿ ಜಿ.ವಿ.ಶ್ರೀರಾಮರೆಡ್ಡಿಯವರು ಮರು ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಟಿ.ಎಸ್.ಮಣಿ, ಅರ್ಜುನನ್, ಕೆ.ಎಂ.ವೆಂಕಟೇಶ್, ವಿ.ವೆಂಕಟಸ್ವಾಮಿರೆಡ್ಡಿ, ಸಿ.ಡಿ.ಗಂಗುಲಪ್ಪ, ಗಾಂಧಿನಾರಾಯಣ ಸ್ವಾಮಿ, ಪಿ.ಆರ್.ಸೂರಿ ಮತ್ತು ಸಿದ್ದಗಂಗಪ್ಪರವರು ಆಯ್ಕೆಯಾದರು. ಸದಸ್ಯರಾಗಿ ಭಾಸ್ಕರರೆಡ್ಡಿ, ಎನ್.ಎಸ್.ಚಲಪತಿ, ಕೆ.ನಾಗರಾಜು, ಪಿ.ಶ್ರೀನಿವಾಸ್, ಆನಂದರಾಜ್, ಗಂಗಿರೆಡ್ಡಿ, ವೀರಪ್ಪರೆಡ್ಡಿ, ಗೋಪಿನಾಥ, ವಿ.ಗೀತಾ, ಹೋಳೂರು ಶಂಕರ್, ಕೆ.ಎಸ್.ನಾರಾಯಣಸ್ವಾಮಿ ಆಯ್ಕೆಯಾದರು.

ಕೆ.ಎಂ.ವೆಂಕಟೇಶ್, ಅರ್ಜುನನ್, ಭಾಸ್ಕರರೆಡ್ಡಿ, ಸಿದ್ಧಗಂಗಪ್ಪ ಮತ್ತು ಗಂಗಿರೆಡ್ಡಿಯವರನ್ನೊಳಗೊಂಡು ಅಧ್ಯಕ್ಷ ಮಂಡಳಿ ಮೂರು ದಿನಗಳ ಕಲಾಪಗಳನ್ನು ಸುಸೂತ್ರವಾಗಿ ನಡೆಸಿ ಕೊಟ್ಟಿತು. ಕೆ.ಆರ್.ಶ್ರಿಯಾನ್‌ರವರು ಮತ್ತು ಜಿ.ಎನ್.ನಾಗರಾಜ್‌ರವರ ಸಮಾರೋಪ ಭಾಷಣದೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

- ಭಾಸ್ಕರ ರೆಡ್ಡಿ

ಮತ್ತೊಮ್ಮೆ ಬಿಜೆಪಿಯ ಭ್ರಷ್ಟ ಮುಖ ಬಯಲು

ಪುಟ 7 ರಿಂದ

ಇತ್ತೀಚೆಗಷ್ಟೇ ಬೆಳಕಿಗೆ ಬಂದಿದೆ. ಈ ವಂಚನೆ ಹೇಗೆ ರಾಷ್ಟ್ರೀಯ ಭದ್ರತೆಗೂ ಅಪಾಯವುಂಟು ಮಾಡಿದೆ ಎಂಬುದನ್ನು ಮೇಲೆ ಹೇಳಿದ ಪತ್ರಕರ್ತರಾದ ಓಲ್ಗಾ ಚಿಲ್ಲಿಸ್ ಹೇಳಿದ್ದಾರೆ. ಅಂದರೆ ದೇಶಭಕ್ತಿಯ ಬೊಬ್ಬೆ ಹಾಕುವ ಬಿಜೆಪಿ ಮುಖಂಡರು ಅಂಬಾನಿಗಳಿಗೆ ಲಾಭ ದೊರಕಿಸಿಕೊಡಲು ದೇಶದ ಭದ್ರತೆಗೆ ಅಪಾಯವುಂಟು ಮಾಡಲೂ ಹೇಸುವುದಿಲ್ಲ!

ತನಿಖೆಯಾಗಬೇಕು!

ಈ ರಿಲಯನ್ಸ್ ಗುಂಪು 1976 ರಲ್ಲಿ ಆರಂಭವಾಯಿತು. 1986 ರ ವೇಳೆಗೆ ಅದು ದೇಶದ ಕೈಗಾರಿಕಾ ಗುಂಪುಗಳಲ್ಲಿ ಹತ್ತನೇ ಸ್ಥಾನ ಪಡೆಯಿತು. ಈಗ ಅದು ಟಾಟಾ ಮತ್ತು ಬಿರ್ಲಾಗಳನ್ನು ಬಹಳ ಹಿಂದಕ್ಕೆ ಹಾಕಿದೆ. ಮೂರೇ ದಶಕಗಳಲ್ಲಿ ಇಂತಹ ಉನ್ನತಿ ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಮೇಲಿನ ಕೆಲವು ಅಂಶಗಳು ಅದಕ್ಕೆ ಭಾಗಶಃ ಉತ್ತರವನ್ನೂ ಕೊಡುತ್ತವೆ. ದುಬಾಯಿಯ ಒಂದು ಪೆಟ್ರೋಲ್ ಪಂಪ್‌ನಲ್ಲಿ ಸಾಮಾನ್ಯ ನೌಕರನಾಗಿದ್ದ ಧೀರೂಬಾಯಿ ಅಂಬಾನಿಯ ಜೀವನಚರಿತ್ರೆ ಬರೆದಾತ ಇಂತಹ ಇನ್ನೂ ಕೆಲವು ಅನೈತಿಕ ಕೃತ್ಯಗಳ ಉದಾಹರಣೆ ನೀಡಿದ್ದಾರೆ. ಇಂತವರಿಗೆ 'ಭಾರತ ರತ್ನ' ನೀಡಬೇಕೆಂದು ಬೇಡಿಕೆ ಬಂದಿದೆಯೆಂದರೆ ಸ್ವಾತಂತ್ರ್ಯದ ನಂತರ ನಮ್ಮ ದೇಶ ಎಲ್ಲಿಗೆ ತಲುಪಿದೆಯೆಂದು ಆಶ್ಚರ್ಯ ಪಡುವಂತಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಖೇದ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ಈ ಇಡೀ ಮಹಾಜನ್ ಪ್ರಕರಣ ದೇಶಕ್ಕೆ ಆಘಾತ ಉಂಟು ಮಾಡಿದೆ. ಸರ್ಕಾರದ ಇದನ್ನು ಸರಿಯಾಗಿ ತನಿಖೆ ಮಾಡಬೇಕು ಎಂದು ಸುರ್ಜಿತ್ ಯುಪಿಎ ಸರ್ಕಾರವನ್ನು ಆಗ್ರಹಪಡಿಸಿದ್ದಾರೆ. ಯುಪಿಎ ಸರ್ಕಾರ ಇದನ್ನು ಉಪೇಕ್ಷಿಸಿದರೆ ತನಗೇ ಕೇಡು ಬಗೆದಂತಾಗುತ್ತದೆ. ಈಗಾಗಲೇ ಈ ಬಗ್ಗೆ ಹಲವು ದನಿಗಳು ಎದ್ದಿವೆ. 'ಅಂಬಾನಿ ಕುಟುಂಬದೊಂದಿಗೆ ಸಂಬಂಧಗಳಿರುವ ಕಾಂಗ್ರೆಸ್ ಮುಖಂಡರ ಪಟ್ಟಿ ಬಿಜೆಪಿ ಮುಖಂಡರ ಪಟ್ಟಿಯಷ್ಟೇ ದೊಡ್ಡದಿದೆ' ಎಂದು 'ಪಂಜಾಬ್ ಕೇಸರಿ' ಪತ್ರಿಕೆ ಹೇಳಿದೆ. ಈ ಪ್ರಕರಣ ನಡೆದಾಗ ಪ್ರಮೋದ್ ಮಹಾಜನ್ ಕೇಂದ್ರ ಮಂತ್ರಿಗಳಾಗಿದ್ದರಿಂದ ಸಿಬಿಐ ತಾನಾಗಿಯೇ ಭ್ರಷ್ಟಾಚಾರ-ವಿರೋಧಿ ಕಾನೂನಿನ ಅಡಿಯಲ್ಲಿ ಮುಂದುವರೆಯಬಹುದು ಎಂದು ಆ ಪತ್ರಿಕೆ ಹೇಳಿದೆ.


ಮೇಲೆ ಹೇಳಿದ ಅಂಬಾನಿಗಳಿಗೆ ಐಪಿಸಿಎಲ್ ನ ವರ್ಗಾವಣೆಯನ್ನು ತನಿಖೆ ಮಾಡಬೇಕು ಎಂದಿರುವ ಕಾಂ. ಸುರ್ಜಿತ್, ಇದು ನಿಜವಾಗಿಯೂ ಮನಮೋಹನ್ ಸರ್ಕಾರಕ್ಕೆ ಅಗ್ನಿ ಪರೀಕ್ಷೆಯ ಸಮಯ. ಈ ಸರ್ಕಾರದ ವಿಶ್ವಾಸಾರ್ಹತೆ ಈಗ ಪಣಕ್ಕಿದೆ ಎಂದಿದ್ದಾರೆ.

ಯುದ್ಧ

ಕೊಲ್ಲುವ ಕೈಗಳ ಹಿಂದೆ
ಇರುವ ಮನ ಒಂದೆ
ಸಾವ ಜೀವಗಳಾಳದ
ನೋವು ತಾನೊಂದೆ

- ಎಂ.ಡಿ.ಒಕ್ಕುಂದ

'ಬಡವರ ಶೋಷಣೆಗಾಗಿ ಸಹಾಯಧನ?!'



ಕುರುಡು ಕಾಂಚಾಣ

ಜಿ.ಎಸ್.ಮಣಿ

ಕೇಂದ್ರದ ಹಣಕಾಸು ಸಚಿವ ಕಾಂಗ್ರೆಸ್‌ನ ಪಿ.ಚಿದಂಬರಂ ಉದಾರೀಕರಣದ ಹರಿಕಾರ. ಬಂಡವಾಳಿಗರ ಸಾಮ್ರಾಜ್ಯ ಶಾಹಿಗಳ ಸಿದ್ಧಾಂತಗಳನ್ನು ಜಾರಿಗೆ ತರುವಲ್ಲಿ ನಿಷ್ಣಾತ. ಈ ಮಹಾಶಯರದ್ದು ಈಗ ಬಡಜನರ ಸಹಾಯಧನಗಳನ್ನು ಅವರಿಗೇ ತಲುಪಿಸುವ ವಾಗ್ದಾನ ಅವರದ್ದು.



ಎಲ್ಲ ಉದಾರೀಕರಣದ ಆರ್ಥಿಕ ನೀತಿಗಳನ್ನು ಭಂಡತನದಿಂದ ಜಾರಿಗೊಳಿಸುವ ಹುನ್ನಾರ ನಡೆಸುತ್ತಾರೆ ಈತ. ಈತ ಸಹಾಯ ಧನಗಳ ಬಗ್ಗೆ ದೊಡ್ಡ ಮಾತುಗಳನ್ನೇ ಆಡಿದ್ದಾರೆ. ಈ ಸಹಾಯಧನಗಳನ್ನು ಹೆಚ್ಚೆಚ್ಚು ಪಾರದರ್ಶಕಗೊಳಿಸಿದರೆ ಅವು ಜನರಿಗೆ ತಲುಪುತ್ತವೆ ಎಂಬುದು ಆತನ ಅಂಬೋಣ.

ಇಲ್ಲಿಯವರೆಗೆ ಈ ಸಹಾಯ ಧನ ನೀಡಿಕೆ ಪ್ರಕ್ರಿಯೆಯನ್ನು ಪಾರದರ್ಶಕ ಗೊಳಿಸುವುದಕ್ಕೆ ಯಾರೂ ಅಡ್ಡಗಾಲು ಹಾಕಿಲ್ಲ. ಹಾಗಾದರೆ ಈಗ ಈ ಮಾತೇಕೇ? ಈಗ ಈ ಮಾತೇಕೆಂದರೆ ಪಾರದರ್ಶಿಕರಣದ ಹೆಸರಿನಲ್ಲಿ ಹಲವಾರು ಸಹಾಯಧನ ಗಳನ್ನು ವಿವಿಧ ರೀತಿಯಲ್ಲಿ ಇಲ್ಲವಾಗಿಸುವ ಹುನ್ನಾರದ ಮಾತುಗಳು ಇವರದು. ನಿರುದ್ಯೋಗಿಗಳಿಗೆ ಉದ್ಯೋಗ ಭರವಸೆ ಯೋಜನೆ ಜಾರಿಗೆ ತರಲು ಹಣವೆಲ್ಲಿದೆ ಎಂದು ಕೇಳಿದಾತ ಈತ. ನೌಕರರ ಪ್ರಾವಿಡೆಂಡ್ ಫಂಡ್‌ನ ಮೇಲಿನ ಬಡ್ಡಿದರ ಹೆಚ್ಚಿಸಲು ಹಣ ಎಲ್ಲಿದೆ ಎಂದು ಕೇಳಿದವ ಈತ. ಹಿಂದಿನ ಸಾಲಿನ ಬಜೆಟ್ಟಿನಲ್ಲಿ ಶೇರು ವಹಿವಾಟುದಾರರಿಗೆ ತೆರಿಗೆ ವಿಧಿಸಿ ಅವರು ಪ್ರತಿಭಟಿಸಿದಾಗ ಆರು ಸಾವಿರ ಕೋಟಿ ರೂಪಾಯಿಗಳ ತೆರಿಗೆ ಸೂಟಿ ನೀದವರೂ ಇವರೇ?

ಈತ ಬಡವರಿಗೆ ಸಹಾಯಧನ ತಲುಪಿಸುವ ಮಾತನಾಡಿದರೆ ನಂಬೋಣವೇ?

ಸಕ್ಕರೆ ಕಹಿಯಾಗಿಲ್ಲವೇ?

ಸಕ್ಕರೆ ಕಹಿಯಾಗುವುದೆ ಎಂದು ಕೇಳಬೇಡಿ. ನಿಮ್ಮ ಜೇಬಿನಲ್ಲಿ ಸಾಕಷ್ಟು ಹಣವಿಲ್ಲದಿದ್ದರೆ ಕಹಿ ಕಾಫಿ/ ಚಹವನ್ನೇ ಕುಡಿಯಬೇಕಾಗುತ್ತದೆ. ಸಕ್ಕರೆ ಇಲ್ಲದ ಆಹಾರ ಕಹಿಯಾಗುತ್ತದೆ. ಎಲ್ಲಕ್ಕಿಂತ ಕಹಿ ಅನುಭವವಾಗುವುದು ಇದೇ ಸಕ್ಕರೆಗಾಗಿ ಹೆಚ್ಚೆಚ್ಚು ಬೆಲ ತೆರಬೇಕಾಗಿ ಬಂದಾಗ.

ಸಕ್ಕರೆಯ ಬೆಲೆ ದಿನೇ ದಿನೆ ಏರುತ್ತಿದೆ. ಸಕ್ಕರೆ ಉದ್ಯಮಿಗಳು ಈಗ ಅತ್ಯಂತ ಉತ್ಸಾಹಭರಿತರಾಗಿದ್ದಾರೆ. ಕಳೆದೆರಡು ಮೂರು ವರ್ಷಗಳಲ್ಲಿ ನೆಲಕಚ್ಚಿದ ಸಕ್ಕರೆ ಬೆಲೆ ಗಗನಕ್ಕೇರುತ್ತಿರುವಾಗ ಇವರು ಉತ್ಸಾಹ ಭರಿತರಾಗಲೇಬೇಕಲ್ಲ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅದರಲ್ಲೂ ಉದಾರೀಕರಣದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವಾಗ ಏನೇನೋ ಆಗುತ್ತದೆ ಎಂಬುದಕ್ಕೆ ಸಕ್ಕರೆ ಎಂಬ ಸರಕು ಒಂದು ಒಳ್ಳೆಯ ಉದಾಹರಣೆ. ದೇಶದ ಸಕ್ಕರೆ ಉತ್ಪಾದನೆ 2002-03 ನೇ ಸಾಲಿನಲ್ಲಿ 20145 ಲಕ್ಷ ಟನ್ನುಗಳಿಗೇರಿ ತುತ್ತತುದಿಗೇರಿತ್ತು. ನಂತರದ ಸಾಲಿನಲ್ಲಿ ಜರ್‍ರನೆ 140 ಲಕ್ಷ ಟನ್ನುಗಳಿಗಿಳಿದ ಉತ್ಪಾದನೆ ಈ ಸಾಲಿನಲ್ಲಿ 120 ಲಕ್ಷ ಟನ್ನುಗಳಿಗೆ ಇಳಿಯುವ ಲಕ್ಷಣಗಳಿವೆಯಂತೆ. ಬೆಲೆ ಏರಿಕೆಗೆ ಒಳ್ಳೆಯ ವಾತಾವರಣ. ಇದರ ಜೊತೆಗೆ ಉದಾರೀಕರಣದ ಲಾಭ ಪಡೆವ ಬಂಡವಾಳಿಗರು ಮಾರುಕಟ್ಟೆಯಿಂದ ಸಕ್ಕರೆಯನ್ನು ಅಡಗಿಸಿಬಿಟ್ಟರೆ ಬೆಲೆಗಳು ಗಗನಕ್ಕೆಏರದೆ ಉಳಿದಾವೇ?

ಬಂಡವಾಳಶಾಹಿ ಉತ್ಪಾದನಾ ರೀತಿಯೇ ಇದು. ವಿಶ್ವ ವ್ಯಾಪಾರ ಒಪ್ಪಂದವಿರುವಾಗ ವಿಶ್ವದ ಇತರೆಡೆಗಳಿಂದ ಸಕ್ಕರೆ ಹರಿದುಬಂದು ನಮ್ಮಲ್ಲಿನ ಬೆಲೆಗಳು ಇಳಿಯಬೇಕಲ್ಲವೇ? ಹಾಗೆಂದು ಉದಾರೀಕರಣವಾದಿಗಳು ವಾದವನ್ನು ಹೂಡುತ್ತಾರೆ. ಆದರೆ ಇಂದು ಸಕ್ಕರೆಯ ಬೆಲೆ ಏರುತ್ತಲೇ ಇದೆ. ಹಲವಾರು ಸರಕುಗಳು ಇದೇ ರೀತಿಯ ವರ್ತನೆ ತೋರತೊಡಗಿವೆ. ಬೆಲೆಗಳು ಗಗನಕ್ಕೇರುತ್ತವೆ. ಉತ್ಪಾದನೆ ಹೆಚ್ಚುತ್ತದೆ. ಬೆಲೆ ಕುಸಿಯುತ್ತದೆ. ಬೆಳೆದವರು ಬೆಳೆದ ಖರ್ಚನ್ನು ಪಡೆಯಲಾರದೆ ಮಾಡಿದ ಸಾಲಗಳು ಭಾರ ತಡೆಯಲಾರದೆ ಕುಸಿಯುತ್ತವೆ. ಕೊಳ್ಳುವವರು ಬೆಲೆ ಹೆಚ್ಚಿದಾಗ ಅದರ ಭಾರ ತಡೆಯಲಾರದೆ ಕುಸಿಯುತ್ತದೆ. ಹೀಗೆ ಏರುಪೇರು ಷೇರು ಅತಿಕಡಿಮೆ ಜನರಿಗೆ ನಲಿವು, ಅತಿ ಹೆಚ್ಚು ಜನರಿಗೆ ನೋವು.

ಸಕ್ಕರೆ ನಿಮಗಿನ್ನೂ ಕಹಿಯಾಗಿಲ್ಲವೇ?

ಪತ್ರಿಕಾ ಟಿಪ್ಪಣಿ 18

ವಿದೇಶಿ ಬಂಡವಾಳಿಗರು ಭಾರತೀಯ ಬಂಡವಾಳಿಗರ ಜೊತೆಗೆ ಸಹಯೋಗದಿಂದ ನಡೆಸುವ ಜಂಟಿ ಉದ್ದಿಮೆಗಳ ಬಗೆಗೆ ಶೀಘ್ರ ನಿರ್ಬಂಧಗಳನ್ನು ವಿಧಿಸಿದ್ದ ಪತ್ರಿಕಾಟಿಪ್ಪಣಿ 18 ಈಗ್ಗೆ ಕೆಲವು ದಿನಗಳಿಂದ ಚರ್ಚೆಯಲ್ಲಿತ್ತು.

ಈ ಟಿಪ್ಪಣಿಯ ಪ್ರಕಾರ ವಿದೇಶಿ ಬಂಡವಾಳಿಗರು ಭಾರತಿಯ ಬಂಡವಾಳಿಗರೊಂದಿಗೆ ಜಂಟಿ ವ್ಯವಹಾರ ಪ್ರಾರಂಭಿಸಿದ ಮೇಲೆ ಯಾವುದೇ ಕಾರಣಕ್ಕೂ ನಮ್ಮ ದೇಶದ ಬೇರೆ ಬಂಡವಾಳಿಗರ ಜೊತೆಗೆ ಜಂಟಿ ವ್ಯವಹಾರವನ್ನು ಇದೇ ಉದ್ದಿಮೆಯಲ್ಲಿ ಪ್ರಾರಂಭಿಸಲು ಮೊದಲನೆಯ ಭಾರತೀಯ ಬಂಡವಾಳಿಗರ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ಸಹಯೋಗಕ್ಕಾಗಿ ಭಾರತಕ್ಕೆ ಬಂದ ವಿದೇಶಿ ನೇರ ಹೂಡಿಕೆದಾರ ಭಾರತಿಯ ಬಂಡವಾಳಿಗರೊಡನೆ ಮನಸ್ಸು ಬಂದಂತೆ ಆಡಿ ದೇಶೀ ಉದ್ದಿಮೆದಾರರಿಗೆ ನಷ್ಟ ಉಂಟು ಮಾಡದಿರಲೆಂದು ಇದನ್ನು 1998 ರಲ್ಲಿ ಪ್ರತಿಪಾದಿಸಲಾಗಿತ್ತು.

ಉದಾರೀಕರಣದ ಕ್ರಮವಾಗಿಯೇ ಇದು ಬರದಿತ್ತು. ಇಂದು ಕೇಂದ್ರದ ಯುಪಿಎ ಸರ್ಕಾರ ಈ ಟಿಪ್ಪಣಿ 18 ಅನ್ನು ಹೊಸ ಪತ್ರಿಕಾ ಟಿಪ್ಪಣಿ ತರುವ ಮೂಲಕ ತೆಗೆದುಹಾಕಿದೆ. ಈ ಕ್ರಮದಿಂದ ದೇಶೀ ಬಂಡವಾಳಿಗರಿಗೆ ಸಿಗುವಂತಿದ್ದ ಅಲ್ಪಸ್ವಲ್ಪ ರಕ್ಷಣೆಯೂ ಸಿಗದಂತಾಗಿದೆ.

ಇಂತಹ ಬದಲಾವಣೆ ಮಾಡುವುದಕ್ಕೆ ಹಲವು ಕಾರಣಗಳನ್ನು ಕೊಡಲಾಗುತ್ತಿದೆ. ವಿದೇಶಿ ಹೂಡಿಕೆದಾರು ಈ ಬಗ್ಗೆ ದೂರಿರುವುದು ಮೊದಲ ಕಾರಣ. ವಿದೇಶಿ ಹೂಡಿಕೆಗಾರ 'ಭಾರತೀಯ ಬಂಡವಾಳಿಗನ ಮರ್ಜಿ ಕಾಯಬೇಕಾಗುತ್ತದೆ. ಹೀಗಾದರೆ ದೇಶೀ ಬಂಡವಾಳಿಗ ವಿದೇಶಿ ಹೂಡಿಕೆದಾರನನ್ನು ಆಟ ಆಡಿಸಬಹುದು. ಅಥವಾ ಆಡಿಸುತ್ತಿದ್ದಾರೆ ಎಂಬುದು ಮುಖ್ಯಕಾರಣ. ಇಲ್ಲಿ ವಿದೇಶಿ ಹೂಡಿಕೆದಾರ ದೇಶೀಬಂಡವಾಳಿಗರಿಗೆ ಇನ್ನಿಲ್ಲದ್ದು ಅನಾನುಕೂಲ ಮಾಡಿ ದಿನಕ್ಕೊಬ್ಬ ಸಂಗಾತಿಯನ್ನು ಬದಲಾಯಿಸುತ್ತ ಹೋಗಬಹುದಲ್ಲವೇ? ಆತ ಹಾಗೆ ಮಾಡಿದರೆ ಪರವಾಗಿಲ್ಲ. ಆದರೆ ನಮ್ಮ ಬಂಡವಾಳಿಗರು ವಿದೇಶಿ ಹೂಡಿಕೆದಾರನಿಗೆ ಯಾವುದೇ ತೊಂದರೆ ಮಾಡುವಂತಿಲ್ಲ. ದೇಶೀ ಬಂಡವಾಳಿಗ ಯಾವತ್ತೂ ಪ್ರಬಲನಾಗೇ ಇರುವ ಸಾಧ್ಯತೆ ಅತ್ಯಂತ ಕಡಿಮೆ.

ವಿದೇಶಿ ಹೂಡಿಕೆದಾರರಿಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಯಾವ ರೀತಿ ಮಣೆ ಹಾಕುತ್ತಿದೆ ಎಂಬುದಕ್ಕೆ ಇದಕ್ಕಿಂತ ಒಳ್ಳೆಯಉದಾಹರಣೆ ಬೇಕೆ?

ಜನ ಎಚ್ಚೆತ್ತು ಒಗ್ಗಟ್ಟಿನಿಂದ ಪ್ರತಿಭಟಿಸಿದರೆ ಮಾತ್ರ ಈ ಸರ್ಕಾರ ನಮ್ಮ ಜನತೆಯ ಹಿತಾಸಕ್ತಿಗಳತ್ತ ದೃಷ್ಟಿ ಹರಿಸಬಹುದು ಅಲ್ಲವೇ?

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಔಷಧಿ ಬೆಲೆಗಳು ದುಬಾರಿ

ಔಷಧಿ ಕಂಪನಿಗಳ ಕಸರತ್ತು

ಔಷಧಿ ಕಂಪನಿಗಳು ಅಪಾರ ಲಾಭದೊಂದಿಗೆ ಔಷಧಿಗಳನ್ನು ಮಾರುವುದಲ್ಲದೇ ತಾವು ತಯಾರಿಸಿದ ಔಷಧಿಗಳನ್ನು ಬರೆದುಕೊಡಲು ವೈದ್ಯಕೀಯ ವೃತ್ತಿಯ ಮೇಲೆ ಒತ್ತಡ ತರುತ್ತದೆ. ವೈದ್ಯರಿಗೆ ಉಡುಗೊರೆ ಕೊಟ್ಟು, ಪುಸಲಾಯಿಸುತ್ತ ಔಷಧಿ ಬಗ್ಗೆ ತಪ್ಪು ವರದಿಗಳನ್ನು ತಯಾರಿಸಿ, ತಮ್ಮ ಔಷಧಿಯೇ ಶ್ರೇಷ್ಠ ಎಂದು ಸಾರುತ್ತಿವೆ. ಇದನ್ನು ವೈದ್ಯರು 'ವೈಜ್ಞಾನಿಕ ಸತ್ಯ' ಎಂದು ನಂಬುತ್ತಾರೆ! ಜಾತಿಸೂಚಕ ಔಷಧಿಗಳ ಬದಲು ಬ್ರಾಂಡ್ ಔಷಧಿಗಳನ್ನೇ ಬರೆಯಲು ಮುಂದಾಗುತ್ತಾರೆ.

ಔಷಧಿ ಬೆಲೆಗಳು ಹೆಚ್ಚಾಗಿವೆಯೆಂದು ಹೇಳಲು ತಪ್ಪು ಲೆಕ್ಕ ತೋರಿಸುತ್ತವೆ. ಔಷಧಿ ಬೆಲೆಗಳು ಹೆಚ್ಚಾಗಿರಲು, ಸಂಶೋಧನೆಗೆ ಹೆಚ್ಚು ಖರ್ಚಾಗುತ್ತದೆ ಎಂಬ ಮಾತು ಎಲ್ಲರನ್ನೂ ಮಂಕುಗೊಳಿಸುವ ಮಾತು. ಔಷಧಿ ಕಂಪನಿಗಳ ಸಂಶೋಧನೆಯೆಂದರೆ ಕೇವಲ "ಮಾರುಕಟ್ಟೆಯಲ್ಲಿ ಹೇಗೆ ಔಷಧಿಯನ್ನು ಮಾರಬಹುದಾಗಿದೆ" ಎಂಬುದರ ಬಗ್ಗೆ ನಡೆಸಿದ ಅಧ್ಯಯನ ಔಷಧಿ ಸಂಶೋಧನೆಗೆ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಒಂದು ಪೈಸೆಯಷ್ಟನ್ನು ಖರ್ಚು ಮಾಡಿಲ್ಲ. ಭಾರತದಲ್ಲಿ ಬಹುರಾಷ್ಟ್ರೀಯ ಕಂಪನಿಯ ಸಂಶೋಧನೆಯಿಂದ ಹೊರಬಂದ ಔಷಧಿ ಒಂದೂ ಇಲ್ಲ. ಸಂಶೋಧನೆ ತಮ್ಮ ಕಂಪನಿಯೇ ಮಾಡುತ್ತಿದೆ. ಅದಕ್ಕೆ ತಮಗೆ ವಸ್ತುಸ್ವಾಮ್ಯ ಬೇಕೆಂಬ ಹೊಸ ಬೇಡಿಕೆಯನ್ನು ಇತ್ತೀಡೆಗೆ ಜಗತ್ತಿನ ಎಲ್ಲ ದೇಶಗಳ ಮುಂದೆ ಇಟ್ಟಿವೆ. ಇದೇ ಪೇಟೆಂಟ್ ವ್ಯವಸ್ಥೆಯನ್ನು ಬದಲಿಸಬೇಕೆಂಬ ಒತ್ತಾಯ ಯಾವುದೇ ಸಂಶೋಧನೆ ಕೇವಲ ಒಂದು ಕಂಪನಿಯ ಜ್ಞಾನದಿಂದ ಪ್ರಯತ್ನದಿಂದ, ಸಂಶೋಧನಯಿಂದ ಆಗಲು ಸಾಧ್ಯವಿಲ್ಲ. ಒಂದು ಕಂಪನಿ ಹಲವಾರು ಸಂಶೋಧನೆಗಳ ಜ್ಞಾನವನ್ನು ಬಳಸಿ ಒಂದು ಹೊಸ ಸಂಶೋಧನೆಯನ್ನು ಮಾಡಬಹುದಾಗಿದೆ. ಅದ್ದರಿಂದ ಈ ಸಂಶೋಧನೆಗೆ ವಸ್ತುಸ್ವಾಮ್ಯ ಕೇಳುವಂತಿಲ್ಲ. ಆದರೆ ವಸ್ತುಸ್ವಾಮ್ಯ ಪಡೆಯಲು ಅನೇಕ ಬಹುರಾಷ್ಟ್ರೀಯ ಕಂಪನಿಗಳು ಸಜ್ಜಾಗಿ ನಿಂತಿವೆ. ಇದು ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ಔಷಧಿಗಳನ್ನು ಮಾರಿ ಲಾಭ ಗಳಿಸುವ ಹುನ್ನಾರವಷ್ಟೆ.

ಅದೂ ಅಲ್ಲದೆ ಬಹುರಾಷ್ಟ್ರೀಯ ಕಂಪನಿಗಳ ಔಷಧಿ ಸಂಶೋಧನೆಗಳು ಔಷಧಿ ಕಂಪನಿಗಳಲ್ಲಾಗದೆ, ಸಾರ್ವಜನಿಕ ಕ್ಷೇತ್ರದ ಆಸ್ಪತ್ರೆಗಳಲ್ಲಿ ಮಾಡಲಾಗಿರುತ್ತದೆ ಹಾಗೂ ಆ ವರದಿಗಳನ್ನು ಔಷಧಿ ಕಂಪನಿಗಳು ಕೊಂಡುಕೊಂಡು ತಮ್ಮದಾಗಿಸಿಕೊಳ್ಳುತ್ತವೆ.

ಔಷಧಿ ಕಂಪನಿಗಳು ತಮಗೆ ಲಾಭತರದ ಔಷಧಿಗಳನ್ನು ತಯಾರಿಸುವುದನ್ನೇ ನಿಲ್ಲಿಸಿ ಬಿಡುತ್ತವೆ. ಆ ಔಷಧಿ ಎಷ್ಟೇ ಉಪಯುಕ್ತವಾಗಿದ್ದರೂ, ಅದರ ತಯಾರಿಕೆಯನ್ನು ನಿಲ್ಲಿಸಿ ಬಿಡುತ್ತವೆ. ಇತ್ತೀಚೆಗೆ ಇಂಗ್ಲಂಡ್‌ನಲ್ಲಿ ನಾರ್ ಅಡ್ರಿನಲಿನ್, ಐಸೋಪ್ರೆನಲಿನ್, ಕ್ಲೋರಾಂಫೆನಿಕಾಲ್ ಎಂಬ ಔಷಧಿಗಳನ್ನು ತಯಾರಿಸುವುದನ್ನು ಔಷಧಿ ಕಂಪನಿಗಳು ಹಠಾತ್ತಾಗಿ ನಿಲ್ಲಿಸಿವೆ. ಇದರಿಂದ ಚಿಕಿತ್ಸೆಗೆ ಎಷ್ಟು ಅಪಾಯ ಎಂದು ಅವು ಯೋಚಿಸುವುದೇ ಇಲ್ಲ. ಕೆಲವೇ ವರ್ಷಗಳ ಹಿಂದೆ ಭಾರತದಲ್ಲಿಯೂ ಇಂತಹ ಪರಿಸ್ಥಿತಿ ಉಂಟಾಗಿತ್ತು. ಸರಕಾರ ಅಗತ್ಯ ಔಷಧಿಗಳ ಮೇಲೆ ನಿಗದಿತ ಲಾಭಕ್ಕೆ ಅವಕಾಶ ಮಾಡಿಕೊಟ್ಟು ಅನಗತ್ಯ ಔಷಧಿಗಳ ಮೇಲೆ ಲಾಭದ ಮಿತಿಯನ್ನು ತೆಗೆದುಹಾಕಿದ ಸನ್ನಿವೇಶವನ್ನು ಔಷಧಿ ಕಂಪನಿಗಳು ಬಳಸಿಕೊಂಡು, ಕೇವಲ ಅನಗತ್ಯ ಔಷಧಿಗಳನ್ನು ತಯಾರಿಸಲು ಮುಂದಾದ ಸಂಗತಿ 80 ರ ದಶಕದಲ್ಲಿ ಕಂಡುಬಂದಿತ್ತು. ಸರಕಾರ ಯಾವುದೇ ಕಂಪನಿಗಳ ಮೇಲೆ ಅಗತ್ಯ ಔಷಧಿಗಳನ್ನು ತಯಾರಿಸಲು ಒತ್ತಡ ಹೇರುತ್ತಿಲ್ಲ. ಸ್ಥಳೀಯ ರೋಗಗಳಿಗೆ ಬೇಕಾದ ಔಷಧಿಗಳನ್ನು ತಯಾರಿಸಲು ಔಷಧಿ ಕಂಪನಿಗಳು ಮುಂದೆ ಬರುತ್ತಿಲ್ಲ. ಆದ್ದರಿಂದಲೇ ಇಂದು ರಕ್ತದ ಏರೊತ್ತಡ, ಸಕ್ಕರೆ ಕಾಯಿಲೆ, ಹೃದಯ ರೋಗಗಳಿಗೆ ಅಪಾರ ಸಂಖ್ಯೆಯಲ್ಲಿ ಬೇರೆ ಬೇರೆ ಔಷಧಿಗಳು ದೊರಕುತ್ತಿದ್ದು ಮಲೇರಿಯಾ, ಕಾಲಾ ಆಝಾರ್, (ಭಾರತದ ಆರೋಗ್ಯ ಸಮಸ್ಯೆಗಳ) ರೋಗಗಳಿಗೆ ಹೊಸ ಔಷಧಿಗಳಿಲ್ಲ. ಇಂತಹ ಸಂಸ್ಕೃತಿಯಿಂದಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚು ಮಾರಾಟವಾಗುವ ಔಷಧಿಗಳಲ್ಲಿ 4 ಔಷಧಿಗಳು ಖಿನ್ನತೆಗೆ, 2 ಅಧಿಕ ಕೊಬ್ಬು ಕಡಿಮೆ ಮಾಡುವ, 2 ರಕ್ತದ ಒತ್ತಡಕ್ಕೆ ಉಪಯೋಗಿಸುವ, ಅತಿ ಆಮ್ಲತೆಗೆ (hyperacidity) ಹಾಗೂ ಒಂದು ಔಷಧಿ ಅಲರ್ಜಿಗೆ ಉಪಯೋಗಿಸುವ ಔಷಧಿಯಾಗಿದೆ.

ಬಹುರಾಷ್ಟ್ರೀಯ ಕಂಪನಿಗಳ ಔಷಧಿ ದುಬಾರಿ. ಆದರೆ ಭಾರತೀಯ ಕಂಪನಿಗಳು ಔಷಧಿಗಳನ್ನು ಕಡಿಮೆ ಬೆಲೆಯಲ್ಲಿ ತಯಾರಿಸಿ ಜನರ ಅಗತ್ಯತೆಗಳನ್ನು ಪೂರೈಸಲು ಸಾಧ್ಯ. ಇತ್ತೀಚೆಗೆ ಹೆಚ್.ಐ.ವಿ ಸೋಂಕುರೋಗಕ್ಕೆ ಭಾರತ ಕೇವಲ 140 ಅಮೇರಿಕಾ ಡಾಲರ್‌ಗೆ ಒಂದು ವರ್ಷದ ಔಷಧಿಯನ್ನು ಒದಗಿಸುತ್ತಿದೆ. ಆದರೆ ಅದೇ ಔಷಧಿಯನ್ನು ಬಹುರಾಷ್ಟ್ರೀಯ ಕಂಪನಿಯು 10,000 ಅಮೇರಿಕದ ಡಾಲರ್‌ಗೆ ಮಾರುತ್ತಿದೆ. ಭಾರತ ತನ್ನ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಔಷಧಿ ತಯಾರಿಸುವುದು ತಪ್ಪೆ, ಅಥವಾ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚು ಬೆಲೆಗೆ ಔಷಧಿಗಳನ್ನು ಮಾರಿ ಅಪಾರ ಲಾಭಗೊಳಿಸುವುದು ತಪ್ಪೆ. ಭಾರತ ಪೇಟೆಂಟ್ ಕಾಯಿದೆಗೆ ಸಹಿಹಾಕಿ ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರೋತ್ಸಾಹ ಕೊಡುವ ಹಂತಕ್ಕೆ ತಲುಪಿದೆ. ಔಷಧಿ ಬೆಲೆಗಳು, ಗುಣಮಟ್ಟ, ಅದರ ಔಷಧಿ ಮಾಹಿತಿ ಮುಂತಾದ ಕನಿಷ್ಟ ವಿಷಯಗಳ ಬಗ್ಗೆ ಔಷಧಿ ನಿಯಂತ್ರಣವೇಕೆ ಗಮನಹರಿಸಬಾರದು. ಏಕೆಂದರೆ ಔಷಧಿ ಹಾಗೂ ಸೌಂದರ್ಯವರ್ಧಕ ವಸ್ತುಗಳ ಕಾನೂನು ಪ್ರಕಾರ ಔಷಧಿ ನಿಯಂತ್ರಣವೇ ಆ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ವಾಸ್ತವತೆಯನ್ನು ಅಪೇಕ್ಷಿಸುವುದು 'ಭ್ರಮೆ ಎನಿಸುವುದಲ್ಲವೆ.

ಜಾಗತೀಕರಣದ ವೈಫಲ್ಯ

ಲ್ಯಾಟಿನ್ ಅಮೇರಿಕಾದಲ್ಲಿ ಎಡಪಂಥೀಯ ಅಲೆ

ಇಲ್ಲಿ ಬೀಸುತ್ತಿರುವ ಹೊಸ ಗಾಳಿ - ಅಲೆ ಏನನ್ನು ಹೇಳುತ್ತಿವೆ?

ಪ್ರಪಂಚದ ಬಡರಾಷ್ಟ್ರಗಳ ಶೋಷಣೆಯ ...ಪಾಯದ ಮೇಲೆ ನಿರ್ಮಿತವಾಗಿರುವ ...ಮೇರಿಕಾ ಮತ್ತು ಯುರೋಪ್ ರಾಷ್ಟ್ರಗಳ ...ಡವಾಳಶಾಹಿಗೆ ತನ್ನ ಮಗ್ಗುಲಲ್ಲೇ ಇರುವ ...ದಾದ ಆದರೆ ಕೆಚ್ಚೆದೆಯ ರಾಷ್ಟ್ರ ...ಬಾದಿಂದ ಮಾತ್ರವಷ್ಟೇ ಇರುಸು ...ರುಸಾಗಿಲ್ಲ. ದಕ್ಷಿಣ ಅಮೇರಿಕಾದ ಲ್ಯಾಟಿನ್ ...ಮೇರಿಕಾದ ಬಹುತೇಕ ರಾಷ್ಟ್ರಗಳು ...ಡವಾಳಶಾಹಿ-ಪ್ರೇರಿತ ಆರ್ಥಿಕ ನೀತಿಗಳ ...ಸರಣೆಯಿಂದ ಇನ್ನಿಲ್ಲದಂಥಹ ...ಯುಂಡು ಪಾಠ ಕಲಿತು ಸಮಾಜವಾದವೇ ...ಸ್ತುತ ಪರ್ಯಾಯ ಎಂದು ...ಚಿತಪಡಿಸಿಕೊಂಡಿವೆ.

ವೆನಿಜುವೆಲ್ಲಾದಲ್ಲಿ 1999 ರಲ್ಲಿ ಅಧಿಕಾರಕ್ಕೆ ...ದಿದ್ದ ಎಡಪಂಥೀಯ ನಿಲುವಿನ ಹ್ಯೂಗೋ ...ವೆಜ್‌ರವರು ಅಕ್ಟೋಬರ್ 2004 ರಲ್ಲಿ ...ಧಿಕ ಮತಗಳಿಗಸಿ ಕಳೆದ 50 ವರ್ಷಗಳಿಂದ ...ವಷ್ಟೇ ಅಧಿಕಾರ ಹಂಚಿಕೊಳ್ಳುತ್ತಿದ್ದ ಎರಡು ...ಗಳನ್ನು ಮೂಲೆಗೆ ತಳ್ಳಿ ಮಣ್ಣು ...ಕ್ಕಿಸಿದ್ದಾರೆ. ನವೆಂಬರ್ 2002 ರಲ್ಲಿ ...ಕ್ವೆಡಾರ್ ದೇಶದ ಚುನಾವಣೆಯಲ್ಲಿ ...ಡಪಂಥೀಯ ನಿಲುವಿನ ಮಿಲಿಟರಿ ಮನುಷ್ಯ ...ಸಿಯೋ ಗುಟಿಯರೆಜ್‌ರವರು ತನ್ನ




ಉರುಗ್ವೆಯ ಪ್ರಥಮ ಎಡಪಂಥೀಯ ಅಧ್ಯಕ್ಷ ತಬಾರೆ ...

...ರೋಧಿಯಾದ, ಆ ದೇಶದ ಅತಿ ...ಮಂತನಾದ, ಅಲವರೊ ...ಬಾವೊರವರನ್ನು ಸೋಲಿಸಿದ್ದಾರೆ. ...ವೆಲ್ಲದಕ್ಕಿಂತ ಹೆಚ್ಚಾಗಿ ಅಕ್ಟೋಬರ್ 2002 ...ಲ್ಲಿ ಬ್ರೆಜಿಲ್‌ನಲ್ಲಿ ಕಾರ್ಮಿಕ ಪಕ್ಷದ ಲೂಲಾದ ...ಲ್ವಾರವರ ವಿಜಯವು ಲ್ಯಾಟಿನ್ ...ಮೇರಿಕಾದ ಎಡಪಂಥೀಯರಿಗೆ ...ರುತರವಾದ ಘಳಿಗೆಯಾಗಿದೆ. ...ಲೂಲಾರವರನ್ನು ಅವರೊಂದು ಮುಗಿದ ...ಧ್ಯಾಯವೆಂದು ಎಲ್ಲರೂ ...ರಿಗಣಿಸಿರುವಾಗಲೇ, ಅವರು ಮುಂಚಿನ ...ಮೂರು ಚುನಾವಣೆಗಳಲ್ಲಿ ಸೋತು ಬಸವಳಿದ ...ದುರೆಯೆಂದು ಅಂತರಿಕ್ಷ ಹಾಗೂ ಬಾಹ್ಯ ...ಂಡವಾಳ ಶಾಹಿಗಳು ...ಂಗಿಯೂದುತ್ತಿರುವಾಗಲೇ ಬ್ರೆಜಿಲ್‌ನ ...ುಡಿಯುವ ಜನ ಅವರನ್ನು ಮತ್ತೆ ...ನಿಕ್ಸ್‌ನಂತೆ ಮೇಲೇರಿಸಿ, ತಮ್ಮ ವಿರೋಧಿಗಳ ...ಪಾಳಮೋಕ್ಷ ಮಾಡಿದ್ದಾರೆ. ಬ್ರೆಜಿಲ್ ರಾಷ್ಟ್ರವು ...ತರೆ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳ ...ಶ್ವಾಸವನ್ನು ಹೆಚ್ಚಿಸಿದ್ದು, ಲ್ಯಾಟಿನ್ ...ಅಮೇರಿಕಾದ ರಾಜಕೀಯ ದಿಕ್ಸೂಚಿ ಹಲವು ...ತಿಮಿತಿಗಳ ನಡುವೆಯೂ ಎಡಪಂಥದೆಡೆ

ವಾಲುವಂತೆ ಮಾಡಿದೆ. ಸದ್ಯಕ್ಕೆ ಲೂಲಾರವರು ಬ್ರೆಜಿಲ್‌ನ ಬೀದಿ ಬದಿಯ ಕಡುಬಡವರೂ ಸೇರಿದಂತೆ ದುಡಿಯುವ ಜನತೆಯ ಜೀವನಾಭಿವೃದ್ಧಿ ಕಾರ್ಯಕ್ರಮದ ಜೊತೆಗೆ ವಾಲ್‌ಸ್ಟ್ರೀಟ್ ವಿಧಿಸಿರುವ ಬಿತ್ತಿಯ ಹಾಗೂ ಹಣಕಾಸು ಶಿಸ್ತುಬದ್ಧತೆಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಶ್ರಮಿಸುತ್ತಿದ್ದಾರೆ. ಉರುಗ್ವೇಯ ಆರ್ಥಿಕ ಮಂತ್ರಿಗಳು ತಾವೂ ಸಹ ಲೂಲಾ ಉದಾಹರಣೆಯನ್ನು ಅನುಸರಿಸುವುದಾಗಿ ಘೋಷಿಸಿದ್ದಾರೆ. ಈ ದೇಶಗಳಿಗೆ ಸಾಟಿಯಾಗುವಂತೆಯೇ, ಚಿಲಿ ಮತ್ತು ಅರ್ಜೆಂಟೈನಾ ದೇಶಗಳಲ್ಲೂ ಸಹ ಕೇಂದ್ರದಲ್ಲಿ ಎಡ-ನಿಲುಮೆಯ ಸರ್ಕಾರಗಳಿವೆ.

1980 ರ ಮತ್ತು 1990 ರ ದಶಕಗಳಲ್ಲಿ ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳು ವಿಶ್ವವ್ಯಾಪಾರ ಸಂಸ್ಥೆಯ (ಡಬ್ಲ್ಯುಟಿಒ) ಹೆಸರಿನಲ್ಲಿ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಿದವು. ಈ ಎಲ್ಲ ದೇಶಗಳ ಮುಂಚೂಣಿಯಾಗಿ ಅರ್ಜೆಂಟೈನಾ ರಾಷ್ಟ್ರವು ತನ್ನ ಪೆಟ್ರೋಲಿಯಂ ಕಂಪನಿಗಳನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸುವ ಮಟ್ಟಕ್ಕೆ ಹೋಯಿತು. ಡಬ್ಲ್ಯುಟಿಒ ಮತ್ತು ವಿಶ್ವಬ್ಯಾಂಕ್‌ಗಳು ಯಾವುದೇ ರಾಷ್ಟ್ರದ ಅಭಿವೃದ್ಧಿಗೆ 'ಅರ್ಜೆಂಟೈನಾ ಮಾದರಿಯ' ಆರ್ಥಿಕ ಸುಧಾರಣೆಗಳು ಬಹುಮುಖ್ಯವೆಂದು ಹಸಿ ಹಸಿ ಸುಳ್ಳನ್ನೇ ಬಿತ್ತರಿಸಲಾರಂಭಿಸಿದವು. ಆದರೆ ವಿಶ್ವವ್ಯಾಪಾರ ಸಂಸ್ಥೆ ಮತ್ತು ವಿಶ್ವಬ್ಯಾಂಕ್-ಪ್ರೇರಿತ ಜನವಿರೋಧಿ ನೀತಿಗಳಾದ ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣಗಳು ಲ್ಯಾಟಿನ್ ಅಮೇರಿಕ ದೇಶಗಳು ಅದರಲ್ಲೂ ಮುಖ್ಯವಾಗಿ ಅರ್ಜೆಂಟೈನಾ ದಿವಾಳಿಯಾಗುವಂತೆ ಮಾಡಿತು. ಇದರಿಂದ ಕೆಲಸ ಕಳೆದುಕೊಂಡರು, ಸಂಬಳವಿಲ್ಲದ ಕಾರ್ಮಿಕರು, ದಿಗಂತಕ್ಕೇರಿದ ಆಹಾರ-ಧಾನ್ಯಗಳ ಬೆಲೆ, ಕಿಮ್ಮತ್ತಿಲ್ಲದ ಅರ್ಜೆಂಟೈನಾ ನಾಣ್ಯ- ಎಲ್ಲವೂ ಬಹುಸಂಖ್ಯಾತ ಜನರು ಬೀದಿಗಿಳಿಯುವಂತೆ ಮಾಡಿ ನವ-ಉದಾರೀಕರಣ ಮತ್ತು ನವ-ವಸಾಹತುಕರಣ ವಿರುದ್ಧ ರೊಚ್ಚಿಗೆಬ್ಬಿಸಿ, ಎಡ-ನಿಲುಮೆಯ ನಾಯಕರಿಗೊಂದು ಅವಕಾಶ ನಿರ್ಮಾಣವಾಯಿತು.

ನೈಸರ್ಗಿಕವಾಗಿ ಸಂಪದ್ಭರಿತ ವಾಗಿದ್ದರೂ ಬಂಡವಾಳಶಾಹಿಯ ಹಿಡಿತಕ್ಕೆ ಸಿಲುಕುವ ರಾಷ್ಟ್ರಗಳ ಶೋಷಿತರ ಕಥೆಗೆ ವೆನಿಜುವೆಲ್ಲಾ ಒಂದು ಒಳ್ಳೆಯ ಉದಾಹರಣೆಯಾಗಿದೆ. ಲ್ಯಾಟಿನ್ ಅಮೇರಿಕಾದಲ್ಲೇ ಶ್ರೀಮಂತವೆನಿಸಬಹುದಾದ ಸಂಪತ್ತನ್ನು ಹೊಂದಿರುವ ವೆನಿಜುವೆಲ್ಲಾ ಪೆಟ್ರೋಲಿಯಂ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ 3ನೇ ಸ್ಥಾನದಲ್ಲಿದೆ. ದಿನವೊಂದಕ್ಕೆ 3 ಮಿಲಿಯನ್ ಬ್ಯಾರೆಲ್ ಪೆಟ್ರೋಲ್ ರಫ್ತು ಮಾಡುವ ಆದಾಯವನ್ನು ತನ್ನ 2.4 ಕೋಟಿ ಜನರಿಗೆ ಹಂಚಿದರೆ ಪ್ರತಿಯೊಬ್ಬರಿಗೂ ವರ್ಷಕ್ಕೆ 10,000 ಡಾಲರ್ ಹಣ ಸಿಗುತ್ತದೆ. ಪೆಟ್ರೋಲಿಯಮ್ ಅಲ್ಲದೇ ಯಥೇಚ್ಛ ಖನಿಜ ಸಂಪನ್ಮೂಲ ಮತ್ತು ಅತ್ಯಧಿಕವಾಗಿ ಜಲವಿದ್ಯುತ್ ಉತ್ಪಾದಿಸುವ ಸಾಮರ್ಥ್ಯವೊಂದಿದೆ. ಇಷ್ಟೆಲ್ಲ ಶ್ರೀಮಂತಿಕೆಯ ನಡುವೆ ಆ ದೇಶದ ಶೇ.50 ಕ್ಕೂ ಹೆಚ್ಚು ಜನ ಬಡತನ ರೇಖೆಯ ಕೆಳಗೆ ವಾಸಿಸುತ್ತಿರುವುದು ನಿಜಕ್ಕೂ ವಿಪರ್ಯಾಸವೇ ಸರಿ. ಹ್ಯೂಗೋ ಚಾವೆಜ್‌ರವರು ಈ ಅಸಂಬಂದ್ಧ ಪರಿಸ್ಥಿತಿಯ



ಚಾವೇಝ್

ಉತ್ಪನ್ನವಾಗಿದ್ದಾರೆ.

ಲ್ಯಾಟಿನ್ ಅಮೇರಿಕಾ ದೇಶಗಳ ಎಡಪಂಥೀಯ ಶಕ್ತಿಗಳ ಬೆಳವಣಿಗೆ, ನಾಯಕರ ಏಳಿಗೆಯು ಆ ಭಾಗದ ರಾಜಕೀಯ ಶಕ್ತಿಯನ್ನು ಬದಲಾಯಿಸಿದೆ. ಈ ರಾಷ್ಟ್ರಗಳು ಅಮೇರಿಕಾದ ದೊಡ್ಡಣ್ಣನ ನೀತಿಯಿಂದ ಮತ್ತು ಏಕಾಧಿಪತ್ಯ ಸಾಧಿಸುವ ನೀತಿಯಿಂದ ರೋಸಿಹೋಗಿದ್ದು, ಅಮೇರಿಕಾದ ಮೇಲೆ ಅವಂಲಂಬಿತವಾಗುವುದನ್ನು ಕಡಿಮೆಗೊಳಿಸುತ್ತಿವೆ. ಅಕ್ಟೋಬರ್ 2004 ರಲ್ಲಿ 'ಉಚಿತ ವ್ಯಾಪಾರ ಒಪ್ಪಂದ' ವೊಂದಕ್ಕೆ ಈ ರಾಷ್ಟ್ರಗಳೆಲ್ಲ ಸಹಿ ಹಾಕಿದ್ದು ಸಾಮೂಹಿಕವಾಗಿ ಬಲಗೊಳ್ಳುತ್ತಿದ್ದು ಪ್ರಾದೇಶಿಕ ಶಕ್ತಿಯಾಗಿ ಹೊರಹೊಮ್ಮುತ್ತಿವೆ. ಅಮೇರಿಕನ್ ಮಾರುಕಟ್ಟೆಯನ್ನು ತಿರಸ್ಕರಿಸಿ ಏಷ್ಯಾ ರಾಷ್ಟ್ರಗಳ ಮುಖ್ಯವಾಗಿ ಭಾರತ ಮತ್ತು ಚೀನಾಗಳೊಡನೆ ಮಾರುಕಟ್ಟೆ ಬಾಂಧವ್ಯಗಳನ್ನು ವಿಸ್ತರಿಸಿಕೊಳ್ಳುತ್ತಿವೆ. ಚೀನಾ ದೇಶ ಈ ಅವಕಾಶವನ್ನುಪಯೋಗಿಸಿಕೊಳ್ಳುವತ್ತ



ಬ್ರೆಜಿಲ್‌ನ ಲೂಲಾ ಡಿಸಿಲ್ವ ಚೀನಾದ ಅಧ್ಯಕ್ಷರೊಂದಿಗೆ

ಮುಂಚೂಣಿಯಲ್ಲಿದ್ದು ಆ ರಾಷ್ಟ್ರಗಳ ಉತ್ಪನ್ನಗಳನ್ನು ಕೊಳ್ಳುವುದರಲ್ಲಿ ಮತ್ತು ತನ್ನ ಉತ್ಪನ್ನಗಳನ್ನು ರಫ್ತು ಮಾಡುವಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. 2003 ರಲ್ಲಿ ಚೀನಾದ ರಫ್ತು ಲ್ಯಾಟಿನ್ ಅಮೇರಿಕಾಗೆ 17 ಬಿಲಿಯನ್ ಡಾಲರ್‌ಗಳಿಷ್ಟಿದ್ದು, ಇದು ಭಾರತದ ರಫ್ತಿಗಿಂತ 10 ಪಟ್ಟು ಹೆಚ್ಚಾಗಿದೆ.

ಅರ್ಜೆಂಟೈನಾ ಚೇತರಿಕೆ:

10,000 ಕೋಟಿ ಡಾಲರ್‌ನಷ್ಟು ವಿದೇಶಿ ಸಾಲ ತೀರಿಸಲಾಗದೆ ದಿವಾಳಿಯೆದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ 'ಆರ್ಥಿಕ ಸುಧಾರಣೆಯ ಮಾದರಿ ದೇಶ" ಅರ್ಜೆಂಟೈನಾ ಆರ್ಥಿಕ ಸುಧಾರಣಾ ನೀತಿಯ ಪ್ರತಿಫಲನದಂತಿತ್ತು. ಇತ್ತೀಚಿನ ವರ್ಷಗಳಲ್ಲಿ ಅರ್ಜೆಂಟೈನಾದ ಆರ್ಥಿಕ ಪರಿಸ್ಥಿತಿಯು ಚೇತರಿಸುತ್ತಿದ್ದು ಇದಕ್ಕೆ ಬಹುಮುಖ್ಯ ಕಾರಣವೆಂದರೆ ಅದು ಅನುಸರಿಸುತ್ತಿದ್ದ ಐಎಂಎಫ್ ಪ್ರೇರಿತ ಸಂಪ್ರದಾಯಕರಣ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಸಂಪೂರ್ಣವಾಗಿ ತಿಪ್ಪೆಗೆಸೆದಿರುವುದೇ ಆಗಿದೆ. ಖಾಸಗಿ ಬ್ಯಾಂಕ್‌ಗಳ ಮತ್ತು ವಿಶ್ವಬ್ಯಾಂಕ್ ಹಿತವಚನಗಳನ್ನು ಗಾಳಿಗೆ ತೂರಿ ಆಂತರಿಕ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿರುವುದು ಆ ದೇಶದ ಚೇತರಿಕೆಗೆ ಕಾರಣವಾಗಿದ್ದು ಜಾಗತೀಕರಣದ ವೈಫಲ್ಯ ಕಣ್ಣಿಗೆ ರಾಚುವಂತಾಗಿದೆ. ಬ್ರೆಜಿಲ್ ದೇಶದ ಪೆಟ್ರೋಲಿಯಂ ಕಂಪನಿಗಳು ಅರ್ಜೆಂಟೈನಾ ದೇಶದ ಸಾರ್ವಜನಿಕ ಕಂಪನಿಗಳೊಂದಿಗೆ ಸಹಭಾಗಿತ್ವದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿವೆ. ಇತ್ತೀಚೆಗೆ ಭೇಟಿ ನೀಡಿದ್ದ ಚೀನಾದ ಪ್ರಧಾನಿ ಹ್ಯೂ ಜಿಂಟಾವೊರವರು ತನ್ನ ದೇಶವು ಮುಂದಿನ ದಶಕದೊಳಗೆ 2,000 ಕೋಟಿ ಡಾಲರ್ ಬಂಡವಾಳ ಹೂಡುವುದಾಗಿ ಘೋಷಿಸಿದ್ದಾರೆ.


ಪ್ರಸಕ್ತ ಜಾಗತೀಕರಣ ನೀತಿಯು ಬಂಡವಾಳಶಾಹಿ ಪ್ರೇರಿತವಾಗಿದ್ದು ಪಕ್ಷಪಾತದಿಂದ ಕೂಡಿದೆಯಲ್ಲದೆ ತೃತೀಯ ರಾಷ್ಟ್ರಗಳ ಬಹುಸಂಖ್ಯಾತ ಜನರನ್ನು ತನ್ನ ಲಾಭದಾಸೆಗಾಗಿ ಮತ್ತಷ್ಟು ಶೋಷಿಸಿ ತನ್ನ ಹೊಟ್ಟೆ ತುಂಬಿಸಿಕೊಳ್ಳುತ್ತಿರುವುದು ಎಲ್ಲೆಡೆ ಸಾಬೀತಾಗಿದೆ. ಜಾಗತೀಕರಣಕ್ಕೆ ಪರ್ಯಾಯವಿಲ್ಲವೆಂದು ಪ್ರಚಾರ ಮಾಡುತ್ತಿರುವ ಬಂಡವಾಳಶಾಹಿ-ಪರ ನಾಯಕರಿಗೆ ಉತ್ತರವೆಂಬಂತೆ ಬಂಡವಾಳಶಾಹಿ- ಪ್ರೇರಿತ ನೀತಿಯನ್ನು ಅನುಸರಿಸಿ ಪಾಠ ಕಲಿತಿರುವ ಲ್ಯಾಟಿನ್ ಅಮೇರಿಕಾದ ದೇಶಗಳಿಂದ ಕಲಿಯುವುದು ಮುಖ್ಯವಾಗಿದೆ. ಲ್ಯಾಟಿನ್ ಅಮೇರಿಕಾ ದೇಶಗಳ ಸರ್ಕಾರಗಳು ಸಮಾಜವಾದಿ ಸಿದ್ಧಾಂತದ ನೆಲೆಯ ಮೇಲೆ ಅಧಿಕಾರಕ್ಕೆ ಬಂದವಲ್ಲವಾಗಿದ್ದರೂ ಸಹ ಜಾಗತೀಕರಣ ನೀತಿಯ ವೈಫಲ್ಯ ಎಡಪಂಥೀಯ ನಾಯಕರು ಉನ್ನತ ಹುದ್ದೆಗೆ ಆರಿಸಿ ಬರಲು ಅವಕಾಶವೊದಗಿಸಿದ್ದು ಸಮಾಜವಾದವೊಂದೇ ಪ್ರಸಕ್ತ ಮಾನವ ಜನಾಂಗದ ಸಮಸ್ಯೆಗೆ ಪರಿಹಾರ ಎನ್ನುವುದನ್ನು ಮತ್ತೊಮ್ಮೆ ಎತ್ತಿ ಸಾರಿದೆ.

'ಜಯ'

ಭ್ರಷ್ಟತೆ

ಅವ ಭ್ರಷ್ಟ ಇವ ಭ್ರಷ್ಟ ಅನ್ನದಿರಿ ಮತ್ತೆ
ಆ ಅವರು ನಮ್ಮಂತೆ ಅಲ್ಲವೆ ಕತ್ತೆ
ಕತ್ತೆಗಳ ಮೇಲೆಯೇ ಅವರು ಸವಾರಿ
ಮಾಡುತ್ತ ಬಂದದ್ದು ಫಲವಿಲ್ಲ ದೂರಿ

- ವಿಡಂಬಾರಿ



ಪವಾಡ, ಅಂಧಶ್ರದ್ಧೆಗಳೆಂದರೆ ಕಿಡಿಕಾರುತ್ತಿದ್ದ ವಿಚಾರವಾದಿ ಡಾ. ಹೆಚ್.ಎನ್. ರವನ್ನೇ ನೈತಿಕ ಸಮ್ಮೇಳನಕ್ಕೆ ಸಾಯಿಬಾಬಾ ಆಹ್ವಾನಿಸಿದಾಗ... ಅವರ ಮಾತುಗಳಲ್ಲಿ ಓದಿ!

ಹೆಚ್.ಎನ್. ನೆನಪಿನ ಪುಟಗಳಿಂದ

ಸತ್ಯ ಸಾಯಿಬಾಬಾ ರವರೊಂದಿಗೆ ಭೇಟಿ

ನನಗೆ ಚಿಕ್ಕವನಾಗಿದ್ದಾಗಿನಿಂದಲೂ ಮೂಢನಂಬಿಕೆಗಳನ್ನು ವಿರೋಧಿಸುವ ಸ್ವಭಾವ. ಇದನ್ನು ಆಗಿನ ನನ್ನ ಅಧ್ಯಾಪಕರ ಪ್ರಭಾವದಿಂದ ತಿಳಿದುಕೊಂಡೆ. ವಯಸ್ಸಾದ ಹಾಗೆಲ್ಲಾ ಚಿಂತನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದೆ. ವಿಜ್ಞಾನದ ವಿದ್ಯಾರ್ಥಿ, ಅಧ್ಯಾಪಕನಾದ ಮೇಲೆ ಅಂತಹ ಮೂಢನಂಬಿಕೆಗಳನ್ನು ವೈಜ್ಞಾನಿಕ ವಿಧಾನದಿಂದ ಹೆಚ್ಚು ಸಮಂಜಸವಾಗಿ, ಅರ್ಥಪೂರ್ಣವಾಗಿ ವಿರೋಧಿಸುತ್ತಿದ್ದೆ. ಜ್ಯೋತಿಷ, ಪವಾಡಗಳು ಅವೈಜ್ಞಾನಿಕ ಎನ್ನುವುದರಲ್ಲಿ ನನಗೆ ಎಳ್ಳಷ್ಟೂ ಅನುಮಾನವಿರಲಿಲ್ಲ.

ಆಹ್ವಾನ

ನನ್ನನ್ನು 1972ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ನೇಮಿಸಿದರು. 1973ನೆಯ ಇಸವಿ ಏಪ್ರಿಲ್-ಮೇ ತಿಂಗಳಿನಲ್ಲಿ ಸತ್ಯಸಾಯಿ ಬಾಬಾರವರ ಅವಿಚ್ಛಿನ್ನ ಭಕ್ತರೂ ಆದ ಡಾ. ವಿ.ಕೆ.ಗೋಕಾಕರಿಂದ ಬೆಂಗಳೂರಿನ ಸಮೀಪದಲ್ಲಿರುವ ವೈಟ್‌ಫೀಲ್ಡ್‌ನಲ್ಲಿದ್ದ ಬಾಬಾರವರ ಆಶ್ರಮದಲ್ಲಿ ಅಖಿಲ ಭಾರತ ನೈತಿಕ ಸಮ್ಮೇಳನವನ್ನು ಉದ್ಘಾಟಿಸಬೇಕೆಂದು ನನಗೆ ಆಹ್ವಾನ ಬಂದಿತು. ಬಾಬಾರವರು ಪವಾಡಗಳನ್ನು ಮಾಡುವುದರಲ್ಲಿ ಪ್ರಸಿದ್ಧರು ಎಂದು ಎಲ್ಲರಿಗೂ ಗೊತ್ತು. ನಾನು ಅವುಗಳನ್ನು ವಿರೋಧಿಸುತ್ತಲೇ ಬಂದವನು. ಈ ಹಿನ್ನೆಲೆಯಲ್ಲಿ ಆಹ್ವಾನವನ್ನು ಒಪ್ಪಿಕೊಳ್ಳಬೇಕೆ, ಬಿಡಬೇಕೇ ಅಂತ ಒಂದೆರಡು ದಿನ ದೀರ್ಘವಾಗಿಯೇ ಯೋಚನೆ ಮಾಡಿದೆ. ಬಾಬಾರವರ ಸಮ್ಮುಖದಲ್ಲಿಯೇ ನನ್ನ ಅಭಿಪ್ರಾಯವನ್ನು ಮಂಡಿಸೋಣ ಅಂತ ಆಹ್ವಾನವನ್ನು ಒಪ್ಪಿಕೊಂಡೆ.

ಲಿಫ್‌ಸ್ಟಿಕ್ ಯಾಕೆ?

ಕಾರ್ಯಕ್ರಮ ಬೆಳಿಗ್ಗೆ ಇತ್ತು. ಅಶ್ರಮಕ್ಕೆ ಹೋದೆವು. ನನ್ನ ಮೂರು ಸ್ನೇಹಿತರು ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ನೇರವಾಗಿ ಹೋದರು. ಅಲ್ಲಿ ಡಾ. ಭಗವಂತಂ, ಡಾ. ಗೋಕಾಕ್, ಗುರುದತ್ ಮುಂತಾದ ಬಾಬಾರವರ ಶಿಷ್ಯೋತ್ತಮರೆಲ್ಲಾ ಕುಳಿತಿದ್ದರು. ನಾನೂ ಹೋಗಿ ಕುಳಿತುಕೊಂಡೆ. ನಾಲ್ಕೈದು ನಿಮಿಷಗಳಾದ ಮೇಲೆ ಬಾಬಾರವರು ಬಂದರು. ನಾನೂ ಕೈ ಜೋಡಿಸಿ ನಮಸ್ಕಾರ ಮಾಡಿದೆ. ಗೋಕಾಕರು ಅವರ ಎರಡು ಕಾಲನ್ನು ಬಿಗಿಯಾಗಿ ಹಿಡಿದುಕೊಂಡರು. ಬಾಬಾರವರಿಗೆ ಆ ಬಂಧನದಿಂದ ಬಿಡಿಸಿಕೊಳ್ಳಲು ಕಷ್ಟವೇ ಆಯಿತು. ಅಲ್ಲಿಯವರೆಗೆ ಬಾಬಾರವರನ್ನು ನಾನು ನೋಡಿಯೇ ಇರಲಿಲ್ಲ. ಆ ಪ್ರಥಮ ನೋಟದಿಂದ ನನಗೆ ತೀವ್ರ ನಿರಾಶೆಯಾಯಿತು, ಸ್ವಲ್ಪ ಜಿಗುಪ್ಸೆಯೂ ಬಂದಿತು. ಮುಖಕ್ಕೆ ಬಿಳಿಯ ಪುಡಿ (ಪೌಡರ್) ಹಾಕಿದ್ದು ಸ್ಪಷ್ಟವಾಗಿ ಕಾಣುತಿತ್ತು. ತುಟಿಗಳು 'ಅಸಹಜವಾಗಿ ಕೆಂಪಾಗಿದ್ದವು. ಅದು ಎಲೆ, ಅಡಿಕೆ (ತಾಂಬೂಲ) ದಿಂದ ಆಗಿರಬೇಕು. ಅಥವಾ ಲಿಪ್‌ಸ್ಟಿಕ್‌ನಿಂದ ಆಗಿರಬೇಕು. ಆಧ್ಯಾತ್ಮಿಕ ವ್ಯಕ್ತಿಗಳಿಗೆ ಇವೆಲ್ಲಾ ನಿಷಿದ್ಧ.

ನಾನು ಜ್ಯೋತಿಯನ್ನು ಹಚ್ಚಿ ಸಮ್ಮೇಳನವನ್ನು ಸಾಂಕೇತಿಕವಾಗಿ ಉದ್ಘಾಟಿಸಿದೆ. ನನ್ನ ಭಾಷಣ ಸಹಜವಾಗಿಯೇ ಇಂಗ್ಲೀಷಿನಲ್ಲಿತ್ತು. ತುಂಬಾ ಯೋಚನೆ ಮಾಡಿ ಹೆಚ್ಚಿನ ಜವಾಬ್ದಾರಿಯಿಂದ ಬರೆದಿದ್ದೆ. ನಾನೊಬ್ಬನೇ ಆ ಬೃಹತ್ ಸಭೆಯಲ್ಲಿ ಬಾಬಾರವರ ಪವಾಡಗಳ ವಿರೋಧಿ, ಆದರೂ ಆ ಲಿಖಿತ ಭಾಷಣವನ್ನು ಯಾವ ವಿಧವಾದ ಅಳುಕೂ ಇಲ್ಲದೇ ಧೈರ್ಯವಾಗಿ, ಸಲೀಸಾಗಿ ಓದಿದೆ. ಅದರ ಕೆಲವು ಮುಖ್ಯ ಭಾಗಗಳನ್ನು ಕೆಳಗೆ ಕೊಡಲಾಗಿದೆ:

ವ್ಯಕ್ತಿಯ ಮೋಕ್ಷವು ಜಗತ್ತಿನ ಹಿತದಲ್ಲಿ ಕಂಡುಬರಬೇಕು. ನಿಜವಾದ ಸುಸಂಸ್ಕೃತನು ಆಧ್ಯಾತ್ಮಿಕ ಗುಣವನ್ನು ಹೊಂದಿರುವನು, ಸಾಮಾನ್ಯ ಜನರ ದುಃಖದ ಬಗ್ಗೆ ಸಹಾನುಭೂತಿಯನ್ನು ತೋರಿಸುವುದಷ್ಟೇ ಅಲ್ಲದೆ ಅವರ ಸಮಸ್ಯೆಗಳನ್ನು ಬಿಡಿಸಲು ಶತಪ್ರಯತ್ನಪಡುತ್ತಾನೆ. ವ್ಯಕ್ತಿಯೊಬ್ಬನು ಎಷ್ಟೇ ಶಿಕ್ಷಣವನ್ನು ಪಡೆದರೂ, ಬಾಹ್ಯವಾಗಿ ಎಷ್ಟೆ ನಯವಾಗಿ ಕಂಡರೂ, ಅವನು ಬಡವರ ಬಗ್ಗೆ, ತುಳಿತಕ್ಕೆ ಸಿಕ್ಕಿದವರ ಬಗ್ಗೆ ಗಮನ ಹರಿಸದಿದ್ದರೆ ಅವನು ಸುಸಂಸ್ಕೃತನಾಗಲಿ ಅಥವಾ ಆಧ್ಯಾತ್ಮವಾದಿಯಾಗಲಿ ಆಗಲು ಸಾಧ್ಯವಿಲ್ಲ. ಭಿಕ್ಷುಕನೊಬ್ಬನನ್ನು ನೋಡಿದರೆ, ಕಸದ ಬುಟ್ಟಿಯಲ್ಲಿ ತುಣುಕು ಆಹಾರಕ್ಕೆ ಮನುಷ್ಯ ಮತ್ತು ನಾಯಿ ಕಿತ್ತಾಡುತ್ತಿರುವುದನ್ನು ನೋಡಿದರೆ, ಈ ಸ್ಥಿತಿಗೆ ಕಾರಣವಾದ ವ್ಯವಸ್ಥೆಯ ಬಗ್ಗೆ ಕೋಪ ಬರದಿದ್ದರೆ ಅವನು ಯಾರೇ ಆದರೂ ಅವನ ಶಿಕ್ಷಣಕ್ಕೆ ಅಥವಾ ಆಧ್ಯಾತ್ಮಿಕತೆಗೆ ಬೆಲೆಯಿಲ್ಲ.

ಆರ್ಥಿಕ ಅಸಮಾನತೆಯ ಬಗ್ಗೆ ಶೋಷಣೆಯ ಬಗ್ಗೆ, ಸಾಮಾಜಿಕ ಅನ್ಯಾಯದ ಬಗ್ಗೆ 'ರಹಸ್ಯ' ಧರ್ಮದ ಬಗ್ಗೆ ಹಾಗೂ ಮೂಢನಂಬಿಕೆಗಳ ಬಗ್ಗೆ ಪ್ರತಿಭಟಿಸುವುದು ಸುಸಂಸ್ಕೃತ ಹಾಗೂ ಆಧ್ಯಾತ್ಮವಾದಿಯ ಕರ್ತವ್ಯವಾಗಬೇಕು.

ಮನುಷ್ಯನ ಇತಿಹಾಸದಲ್ಲಿ ಉದ್ದಕ್ಕೂ ಕಂಡುಬಂದಿರುವ ಪ್ರವೃತ್ತಿ ಶೋಷಣೆ, ನಾಗರೀಕ ಪ್ರಪಂಚದಲ್ಲಿ ಕಂಡುಬರುತ್ತಿರುವ ವ್ಯತ್ಯಾಸ ಸ್ವಲ್ಪ ಬುದ್ಧಿವಂತನು, ಕಮ್ಮಿ ಬುದ್ಧಿವಂತನನ್ನು ಎಲ್ಲ ಹಂತದಲ್ಲಿ ಶೋಷಣೆಗೆ ಗುರಿಪಡಿಸುವುದನ್ನು ಕಾಣಬಹುದು. ದೇವರು ಧರ್ಮ, ಜನಾಂಗ, ಜಾತಿ, ವರ್ಣ, ಸ್ವಹಿತಾಸಕ್ತಿ, ಆರ್ಥಿಕ ಸಿದ್ಧಾಂತಗಳು ಯಾವಾಗಲೂ ಶೋಷಣೆಯ ಸಾಧನಗಳಾಗಿವೆ. ನಮ್ಮ ದೇಶದಲ್ಲಿ ಕಂಡುಬರುತ್ತಿರುವ ದರಿದ್ರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗೆ ಶೋಷಣೆ ಮುಂತಾದವುಗಳೇ ಮುಖ್ಯ ಕಾರಣವಾಗಿದೆ.

ಜಾತಿಯ ಆಧಾರದಿಂದ ರೂಪಿತವಾಗಿರುವ ಸಾಮಾಜಿಕ ಅಸಮಾನತೆ ನಮ್ಮ ದೇಶ ಎದುರಿಸುತ್ತಿರುವ ಮತ್ತೊಂದು ಸಮಸ್ಯೆ. ಹುಟ್ಟಿನ ಆಧಾರದಿಂದ ವ್ಯಕ್ತಿಯನ್ನು ಕೀಳಾಗಿ ಅಥವಾ ಮೇಲಾಗಿ ನೋಡುವುದು, ಅನ್ಯಾಯದ ಪರಮಾವಧಿ. ಈ ರೀತಿಯ ಅತಾರ್ಕಿಕ ಸಂಗತಿಗಳಿಂದ ತುಂಬಿದ ಸಮಾಜವನ್ನು ಶಿಕ್ಷಣ ಪಡೆದವರು ಎಂದೂ ಸಹಿಸಿಕೊಳ್ಳಬಾರದು. ಅವಮಾನೀಯವಾದ ಈ ವ್ಯವಸ್ಥೆಗೆ ಸುಸಂಸ್ಕೃತ ವ್ಯಕ್ತಿ ಬೆಂಬಲ ಕೊಡುವುದು ಸರಿಯಲ್ಲ.

ನನ್ನ ಅಭಿಪ್ರಾಯದಲ್ಲಿ ಆಧ್ಯಾತ್ಮಿಕತೆ ಧರ್ಮದ ತಿರುಳು. ಅದು ಮೂಲಭೂತವಾಗಿ ನೀತಿಸಂಹಿತೆ. ವೈಚಾರಿಕ ಮನೋಧರ್ಮವನ್ನು ಹೊಂದುವುದು, ಆಧ್ಯಾತ್ಮವಾದಿಯಾಗಲು ಸಹಾಯವಾಗುತ್ತದೆ. ವಿಜ್ಞಾನ ಹಾಗೂ ತಂತ್ರಜ್ಞಾನದ ಈ ಯುಗದಲ್ಲಿ ಕೂಡ ಮೂಢನಂಬಿಕೆಗಳಿಗೆ ಪ್ರಾಧಾನ್ಯ ದೊರೆಯುತ್ತಿದೆ. ಅರ್ಥಹೀನವಾದ ಸಂಪ್ರದಾಯಗಳನ್ನು ನಾವು ಈಗಲೂ ಯಾಂತ್ರಿಕವಾಗಿ ಅನುಸರಿಸುತ್ತಿದ್ದೇವೆ. ಜೀವನ ಸಮಸ್ಯೆಗಳನ್ನು ಎದುರಿಸುವಲ್ಲಿ ಶಿಕ್ಷಣ ಪಡೆದವರು, ವಿಜ್ಞಾನಿಗಳು ಮತ್ತಿತರರು ಬಹಳ ಸಂದರ್ಭದಲ್ಲಿ ವೈಚಾರಿಕ ದೃಷ್ಟಿಕೋನವನ್ನು ವ್ಯಕ್ತಪಡಿಸುವುದಿಲ್ಲ. ತತ್ವಜ್ಞಾನದ ಪ್ರಾಧ್ಯಾಪಕ ಬದುಕಿನಲ್ಲಿ ತತ್ವಜ್ಞಾನಿಕ ಆಗಿರುವುದು ಅಪರೂಪ. ಇದೇ ರೀತಿ ವಿಜ್ಞಾನದ ಅಧ್ಯಾಪಕ ಅಥವಾ ವಿಜ್ಞಾನಿ ಕೂಡ ಬದುಕಿನ ಸಮಸ್ಯೆಗಳನ್ನು ಎದುರಿಸುವಾಗ ವೈಜ್ಞಾನಿಕ ಮನೋಧರ್ಮವನ್ನು ವ್ಯಕ್ತಪಡಿಸುವುದು ಅಪರೂಪ. ಪ್ರಯೋಗಶಾಲೆಯಲ್ಲಿ ವಿಚಾರವಾದಿಯಾದ ವಿಜ್ಞಾನಿ ದಿನನಿತ್ಯದ ಬದುಕಿನ ಸಮಸ್ಯೆಗಳನ್ನು ಎದುರಿಸುವಲ್ಲಿನ ವಿಚಾರವನ್ನು ಪೂರ್ತಿಯಾಗಿ ಮರೆಯುತ್ತಾನೆ. ನಮಗೆ ಗೊತ್ತಿರುವಂತೆಯೇ ಅನೇಕ ವಿಜ್ಞಾನಿಗಳು ಹಸ್ತಸಾಮುದ್ರಿಕ ಹಾಗೂ ಜ್ಯೋತಿಷ್ಯದ ಬಗ್ಗೆ ಅಪಾರ ನಂಬಿಕೆಯನ್ನು ಹೊಂದಿರುತ್ತಾರೆ. ಕೆಲವು ವಿಜ್ಞಾನಿಗಳು ಅತೀಂದ್ರಿಯ ಶಕ್ತಿಯನ್ನು ಹೊಂದಿರುವೆನೆಂದು ಹೇಳಿಕೊಳ್ಳುತ್ತಿರುವವರನ್ನು ಕುರುಡಾಗಿ ಅನುಸರಿಸುವುದುಂಟು.


ಮೂಢನಂಬಿಕೆಗಳು - ಪವಾಡಗಳು

ನಮ್ಮ ದೇಶದಲ್ಲಿ ಮೂಢನಂಬಿಕೆಗಳು ಸಾಕೆನಿಸುವಷ್ಟು ಇವೆ. ಭಯ ಮತ್ತು ಅಜ್ಞಾನಗಳೇ ಮೂಢನಂಬಿಕೆಗಳಿಗೆ ಮೂಲಕಾರಣ. ಇವು ಆತ್ಮವಿಶ್ವಾಸವನ್ನು ನಾಶ ಮಾಡುವುದಲ್ಲದೆ, ಸ್ವತಂತ್ರ ಆಲೋಚನೆಗೆ ಧಕ್ಕೆ ತರುತ್ತದೆ. ಆಧ್ಯಾತ್ಮಿಕತೆಗೆ ಬೇಕಾದ ಮೊದಲ ಸಿದ್ಧತೆ ನಿರ್ಭಯ. ಹೇಡಿಯು ಎಂದಿಗೂ ನೀತಿಯನ್ನು ಹೊಂದಲಾರ ಎಂಬುದು ಗಾಂಧೀಜಿಯವರ ಅಭಿಪ್ರಾಯ. ನಮಗೆ ತಿಳಿದಂತೆ ಅಭೀಃ ಎಂಬುದು ಉಪನಿಷತ್ತಿನ ಮುಖ್ಯ ಸೂತ್ರ. ಸ್ವಾಮಿ ವಿವೇಕಾನಂದರು ಹೇಳುವಂತೆ ಮೂಢನಂಬಿಕೆ ಮನುಷ್ಯನ ದೊಡ್ಡ ಶತ್ರು. ಮತಾಭಿಮಾನ ಅದಕ್ಕಿಂತಲೂ ಕೀಳು. ಪರಿಶುದ್ಧನಾಗಿರು, ಮೂಢನಂಬಿಕೆಗಳನ್ನು ತೊರೆದು ಪ್ರಕೃತಿಯ ಮಾಧುರ್ಯವನ್ನು ಗುರುತಿಸು. ಆದರೆ ಧರ್ಮದ ಅಂತರಂಗಿಕ, ವಾಸ್ತವಿಕ, ಆಧ್ಯಾತ್ಮಿಕ ಸಾರವನ್ನು ಮರೆತು ಅದರ ಬಾಹ್ಯರೂಪವನ್ನು ಕಪಿಮುಷ್ಟಿಯಿಂದ ಒತ್ತಿಹಿಡಿದು, ಎಂದೆಂದಿಗೂ ಬಿಡದ ಮಾನವ ಮತ್ತು ದೇಶಕ್ಕೆ ಧಿಕ್ಕಾರ ಎಂಬುದು ಕೂಡ ವಿವೇಕಾನಂದರ ಅಭಿಪ್ರಾಯ.

ನಾವು ನಿಜವಾಗಿ ಧರ್ಮವನ್ನು ಆಚರಿಸಲು ಇಷ್ಟಪಡುವುದಿಲ್ಲ, ಆದರೆ ನಮಗೆ ಧರ್ಮದ ಫಲಬೇಕು. ಈ ಅಂಶವನ್ನು ನೂರಾರು ವರ್ಷಗಳ ಹಿಂದೆ ವಿದುರನು ದೃತರಾಷ್ಟ್ರನಿಗೆ ಹೇಳಿದ್ದಾನೆ.

ಧರ್ಮಸ್ಯ ಫಲಮಿಚ್ಛಂತಿ
ಧರ್ಮಂ ನೇಚ್ಛಂತಿ ಮಾನವಾಃ

ಇದು ಈಗಲೂ ನಿಜವಾಗಿದೆ. ಇದೇ ರೀತಿ ವಿಜ್ಞಾನದ ಫಲಗಳನ್ನು ಬಯಸುವ ನಾವು ಅದರ ಮೂಲ ಗುಣಗಳನ್ನು ಇಷ್ಟಪಡುವುದಿಲ್ಲ. ಜೆ.ಡಬ್ಲ್ಯು.ಎಸ್. ಸಲುಲಿವಾನ್ ಅವರು ತಮ್ಮ 'ವಿಜ್ಞಾನದ ಮಿತಿಗಳು' ಎಂಬ ಪುಸ್ತಕದಲ್ಲಿ ವಿಜ್ಞಾನದ ಫಲಗಳ ಬಗ್ಗೆ ಗಮನ ಮತ್ತು ಗೌರವ ಸಂದಿದೆಯೇ ಹೊರತು ಅದರ ಮನೋಧರ್ಮವು ಈ ಆಧುನಿಕ ಜಗತ್ತಿನಲ್ಲಿ ಜನಪ್ರಿಯವಾಗಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗಿದೆ. ಆದರೂ ವಿಜ್ಞಾನದ ಪ್ರಧಾನ ಮೌಲ್ಯವು ಅದರ ಮೂಲಗುಣದಲ್ಲಿಯೇ ಅಡಗಿದೆ ಎಂದು ಧೈರ್ಯವಾಗಿ ಹೇಳಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.



ಬೆಂಗಳೂರು ವಿ.ವಿ.ಕುಲಪತಿಗಳಾಗಿ ಪ್ರಮಾಣಪತ್ರ ಸ್ವೀಕರಿಸುತ್ತಿರುವ ಹೆಚ್.ಎನ್.

ದೇಶದ ಅನೇಕ ಭಾಗಗಳಿಂದ ಇಷ್ಟೊಂದು ಜನ ಈ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಯ ಶಿಬಿರದ ಪ್ರಯೋಜನವನ್ನು ಪಡೆದುಕೊಳ್ಳಲು ಬಂದಿರುವುದು ತೃಪ್ತಿಪಡುವ ಸಂಗತಿ. ಈ ಒಂದು ತಿಂಗಳ ಉದ್ದೇಶಿತ ತರಬೇತಿಯ ನಂತರ ಭಾಗವಹಿಸಿದವರ ಮನೋಧರ್ಮ ಯಾವ ರೀತಿಯಲ್ಲಿ ಇರುತ್ತದೆಂಬುದು ಮುಖ್ಯ. ಬಹಳ ಜನರು ದೇವಸ್ಥಾನಕ್ಕೆ ಹೋಗುವುದು ಪುಣ್ಯಕ್ಷೇತ್ರಕ್ಕೆ ಸಂದರ್ಶನ ಮಾಡುವುದು, ತಾತ್ವಿಕ ಚರ್ಚೆಯಲ್ಲಿ ಭಾಗವಹಿಸುವುದು, ಪ್ರವಚನ ಕೇಳುವುದು, ಬುದ್ಧ ಜಯಂತಿ, ಬಸವ ಜಯಂತಿ, ಗಾಂಧಿಜಯಂತಿಗಳಲ್ಲಿ ಭಾಗವಹಿಸುವುದು ಯಾಂತ್ರಿಕವಾಗಿ, ಅವುಗಳು ಅವರ ಜೀವನದ ಮೇಲೆ ಯಾವುದೇ ಪ್ರಭಾವವನ್ನು ಬೀರದೇ ಇರುವುದು ವ್ಯಥೆ ಪಡುವ ವಿಚಾರ. ಇದು ಒಂದು ಗೌಣ ಪವಾಡವಾಗಿದ್ದು, ಯಕ್ಷ ಪ್ರಶ್ನೆಯಾಗಿದೆ. ಹೀಗೆ ಮೂಢನಂಬಿಕೆ, ಪವಾಡ, ಮುಂತಾದ ಅವೈಜ್ಞಾನಿಕ ವಿಷಯಗಳ ಬಗ್ಗೆ ನನ್ನ ವಿರೋಧ ಬಾಬಾರವರ, ಅವರ ಶಿಷ್ಯರಲ್ಲಿ ಅತಿರಥ ಮಹಾರಥರಾದ ಭಗವಂತಂ, ಗೋಕಾಕ್ ಮುಂತಾದವರ ಮುಂದೆಯೇ ನಡೆಯಿತು. ಯಾರೂ ಚಪ್ಪಾಳೆ ಹೊಡೆಯಲಿಲ್ಲ. ನಾನು ಕರೆದುಕೊಂಡು ಹೋಗಿದ್ದ ನನ್ನ ಸ್ನೇಹಿತರೂ ಕೈಕೊಟ್ಟರು! ಮುಂದಿನ ಸಾಲಿನಲ್ಲಿ ಅನೇಕ ಮಂದಿ ವಿದೇಶೀಯರು, ಹೆಚ್ಚಿಗೆ ಹೆಂಗಸರಿದ್ದರು. ಅವರ ಮುಖ, ಕಣ್ಣುಗಳು ದುಗುಡ ಕಾತರವನ್ನು ಸೂಚಿಸುತ್ತಿದ್ದವು. ನನ್ನ ಭಾಷಣವಾದ ಮೇಲೆ ಬಾಬಾರವರು ಸುಶ್ರಾವ್ಯವಾಗಿ ಭಕ್ತಿಗೀತೆಗಳನ್ನು ಹಾಡಿದರು. ಅವರಿಗೆ ಒಳ್ಳೆಯ ಕಂಠ. ಜೊತೆಗೆ ಸಂಗೀತಕ್ಕೆ ಹೊಂದುವ ಭಾಷೆ, ತೆಲುಗು. ನನಗಂತೂ ತುಂಬಾ ಇಷ್ಟವಾಯಿತು. ಎಷ್ಟು ಬೇಕೋ ಅಷ್ಟು, ಉಪ್ಪು ಹುಳಿ ಇಲ್ಲದ ಔಪಚಾರಿಕ ವಂದನಾರ್ಪಣೆಯನ್ನು ಭಗವಂತಂ ಮಾಡಿದರು. ಅವರ ಅಸಮಾಧಾನ ಅವರು ವಂದನಾರ್ಪಣೆ ಮಾಡುವ ಧಾಟಿಯಲ್ಲಿಯೇ ಎದ್ದು ಕಾಣುತ್ತಿತ್ತು.

ಐಸ್‌ಕ್ರೀಂ ಬಂದದ್ದು

ಆಮೇಲೆ ಅಲ್ಲಿದ್ದವರಿಗೆಲ್ಲಾ ಜಾಯ್ ಐಸ್ ಕ್ರೀಂ ಹಂಚಿದರು.ಇದು 'ಸೃಷ್ಟಿಸಿದ್ದಲ್ಲ' ಪಕ್ಕದಲ್ಲಿಯೇ ಇದ್ದ ಜಾಯ್ ಐಸ್ ಕ್ರೀಂ ಫ್ಯಾಕ್ಟರಿಯ ಮಾಲೀಕರ ಕಾಣಿಕೆ. ಅವರು ಬಾಬಾ ರವರ ಶಿಷ್ಯರು. ಒಂದು ಐಸ್ ಕ್ರೀಂ ಅನ್ನು ಬಾಬಾರವರೇ ನನಗೆ ಕೊಡಲು ಪ್ರಯತ್ನಿಸಿದರು. ನಾನು 'ಒದ್ದು ಸ್ವಾಮಿಜಿ, ನೇನು ತಿನೇಲೇದು (ಬೇಡ ಸ್ವಾಮಿ ನಾನು ತಿನ್ನುವುದಿಲ್ಲ)' ಅಂದೆ 'ಮೀಕಿ ತೆಲುಗು ವಸ್ತುಂದಾ (ನಿಮಗೆ ತೆಲುಗು ಬರುತ್ತಾದೆಯಾ)' ಅಂದರು. 'ಔನು ಸ್ವಾಮಿಜಿ, ನಾ ಮಾತೃಭಾಷಾನೂ ತೆಲುಗೇ' ಅಂದೆ. 'ಔನಾ' (ಹೌದಾ) ಅಂದರು. ಈ ಭಗವಂತನಿಗೆ, ಸರ್ವಜ್ಞನಿಗೆ ನನ್ನ ಮಾತೃಭಾಷೆ ತೆಲುಗು ಎಂದು ಗೊತ್ತಾಗಲಿಲ್ಲ ಅನ್ನುವುದರಿಂದ ನನಗೆ ಮೊದಲಿನಿಂದಲೂ ಇದ್ದ ಅನುಮಾನಗಳಿಗೆ ಪುಷ್ಟಿ ಸಿಕ್ಕಿತು. ಆ ಸಂದರ್ಭದಲ್ಲಿ ನನಗೇನಾದರೂ ಅವರು 'ಸೃಷ್ಟಿ' ಮಾಡಿ ಕೊಡಬಹುದೆಂದು ನಿರೀಕ್ಷಿಸಿದ್ದೆ. ಭಾಷಣ ಕೇಳಿದ ಮೇಲೆ ನನ್ನಂತಹ ಅಪಾತ್ರನಿಗೆ ವಸ್ತುವನ್ನು 'ಸೃಷ್ಟಿ' ಮಾಡಿ ಕೊಡುವುದು ಸಾಧುವಲ್ಲ ಅಂತ ಸುಮ್ಮನಾಗಿರಬೇಕು. ಏನಾದರೂ ಒಂದು ವಸ್ತುವನ್ನು ಕೊಟ್ಟಿದ್ದರೆ ಅದನ್ನು ನನ್ನ ಅಂಗೈನಲ್ಲಿಟ್ಟುಕೊಂಡು ಈ ನಿಮ್ಮ ವಸ್ತು ಈಗ ಮಾಯವಾಡಿ ಎಂದು ಬಾಬಾರವರನ್ನು ಕೇಳಬೇಕೆಂದು ಯೋಚಿಸಿದ್ದೆ. ಸೃಷ್ಟಿ ಮಾಡುವ ಶಕ್ತಿ ಇದ್ದವರಿಗೆ ಅದನ್ನು ನಾಶ ಮಾಡುವ, ಮಾಯ ಮಾಡುವ ಶಕ್ತಿಯೂ ಇರಬೇಕು. ಬಾಬಾರವರು ಆ ಅವಕಾಶವನ್ನು ಕಳೆದು ಕೊಂಡರು. ನನ್ನನ್ನು ಕರೆಸಿದ್ದ ಉದ್ದೇಶ, ಲೆಕ್ಕಾಚಾರ ವೆಲ್ಲ ತಲೆಕೆಳಗಾಯಿತು. ಬಾಬಾರವರನ್ನು ಅವರ ಕೆಲವು ಚಟುವಟಿಕೆಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ ಕೆಲವು ಅಂಶಗಳು ಎದ್ದು ಕಾಣುತ್ತವೆ. ಮುಖ್ಯವಾಗಿ ಅವರು ಉನ್ನತಸ್ಥಾನದಲ್ಲಿರುವವರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಅನೇಕ ವಿಧಗಳಿಂದ ಪ್ರಯತ್ನಿಸುತ್ತಾರೆ. ನನ್ನನ್ನು ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನಿಸಿದ್ದರು. ಆ ಪ್ರಯತ್ನ ವಿಫಲವಾಯಿತು. ನಾನು ಗಟ್ಟಿ ಪಿಂಡ ಅಂತ ಆಮೇಲೆ ಗೊತ್ತಾಯಿತು.

ಕಾರ್ಯಕ್ರಮ ಮುಗಿದ ಮೇಲೆ ನನ್ನನ್ನು ಆಹ್ವಾನಿಸಲು ಸಲಹೆಕೊಟ್ಟ ಗೋಕಾಕರನ್ನು ತರಾಟೆಗೆ ತೆಗೆದುಕೊಂಡರಂತೆ. ಗೋಕಾಕರು ಹೇಗೆ ಸಮರ್ಥಿಸಿಕೊಂಡರೋ ತಿಳಿಯದು. ಈ ನನ್ನ ಸತ್ಯಸಾಯಿಬಾಬಾರವರೊಂದಿಗೆ ಆದ ಭೇಟಿ ಸಾರ್ವಜನಿಕರಿಗೆ ಗೊತ್ತಿಲ್ಲ. ಎರಡು ವರ್ಷವಾದ ಮೇಲೆ ಪವಾಡಗಳ ಮತ್ತು ಮೂಢನಂಬಿಕೆಗಳ ವಿರುದ್ಧ ವ್ಯವಸ್ಥಿತ ಧಾಳಿಯನ್ನು ನಡೆಸಲು ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಅದು ನಿರ್ವಹಿಸಿದ ಕಾರ್ಯಗಳನ್ನು ಇನ್ನೊಂದು ಲೇಖನದಲ್ಲಿ ಬರೆದಿದ್ದೇನೆ.

('ಹೋರಾಟದ ಹಾದಿ' ಗ್ರಂಥದಿಂದ)

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH